# ಅಧ್ಯಕ್ಷರ ನುಡಿ



ಕನ್ನಡ ಸಾಹಿತ್ಯ ಪರಿಷತ್ತು ಅಂದಿನ ಮೈಸೂರು ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ **೧೯೧೫ರಲ್ಲಿ** ಸ್ಥಾಪನೆಗೊಂಡಿತು. ಆರಂಭದಲ್ಲೇ ಕನ್ನಡ ಸಾಹಿತ್ಯ ಪರಿಷತ್ತು ನಡೆಯಬೇಕಾದ ಮಾರ್ಗವನ್ನು ಸೂಚಿಸಿ, ಮಾಡಬೇಕಾದ ಕರ್ತವ್ಯಗಳನ್ನು ಸೂಚಿಸಿ ನಿಯಮ-ನಿಬಂಧನೆಗಳನ್ನು ರಚಿಸಲಾಯಿತು.

ಒಂದು ಶತಮಾನಕ್ಕೂ ಹೆಚ್ಚು ಸಮಯದಲ್ಲಿ ಪರಿಷತ್ತು ಅನೇಕ ವಿಧದ ಕಾರ್ಯಕಲಾಪಗಳನ್ನು ಜರುಗಿಸಿದ್ದು, ಜನಮನ್ನಣೆಯನ್ನು ಗಳಿಸುತ್ತ ಬಂದಿದೆ. ಅಂದು ರಚಿತವಾದ ನಿಯಮ, ನಿಬಂಧನೆಗಳಿಗೆ ಇಂದಿನವರೆಗೆ ಪರಿಷತ್ತು ಪ್ರಕಟಿಸಿರುವ ಹಿಂದಿನ ನಿಬಂಧನೆ ಪುಸ್ತಕದ ಮುಖಪುಟದಲ್ಲಿ ಮುದ್ರಿಸಿರುವಂತೆ ಇಲ್ಲಿಯವರೆಗೆ ಆರು ಬಾರಿ ತಿದ್ದುಪಡಿಗಳಾಗಿರುತ್ತವೆ. ೧೫-೦೩-೨೦೧೮ರಂದು ಉಡುಪಿ ಜಿಲ್ಲೆಯ ಕೋಟ ಗ್ರಾಮದಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕಾರವಾದ ತಿದ್ದುಪಡಿ ಆರನೆಯದಾಗಿರುತ್ತದೆ.

ಪ್ರಸ್ತುತ ಕಾಲಘಟ್ಟಕ್ಕೆ ತಕ್ಕಂತೆ **'ಅತ್ಯಾಧುನಿಕ ತಂತ್ರಜ್ಞಾನ'**ವನ್ನೂ ಸಹ ಅಳವಡಿಸಿ ಕೊಳ್ಳುವುದು ಅನಿವಾರ್ಯವಾಗಿರುವುದರಿಂದಲೂ, ಪರಿಷತ್ತನ್ನು **'ಜನಸಾಮಾನ್ಯರ ಪರಿಷತ್ತನ್ನಾಗಿ'** ಮಾಡುವ ಸದುದ್ದೇಶದಿಂದಲೂ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಪರಿಷತ್ತಿಗೆ ಪ್ರಸ್ತುತ ಐದು ವರ್ಷಗಳ ಈ ಅವಧಿಯಲ್ಲಿ **ಒಂದು ಕೋಟಿ ಸದಸ್ಯತ್ವವನ್ನು** ಹೊಂದುವ ದೃಷ್ಟಿಯಿಂದ **ಶ್ರೀಸಾಮಾನ್ಯನೂ ಸಹ ಸದಸ್ಯತ್ವ ಪಡೆಯಲು** ಅನುಕೂಲವಾಗುವಂತೆ ಸದಸ್ಯತ್ವ ಶುಲ್ಕವನ್ನು ಕಡಿತಗೊಳಿಸಬೇಕೆಂದು ಹಾಗೂ ಬದಲಾದ ಸನ್ನಿವೇಶಗಳಿಗೆ ಅನುಗುಣವಾಗಿ ಹಾಗೂ ಅಧಿಕಗೊಂಡಿರುವ ಜನಸಂಖ್ಯೆಗೆ ಅನುಗುಣವಾಗಿ ಅನೇಕ ಹೊಸ ವಿಷಯಗಳನ್ನು ತಿದ್ದುಪಡಿಯ ಮೂಲಕ ಪರಿಷತ್ತಿನ ಧ್ಯೇಯೋದ್ದೇಶಗಳಿಗೆ ಹಾಗೂ ಅವುಗಳನ್ನು ಅನುಷ್ಠಾನಗೊಳಿಸಲು ಆಧಾರವಾಗಿ ಇರಬೇಕಾದ ನಿಯಮ, ನಿಬಂಧನೆಗಳಿಗೆ ತಿದ್ದುಪಡಿ ತರುವುದು ಅವಶ್ಯವೆಂದು **ದಿನಾಂಕ ೦೪-೧೨-೨೦೨೧ ರಂದು ಜರುಗಿದ ಕಾರ್ಯಕಾರಿ ಸಮಿತಿ** ಸಭೆಯು ಭಾವಿಸಿದ್ದರಿಂದ, ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆಗಳಿಗೆ ತಿದ್ದುಪಡಿಗಳನ್ನು ತರಬೇಕೆಂದು ಸರ್ವಾನುಮತದಿಂದ ಸಭೆಯು ನಿರ್ಣಯಿಸಿ, ಸಂವಿಧಾನ ಹಾಗೂ ಸಂಬಂಧಿತ ಕಾನೂನುಗಳ ಚೌಕಟ್ಟಿನಲ್ಲಿ ಯಾವ ರೀತಿ ತಿದ್ದುಪಡಿ ತರಬೇಕು ಎನ್ನುವ ಬಗ್ಗೆ ಸಲಹೆ-ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡಲು, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೊಟ್ಟ ಮೊದಲನೆಯ ಬಾರಿಗೆ ಕನ್ನಡದಲ್ಲಿ ತೀರ್ಪು ನೀಡಿ

ದಾಖಲೆ ಸೃಷ್ಟಿಸಿದ ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ **ನ್ಯಾಯಮೂರ್ತಿಗಳಾದ ಅರಳಿ ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ** ೧೧ ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು.

ನಿಬಂಧನೆ ತಿದ್ದುಪಡಿ ಸಮಿತಿಯು **ದಿನಾಂಕ ೯-೧೨-೨೦೨೧, ೧೭-೧೨-೨೦೨೧, ೨೮-೧೨-೨೦೨೧, ೩೯-೧೨-೨೦೨೧, ೦೯-೦೨-೨೦೨೨** ಹಾಗೂ **೧೦-೦೨-೨೦೨೨** ರಂದು ಒಟ್ಟು **ಆರು ಬಾರಿ ಸಭೆ ಸೇರಿ,** ಪ್ರತಿ ದಿನ ಪ್ರಾರಂಭದಿಂದ ಕೊನೆಯವರೆಗೆ ಪ್ರಸ್ತುತ ಧ್ಯೇಯೋದ್ದೇಶಗಳನ್ನು ಹಾಗೂ ನಿಯಮ-ನಿಬಂಧನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಚರ್ಚಿಸಿ, ಉಳಿಸಿಕೊಳ್ಳಬೇಕಾದವುಗಳನ್ನು ಉಳಿಸಿಕೊಂಡು, ಹೊಸದಾಗಿ ಸೇರಿಸಬೇಕಾದವುಗಳನ್ನು ಸೇರಿಸಿ, ಸರ್ವಾನುಮತದಿಂದ ನಿರ್ಣಯ ಕೈಗೊಂಡು ಉದ್ದೇಶಿತ ತಿದ್ದುಪಡಿಗಳ ಕರಡೊಂದನ್ನು ತಯಾರಿಸಿಕೊಟ್ಟಿತು.

ಉದ್ದೇಶಿತ ತಿದ್ದುಪಡಿಗಳನ್ನೊಳಗೊಂಡ ಕರಡನ್ನು ಅಧ್ಯಯನ ಮಾಡಿ ಈ ಸಂಬಂಧ ತಮ್ಮ ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನೀಡಲೆಂದು ನಾಡಿನ ಸಾಹಿತಿಗಳು, ಸಂಸ್ಕೃತಿ ಚಿಂತಕರು, ಜಾನಪದ ವಿದ್ವಾಂಸರು, ಕಲಾವಿದರು, ಕನ್ನಡಪರ ಹೋರಾಟಗಾರರು ಮುಂತಾದವರನ್ನು ಒಳಗೊಂಡಂತೆ ಗಣ್ಯ ವ್ಯಕ್ತಿಗಳ **'ಸಮಾಲೋಚನಾ ಸಭೆ'**ಯನ್ನು ದಿನಾಂಕ ೧೭-೦೨-೨೦೨೨ರಂದು ನಡೆಸಲಾಯಿತು. ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ ಎಲ್ಲರೂ ಬದಲಾದ ಸಂದರ್ಭ, ಸನ್ನಿವೇಶ ಹಾಗೂ ನಾಡಿನ ಬೆಳವಣಿಗೆಯ ಹಿನ್ನೆಲೆಯಲ್ಲಿ ಮತ್ತು ಪರಿಷತ್ತನ್ನು ಜನಪರವಾಗಿಸುವ ದಿಶೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪರಿಷತ್ತಿನ ಧ್ಯೇಯೊದ್ದೇಶಗಳ ಹಾಗೂ ನಿಬಂಧನೆಗಳ ತಿದ್ದುಪಡಿಯಾಗುವುದು ಉಚಿತವಾದುದು ಹಾಗೂ ಅವಶ್ಯವಾದುದು ಎಂಬುದಾಗಿ ಸರ್ವಸಮ್ಮತ ಅಭಿಪ್ರಾಯವನ್ನು ವ್ಯಕ್ತಪಡಿಸುವುದರೊಂದಿಗೆ ಉದ್ದೇಶಿತ ತಿದ್ದುಪಡಿಗಳಿಗೆ ಕೆಲವೊಂದು ಮಾರ್ಪಾಡುಗಳನ್ನು ಸೂಚಿಸಿದರು. ಆ ಸಭೆಯಲ್ಲಿ ವ್ಯಕ್ತವಾದ ಸೂಚನೆಗಳಿಗೆ ಅನುಗುಣವಾಗಿ ಕರಡು ಸಮಿತಿಯು ನಿಬಂಧನೆಗಳ ಕರಡನ್ನು ಪರಿಷ್ಕರಿಸಿ, ಪರಿಷ್ಕೃತ ಕರಡನ್ನು ಸಿದ್ಧಪಡಿಸಿಕೊಟ್ಟಿತು.

ಅನಂತರ ಜರುಗಿದ ಪರಿಷತ್ತಿನ **ಕಾರ್ಯಕಾರಿ ಸಮಿತಿಯ ಸಭೆ**ಗಳಲ್ಲಿ ಪರಿಷ್ಕೃತ ಕರಡನ್ನು ಕೂಲಂಕಷವಾಗಿ ಪರಿಶೀಲಿಸಿ, ವಿಸ್ತೃತವಾಗಿ ಚರ್ಚಿಸಿ ಕೆಲವೊಂದು ಬದಲಾವಣೆಗಳನ್ನು ಸೂಚಿಸುವುದರೊಂದಿಗೆ ಒಪ್ಪಿ, ಸಕಲ ಸದಸ್ಯರ ವಿಶೇಷ ಸಭೆಯಲ್ಲಿ ಮಂಡಿಸಲು ಸಭೆ ಅನುಮೋದನೆಯನ್ನು ನೀಡಿತು.

ಅದರಂತೆ, ದಿನಾಂಕ ೦೧-೦೫-೨೦೨೨ ರಂದು ಭಾನುವಾರ ಮಧ್ಯಾಹ್ನ ೨.೦೦ ಗಂಟೆಗೆ ಹಾವೇರಿ ಜಿಲ್ಲೆಯ, ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆಯ ಶ್ರೀ ಕನಕ ಕಲಾಭವನದಲ್ಲಿ **'ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ವಿಶೇಷ ಸಭೆ'**ಯನ್ನು ನಿಯಮಾನುಸಾರ ಜರುಗಿಸಲಾಯಿತು. **ಸಭೆಯಲ್ಲಿ ಹಾಜರಿದ್ದ ಶೇಕಡಾ ೯೯.೯ರಷ್ಟು ಸದಸ್ಯರು ಉದ್ದೇಶಿತ ತಿದ್ದುಪಡಿಗೆ ಅನುಮೋದನೆ ನೀಡುವ ಮೂಲಕ ಈ ಕ್ರಾಂತಿಕಾರಿ ಬದಲಾವಣೆಗೆ ಒಪ್ಪಿಗೆ ನೀಡಿದರು.**

ಇದೀಗ ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶಗಳು ಹಾಗೂ ನಿಯಮ, ನಿಬಂಧನೆಗಳನ್ನು ಕೆಲವು ಸಣ್ಣಪುಟ್ಟ ಮಾರ್ಪಾಡುಗಳೊಂದಿಗೆ **ಸಹಕಾರ ಇಲಾಖೆಯು ದಿನಾಂಕ ೩೦-೦೬-೨೦೨೨ರಂದು ಅಂಗೀಕರಿಸಿ, ನೋಂದಾಯಿಸಿ ಕೊಟ್ಟಿದೆ.** ಈ ಮಹತ್ವದ ಕಾರ್ಯಕ್ಕೆ ಅಭೂತಪೂರ್ವ ಬೆಂಬಲ ನೀಡಿದ್ದಕ್ಕಾಗಿ ಮೊದಲು **ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರಿಗೆ** ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಒಂದು ಶತಮಾನವನ್ನು ಯಶಸ್ವಿಯಾಗಿ ಪೂರೈಸಿರುವ ಪರಿಷತ್ತಿನ ಅಸ್ತಿತ್ವಕ್ಕೆ, ಮೂಲ ಆಶಯಕ್ಕೆ, ಧ್ಯೇಯೋದ್ದೇಶಗಳಿಗೆ, ತತ್ತ್ವಗಳಿಗೆ, ನಿಬಂಧನೆಗಳಿಗೆ ಯಾವುದೇ ರೀತಿಯಲ್ಲಿ ವ್ಯತ್ಯಯ ಉಂಟಾಗದಂತೆ; ಬದಲಾಗಿ, ಅವುಗಳನ್ನು ವಿಸ್ತರಿಸುವ ಹಾಗೂ ಪರಿಷತ್ತಿನ ಗೌರವ, ಘನತೆ ವೃದ್ಧಿಗೊಳ್ಳುವ ನಿಟ್ಟಿನಲ್ಲಿ ಸಲಹಾ ಸಮಿತಿ ಅವುಗಳಿಗೆ ತಿದ್ದುಪಡಿಗಳನ್ನು ಸೂಚಿಸಿದೆ. ಈ ಮಹತ್ತರ ಕೆಲಸವನ್ನು ನೆರವೇರಿಸಿಕೊಟ್ಟ ಸಮಿತಿಯ ಅಧ್ಯಕ್ಷರಾದ **ನ್ಯಾಯಮೂರ್ತಿ ಅರಳಿ ನಾಗರಾಜ ಹಾಗೂ ಸಮಿತಿಯ ಎಲ್ಲ ಸದಸ್ಯರಿಗೆ** ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನಿಬಂಧನೆ ತಿದ್ದುಪಡಿಗಳಿಗೆ ತಮ್ಮ ಬೆಂಬಲವನ್ನು ಸೂಚಿಸಿ, ಪರಿಷತ್ತನ್ನು ಹೊಸ ದಿಕ್ಸೂಚಿಯತ್ತ ಮುನ್ನಡೆಸಲು ಸಹಕಾರ ನೀಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ **ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೆ,** ಪರಿಷತ್ತಿನ ಗೌರವ ಕಾರ್ಯದರ್ಶಿ **ಶ್ರೀ ನೇ.ಭ. ರಾಮಲಿಂಗಶೆಟ್ಟಿ,** ಗೌರವ ಕೋಶಾಧ್ಯಕ್ಷರಾದ **ಶ್ರೀ ಬಿ.ಎಂ. ಪಟೇಲ್‌ಪಾಂಡು** ಅವರಿಗೆ **ಹಾಗೂ ಸಿಬ್ಬಂದಿಗೆ** ಮತ್ತು ತಿದ್ದುಪಡಿಯ ಈ ಮಹತ್ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಮುಂದಿನ ಚುನಾವಣೆಗಳು ೨೦೨೬ನೆಯ ಇಸವಿಯಲ್ಲಿ ನಡೆಯಲಿರುವುದರಿಂದ ಪರಿಷತ್ತಿನ ಮುಂಬರುವ ಚುನಾವಣೆಗಳಿಗೆ ಸಂಬಂಧಿಸಿದಂತೆ, ಮತದಾನ ಕೇಂದ್ರಗಳ ಸ್ಥಾಪನೆಯ ಅಗತ್ಯವಿಲ್ಲದೆ, ಸರ್ಕಾರದ ಮೇಲೆ ಭಾರವನ್ನು ಹಾಕದೇ, ಶ್ರಮರಹಿತವಾದ, ಮತದಾರರು ಸುಲಭವಾಗಿ ಮನೆಯಲ್ಲಿಯೇ ಕುಳಿತು ಓಟಿಪಿ ಆಧಾರದ ಮೇಲೆ ಆ್ಯಪ್ ಮೂಲಕ ಚುನಾಯಿಸಲು ಬೇಕಾದ ಅನುಕೂಲಗಳೊಂದಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸುವುದು. ಆ ಮೂಲಕ ಕನ್ನಡ ಸಾಹಿತ್ಯ ಪರಿಷತ್ತಿಗೆ ಹಾಗೂ ಸರ್ಕಾರಕ್ಕೆ ಚುನಾವಣಾ ವೆಚ್ಚ ತಗ್ಗಿಸುವುದು, ಚುನಾವಣಾ ಅಕ್ರಮಕ್ಕೆ ಕಡಿವಾಣ, ಪಾರದರ್ಶಕ ಚುನಾವಣೆ ಸೇರಿದಂತೆ ಕ್ರಾಂತಿಕಾರಿ ಬದಲಾವಣೆಗಳನ್ನು ೨೦೨೫ರಲ್ಲಿ ಜಾರಿಗೆ ತರಲು ನಿಬಂಧನೆ ತಿದ್ದುಪಡಿ ಸಮಿತಿಯೊಂದಿಗೆ ಚರ್ಚಿಸಿ ಮುಂದಿನ ಕ್ರಮವಹಿಸಲಾಗುತ್ತಿದೆ. ಚುನಾವಣೆಯ ಕುರಿತಾದ ನಿಬಂಧನೆಗಳ ತಿದ್ದುಪಡಿಗಳಿಗೂ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಗೌರವಾನ್ವಿತ ಸದಸ್ಯರು ಇದೇ ರೀತಿ ಅಭೂತಪೂರ್ವ ಬೆಂಬಲ ನೀಡುವಿರಿ ಎಂದು ನಂಬಿದ್ದೇನೆ.

**(ನಾಡೋಜ ಡಾ. ಮಹೇಶ ಜೋಶಿ)**
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು (ನೋಂದಾಯಿತ)

**ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮**

---

## ದಿನಾಂಕ ೦೧-೦೫-೨೦೨೨ರಂದು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ವಿಶೇಷ ಸಭೆಯಲ್ಲಿ ಅನುಮೋದನೆಗೊಂಡ

## ಧ್ಯೇಯೋದ್ದೇಶಗಳು (ಜ್ಞಾಪನಪತ್ರ)

೧. **ಹೆಸರು :** ಈ ಸಂಸ್ಥೆಯ ಹೆಸರು **'ಕನ್ನಡ ಸಾಹಿತ್ಯ ಪರಿಷತ್ತು'** ಎಂದು ಇರತಕ್ಕದ್ದು. **(ಈ ನಿಯಮ-ನಿಬಂಧನೆಗಳಲ್ಲಿ ಇನ್ನು ಮುಂದೆ, 'ಪರಿಷತ್ತು' / 'ಕೇಂದ್ರ ಪರಿಷತ್ತು' ಎಂದು ಉಲ್ಲೇಖಿಸಲಾಗುವುದು)**

೨. **ಕೇಂದ್ರ ಕಚೇರಿಯ ವಿಳಾಸ : ಕನ್ನಡ ಸಾಹಿತ್ಯ ಪರಿಷತ್ತು, # ೧೫೭೫,** ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮. **ಜಾಲತಾಣ ವಿಳಾಸ : www.kasapa.in ಮಿಂಚಂಚೆ : kannadaparishattu @ gmail.com, ವಾಟ್ಸಪ್ : 9972258998, ಯೂಟ್ಯೂಬ್: http://www.youtube.com/c/KannadaParishattu, ಟ್ವಿಟರ್: kannadaparishad ಫೇಸ್‌ಬುಕ್:**ಕ.ಸಾ.ಪ. ಬೆಂಗಳೂರು **ದೂರವಾಣಿ : ೦೮೦ – ೨೬೬೨೩೫೮೪ / ೨೬೬೧೨೯೯೧ / ೨೬೬೭೨೯೯೨ / ೨೨೪೨೩೮೬೭, ಮೊಬೈಲ್ : ೯೭೨೨೫೮೯೯೮ / ೯೭೨೨೪೫೯೯೮**

೩. **ಪರಿಷತ್ತಿನ ಕಾರ್ಯಕ್ಷೇತ್ರ ವ್ಯಾಪ್ತಿ : ಕೇಂದ್ರ ಪರಿಷತ್ತಿನ ಕಾರ್ಯಕ್ಷೇತ್ರ ವ್ಯಾಪ್ತಿಯು, ಇಡೀ ಕರ್ನಾಟಕ ರಾಜ್ಯ, ಗಡಿನಾಡು/ರಾಜ್ಯಗಳು, ಕನ್ನಡಿಗರು ವಾಸಿಸುವ ಹೊರರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಹೊರದೇಶಗಳಿಗೂ ವಿಸ್ತಾರವಾಗಿರುತ್ತದೆ.**

೪. **ಪರಿಷತ್ತಿನ ಧ್ಯೇಯೋದ್ದೇಶಗಳು :** (೧) ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಜೊತೆಗೆ **ಕನ್ನಡ – ಕನ್ನಡಿಗ – ಕರ್ನಾಟಕ** ಇವುಗಳ ರಕ್ಷಣೆ, ಪ್ರಸಾರ ಮತ್ತು ಅಭಿವೃದ್ಧಿ ಕೈಗೊಳ್ಳುವುದು.

೨) **ಪರಿಷತ್ತಿನ ಧ್ಯೇಯೋದ್ದೇಶಗಳ** ಸಾಧನೆಗೆ ಪರಿಷತ್ತು ಈ ಕೆಳಗೆ ಕಾಣಿಸಿರುವ ಕಾರ್ಯಕಲಾಪಗಳನ್ನು ಕೈಗೊಳ್ಳತಕ್ಕದ್ದು:

(ಅ) ಸಮ್ಮೇಳನ, ಸಾಹಿತ್ಯೋತ್ಸವ, ನಾಡಹಬ್ಬ ಮುಂತಾದ ಉತ್ಸವಗಳು; ಉಪನ್ಯಾಸಗಳು, ಸ್ಪರ್ಧೆಗಳು, ಕಲಾ ಪ್ರದರ್ಶನಗಳು ಹಾಗೂ ವಿಚಾರ ಸಂಕಿರಣಗಳು, ಗೋಷ್ಠಿಗಳು, ಕಮ್ಮಟ, ಕಾರ್ಯಾಗಾರಗಳನ್ನು **ಆಯೋಜಿಸುವುದು.** ಕನ್ನಡ ಶಾಲೆಗಳ ಸ್ಥಾಪನೆ, **ನಿರ್ವಹಣೆ, ಅಭಿವೃದ್ಧಿ ಮತ್ತು** ಸಾಕ್ಷರತಾ ಪ್ರಚಾರ. **ಯಾವುದೇ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದಲ್ಲಿ ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನ ಮಾಡುತ್ತಿರುವ ಆರ್ಥಿಕವಾಗಿ ದುರ್ಬಲರಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಕೇಂದ್ರ ಪರಿಷತ್ತಿನ ವತಿಯಿಂದ ಅಥವಾ ಆಯಾ ಘಟಕದ ವತಿಯಿಂದ ಆರ್ಥಿಕ ನೆರವು ಒದಗಿಸುವುದು.**

(ಆ) ಓಲೆಗರಿಗಳ ಹಾಗೂ ಹಳೆಯ ಗ್ರಂಥಗಳ **ಸಂಗ್ರಹ, ಸಂರಕ್ಷಣೆ, ಮುದ್ರಣ, ಮರುಮುದ್ರಣ ಮತ್ತು** ಪ್ರಕಟಣೆ. ತಾಮ್ರಪಟ, ಶಿಲಾಶಾಸನ ಪ್ರತಿಗಳು, ಐತಿಹಾಸಿಕ ಕಾಗದ ಪತ್ರಗಳು, ನಾಣ್ಯಗಳು ಇತ್ಯಾದಿ ಪ್ರಾಚ್ಯವಸ್ತುಗಳ ಸಂಗ್ರಹ **ಮತ್ತು ಪ್ರದರ್ಶನ.**

(ಇ) **ಸಂಶೋಧನಾ ಶಾಖೆಯ ಏರ್ಪಾಡು:** ಸಾಹಿತ್ಯ, ಕಲೆ, ಇತಿಹಾಸ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಲು ಸಂಶೋಧಕರಿಗೆ ಸೌಕರ್ಯ ಕಲ್ಪಿಸುವುದು.

(ಈ) ವ್ಯಾಕರಣ, ನಿಘಂಟು, ಚರಿತ್ರೆ, ವಿಜ್ಞಾನ, ಸಮಾಜ ವಿಜ್ಞಾನ, ಮಾನವಿಕ, ಪರಿಶೋಧನೆ, ತತ್ತ್ವವಿಚಾರ, ಪಾರಿಭಾಷಿಕ ಕೋಶ, ಸಾಹಿತ್ಯ, ಕಲೆ, ಧರ್ಮ, ದರ್ಶನ ಇತ್ಯಾದಿ ವಿಷಯಗಳನ್ನು ಕುರಿತು ಗ್ರಂಥ ಪ್ರಕಟಣೆಗೆ ಸಹಾಯ, ಪ್ರಚಾರ ಮತ್ತು ಗ್ರಂಥಗಳ ಮಾರಾಟ.

(ಉ) ವಿವಿಧ ವಿಷಯಗಳ ಉತ್ತಮ ಗ್ರಂಥಗಳನ್ನು ಇತರ ಭಾಷೆಗಳಿಂದ ಕನ್ನಡಕ್ಕೆ, ಉತ್ತಮ ಕನ್ನಡ ಗ್ರಂಥಗಳನ್ನು ಇತರ ಭಾಷೆಗಳಿಗೆ ಭಾಷಾಂತರ ಮಾಡಿಸುವುದು, ಪ್ರಕಟಿಸುವುದು, ಪ್ರಚಾರ ಮತ್ತು ಮಾರಾಟ ಮಾಡುವುದು.

(ಊ) ಸಾಹಿತ್ಯ, ಶಾಸನಶಾಸ್ತ್ರ, ಪತ್ರಿಕೋದ್ಯಮ, ಗಮಕ, **ಕೀರ್ತನೆ,** ಸಂಗೀತ, ಜಾನಪದ ತರಗತಿಗಳು ಮತ್ತು ಪರೀಕ್ಷೆಗಳು, ಸ್ಪರ್ಧೆಗಳನ್ನು ಏರ್ಪಡಿಸುವುದು.

(ಋ) ಪರಿಷತ್ತಿನ ಕಾರ್ಯಕಲಾಪಗಳ ಪ್ರಸಾರಕ್ಕೆ ಮತ್ತು ಸಾಹಿತ್ಯ ಕಲೆಗಳ ಉತ್ಕರ್ಷಕ್ಕೆ 'ಕನ್ನಡ ನುಡಿ' **(ತ್ರೈಮಾಸಿಕ)** ಮತ್ತು 'ಕನ್ನಡ ಸಾಹಿತ್ಯ ಪರಿಷತ್‌ಪತ್ರಿಕೆ'–**ಷಾಣ್ಮಾಸಿಕ (ಅರ್ಧವಾರ್ಷಿಕ)** ಮೊದಲಾದ ನಿಯತಕಾಲಿಕೆಗಳನ್ನು ಪ್ರಕಟಿಸುವುದು.

(ಎ) ಕರ್ನಾಟಕ, ಗಡಿನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶಗಳಲ್ಲಿ ಹಾಗೂ ಹೊರದೇಶಗಳಲ್ಲಿ ಕನ್ನಡ, ಕನ್ನಡಿಗರ ಅಭಿವೃದ್ಧಿಗಾಗಿ ಶ್ರಮಿಸುವುದು.

(ಏ) ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಜನಪದ, ಕನ್ನಡ – ಕನ್ನಡಿಗ – ಕರ್ನಾಟಕ ಇವುಗಳ ಬೆಳವಣಿಗೆಗಾಗಿ ಸರಕಾರ ಮತ್ತು ಇತರ ಸಂಸ್ಥೆಗಳು ಕೈಗೊಳ್ಳುವ ಕಾರ್ಯ ಕಲಾಪಗಳಲ್ಲಿ ಭಾಗವಹಿಸುವುದು ಮತ್ತು ಸಲಹೆ ಸೂಚನೆಗಳನ್ನು ನೀಡುವುದು.

(ಐ) ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯಗಳಲ್ಲಿ ೧೮ ರಿಂದ ೩೫ ವರ್ಷದೊಳಗಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಇನ್ನಿತರ ಯುವಕ, ಯುವತಿಯರು ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸುವ ಕಾರ್ಯಕ್ರಮಗಳನ್ನು ರೂಪಿಸುವುದು. ಈ ಸಂಬಂಧ ಜಿಲ್ಲಾ, ತಾಲ್ಲೂಕು, ಹೋಬಳಿ, ಗಡಿನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶಗಳ ಘಟಕಗಳಲ್ಲಿ ಅಭಿಯಾನ ಕೈಗೊಳ್ಳುವುದು.

(ಒ) ಜನಸಾಮಾನ್ಯರ ಪರಿಷತ್ತನ್ನಾಗಿಸುವ ನಿಟ್ಟಿನಲ್ಲಿ ಜನಪರ, ಜನೋಪಯೋಗಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಎಲ್ಲ ಸ್ತರದ ಜನರು ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು.

(ಓ) ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಕನ್ನಡದ ಸಾಧಕರನ್ನು, ಪ್ರತಿಭಾವಂತರನ್ನು ಗುರುತಿಸಿ ಅವರಿಗೆ ಸೂಕ್ತ ಗೌರವ, ಪುರಸ್ಕಾರ, ಪ್ರಶಸ್ತಿ ನೀಡುವುದು.

(ಔ) ಚಂದಾ, ದಾನ, ಪ್ರಕಟಣೆ, ಸಾಂಸ್ಕೃತಿಕ ಪ್ರದರ್ಶನ ಮುಂತಾದವುಗಳ ಮೂಲಕ ಪರಿಷತ್ತು ದೇಣಿಗೆಯನ್ನು ನಗದು / ಚೆಕ್ / ಡ್ರಾಫ್ಟ್ ರೂಪದಲ್ಲಿ ಅಥವಾ ವಸ್ತುಗಳ ರೂಪದಲ್ಲಿ ಪಡೆದುಕೊಳ್ಳುವುದು. ದಾಖಲೆಗಳನ್ನು ನಿರ್ವಹಿಸುವುದು.

(ಕ) ಪರಿಷತ್ತು ತನ್ನ ಚರ–ಸ್ಥಿರ ಆಸ್ತಿಗಳನ್ನು ವೃದ್ಧಿಸಿಕೊಳ್ಳಲು ಕ್ರಯದಿಂದ, ಭೋಗ್ಯದಿಂದ, ಕರಾರಿನಿಂದ; ದಾನ, ದತ್ತಿ ಮುಂತಾದವುಗಳಿಂದಲ್ಲದೇ, ಸರ್ಕಾರದಿಂದ, ಸಂಘ–ಸಂಸ್ಥೆಗಳಿಂದ, ಸಾರ್ವಜನಿಕರಿಂದ ನಗದು ಅಥವಾ ವಸ್ತುಗಳ ರೂಪದಲ್ಲಿ ಪಡೆದುಕೊಳ್ಳುವುದು.

(ಖ) ಜಾತಿ, ಮತ, ಧರ್ಮ, ಲಿಂಗ, ಪ್ರದೇಶ – ಇವುಗಳ ಆಧಾರದ ಮೇಲೆ ಪರಿಷತ್ತಿನ ಸದಸ್ಯರಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡತಕ್ಕದ್ದಲ್ಲ ಮತ್ತು ರಾಜಕೀಯ ವಾತಾವರಣದಿಂದ ಪರಿಷತ್ತು ಮುಕ್ತವಾಗಿರತಕ್ಕದ್ದು.

**(೩) ಪಾಂಡಿತ್ಯ ಪೋಷಣೆ :**

(ಅ) ಭಾಷೆ, ಸಾಹಿತ್ಯ, ಇತಿಹಾಸ, ಕಲೆ, ಶಾಸ್ತ್ರ, ದರ್ಶನ ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನಾನುಭವವುಳ್ಳ ಹಿರಿಯ ವಿದ್ವಾಂಸರನ್ನು, ಸಾಹಿತಿಗಳನ್ನು ಆಗಾಗ್ಗೆ **ಕೇಂದ್ರ ಪರಿಷತ್ತು ಅಥವಾ ಜಿಲ್ಲಾ ಕಾರ್ಯಕಾರಿ ಸಮಿತಿ ನಿರ್ಧರಿಸುವ ಸ್ಥಳದಲ್ಲಿ ಸಮಾವೇಶಗೊಳಿಸಿ** ವಿಚಾರ ವಿನಿಮಯಕ್ಕೆ ಅವಕಾಶ ಕಲ್ಪಿಸುವುದು.

(ಆ) **ಮೌಲಿಕ,** ಪ್ರೌಢ ಗ್ರಂಥಗಳ **ಕರ್ತೃಗಳಿಗೆ** ಪ್ರೋತ್ಸಾಹ ಮತ್ತು ಧನಸಹಾಯ ನೀಡುವುದು.

(ಇ) ಕನ್ನಡದ ಹಿರಿಯ ವಿದ್ವಾಂಸರಿಗೆ, ಸಾಹಿತಿಗಳಿಗೆ **ಹಾಗೂ ಕನ್ನಡ–ಕನ್ನಡಿಗ–ಕರ್ನಾಟಕಕ್ಕೆ ಸೇವೆ ಸಲ್ಲಿಸಿದ ಗಣ್ಯ** ವ್ಯಕ್ತಿಗಳಿಗೆ ಸನ್ಮಾನ, ಪ್ರಶಸ್ತಿ, ಬಹುಮಾನ, ಗೌರವ ಸದಸ್ಯತ್ವ (ಫೆಲೋಷಿಪ್) ನೀಡುವುದು.

(ಈ) ಉದಯೋನ್ಮುಖ ಲೇಖಕರಿಗೆ ಪ್ರೋತ್ಸಾಹ ನೀಡುವುದು.

**(ಉ) ಪರಿಷತ್ತು ಪ್ರಕಟಿಸುವ ಗ್ರಂಥಗಳ ಮುದ್ರಣ ವೆಚ್ಚಕ್ಕಾಗಿ 'ಗ್ರಂಥ ದಾಸೋಹಿ'ಗಳಿಂದ ದೇಣಿಗೆ ಸ್ವೀಕರಿಸುವುದು.**

**(ಊ) ಮೇಲಿನ ಧ್ಯೇಯೋದ್ದೇಶಗಳ ಸಾಧನೆಗೆ ಸಂಬಂಧಿಸಿದಂತೆ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿ ವಿವೇಚನಾನುಸಾರ ಸೂಕ್ತವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.**

**(೪) ಕನ್ನಡ ಶಾಲೆಗಳ ಪುನಃಶ್ಚೇತನ : ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಗುಣಮಟ್ಟದ ಶಿಕ್ಷಣ ಕೊಡುವ ಸ್ಥಿತಿಯಲ್ಲಿಲ್ಲದ ಕನ್ನಡ ಶಾಲೆಗಳನ್ನು ಗುರುತಿಸಿ, ಅವುಗಳ ಪುನಃಶ್ಚೇತನಕ್ಕೆ ಅವಶ್ಯವೆನಿಸಿದಲ್ಲಿ ಸರ್ಕಾರ ಹಾಗೂ ಸಂಘ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಶ್ರಮಿಸುವುದು.**

**(೫) ಪರಿಷತ್ತಿನ ವಿವಿಧ ಘಟಕಗಳಿಗೆ ಸ್ವಂತ ಕಟ್ಟಡ ಒದಗಿಸುವುದು : ಪರಿಷತ್ತಿನ ವಿವಿಧ ಘಟಕಗಳಿಗೆ ತಮ್ಮದೇ ಆದ ಸ್ವಂತ ಕಟ್ಟಡಗಳು ಇಲ್ಲದಿರುವುದರಿಂದ, ಅವುಗಳಿಗೆ ಏಕರೂಪ ವಿನ್ಯಾಸದ ಕಟ್ಟಡದ ನೀಲನಕ್ಷೆಯನ್ನು ತಯಾರಿಸಿ, ಸರ್ಕಾರದಿಂದ ಅಥವಾ ಸ್ಥಳೀಯ ಸಂಸ್ಥೆಗಳಿಂದ ಅಥವಾ ದಾನಿಗಳಿಂದ ನಿವೇಶನ ಪಡೆದುಕೊಂಡು ಕಟ್ಟಡ ನಿರ್ಮಿಸುವುದು.**

* * * *

ಸ್ಥಾಪನೆ ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು (ನೋಂದಾಯಿತ)

**ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮**

---

## ದಿನಾಂಕ ೦೧–೦೫–೨೦೨೨ ರಂದು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ವಿಶೇಷ ಸಭೆಯಲ್ಲಿ ಅನುಮೋದನೆಗೊಂಡ

## ನಿಯಮ–ನಿಬಂಧನೆಗಳು

೧. **ಹೆಸರು :** ಈ ಸಂಸ್ಥೆಯ ಹೆಸರು 'ಕನ್ನಡ ಸಾಹಿತ್ಯ ಪರಿಷತ್ತು' ಎಂದು ಇರತಕ್ಕದ್ದು. (ಈ ನಿಯಮ–ನಿಬಂಧನೆಗಳಲ್ಲಿ ಇನ್ನು ಮುಂದೆ, 'ಪರಿಷತ್ತು' / **'ಕೇಂದ್ರ ಪರಿಷತ್ತು'** ಎಂದು **ಉಲ್ಲೇಖಿಸಲಾಗುವುದು**)

೨. **ಕೇಂದ್ರ ಕಚೇರಿಯ ವಿಳಾಸ : ಕನ್ನಡ ಸಾಹಿತ್ಯ ಪರಿಷತ್ತು, # ೧೫೭೫,** ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮. **ಜಾಲತಾಣ** ವಿಳಾಸ : **www.kasapa.in** ಮಿಂಚಂಚೆ **: kannadaparishattu @ gmail.com,** ವಾಟ್ಸಪ್ : **9972258998,** ಯೂಟ್ಯೂಬ್: **http://www.youtube.com/c/KannadaParishattu,** ಟ್ವಿಟರ್: **kannadaparishad** ಫೇಸ್‌ಬುಕ್:ಕ.ಸಾ.ಪ. ಬೆಂಗಳೂರು **ದೂರವಾಣಿ : ೦೮೦ – ೨೬೬೨೩೫೮೪ / ೨೬೬೧೨೯೯೧ / ೨೬೬೭೨೯೯೨ / ೨೨೪೨೩೮೬೭, ಮೊಬೈಲ್ : ೯೯೭೨೨೫೮೯೯೮ / ೯೯೭೨೨೪೫೯೯೮**

೩. **ಪರಿಷತ್ತಿನ ಕಾರ್ಯಕ್ಷೇತ್ರ ವ್ಯಾಪ್ತಿ : ಕೇಂದ್ರ ಪರಿಷತ್ತಿನ ಕಾರ್ಯಕ್ಷೇತ್ರ ವ್ಯಾಪ್ತಿಯು, ಇಡೀ ಕರ್ನಾಟಕ ರಾಜ್ಯ, ಗಡಿ ನಾಡು/ರಾಜ್ಯಗಳು, ಕನ್ನಡಿಗರು ವಾಸಿಸುವ ಹೊರರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಹೊರದೇಶಗಳಿಗೂ ವಿಸ್ತಾರವಾಗಿರುತ್ತದೆ.**

೪. **ಪರಿಷತ್ತಿನ ಧ್ಯೇಯೋದ್ದೇಶಗಳ ಸಾಧನೆ : ಜ್ಞಾಪನಾ ಪತ್ರದಲ್ಲಿ ವಿವರಿಸಿರುವ ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸುವುದು ಪರಿಷತ್ತಿನ ಆದ್ಯ ಕರ್ತವ್ಯವಾಗಿದೆ.**

೫. **ವ್ಯಾಖ್ಯಾನಗಳು : (೧) 'ಅಧಿನಿಯಮ'** ಎಂದರೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦.

(೨) **'ಪರಿಷತ್ತು' / 'ಕೇಂದ್ರ ಪರಿಷತ್ತು'** ಎಂದರೆ ಇಡೀ ಕರ್ನಾಟಕ ರಾಜ್ಯ, ಗಡಿನಾಡು/ರಾಜ್ಯಗಳು, ಹೊರರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ಹೊರದೇಶಗಳು ಹಾಗೂ ಕಂದಾಯ ವ್ಯಾಪ್ತಿಯಲ್ಲಿರುವ ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದ ಘಟಕಗಳನ್ನು ಸೇರಿರತಕ್ಕದ್ದು.

(೩) **'ಪರಿಷತ್ತಿನ ಸದಸ್ಯ'** ಎಂದರೆ ಪರಿಷತ್ತಿನ ನಿಯಮ–ನಿಬಂಧನೆಗಳಿಗೆ ಅನುಗುಣವಾಗಿ, ಸದಸ್ಯತ್ವದ ಶುಲ್ಕ ಪಾವತಿಸಿ ಸದಸ್ಯತ್ವ ಅಂಗೀಕರಿಸಲ್ಪಟ್ಟ ವ್ಯಕ್ತಿ / ಸಂಸ್ಥೆ.

(೪) **'ಕೇಂದ್ರ ಕಾರ್ಯಕಾರಿ ಸಮಿತಿ'** ಎಂದರೆ ಕೇಂದ್ರ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾದ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷರಾಗಿ ಚುನಾಯಿತರಾದ ಮತ್ತು ನಾಮನಿರ್ದೇಶನ ಗೊಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿ; 'ಜಿಲ್ಲಾ, ತಾಲ್ಲೂಕು, ಹೋಬಳಿ ಮತ್ತು ಗಡಿನಾಡು/ರಾಜ್ಯ ಘಟಕಗಳಿಗೆ' ಸಂಬಂಧಿಸಿದಂತೆ ಆಯಾ ಘಟಕಗಳಿಗೆ ಅಧ್ಯಕ್ಷರಾಗಿ ಚುನಾಯಿತರಾದ ಅಧ್ಯಕ್ಷರುಗಳು ಮತ್ತು ನಾಮನಿರ್ದೇಶನಗೊಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿ. ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶದ ಘಟಕಗಳಿಗೆ ಸಂಬಂಧಿಸಿದಂತೆ ಕೇಂದ್ರ ಪರಿಷತ್ತಿನಿಂದ ನಾಮ ನಿರ್ದೇಶನಗೊಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿ.

(೫) **'ಘಟಕ'** ಎಂದರೆ ಕೇಂದ್ರ ಪರಿಷತ್ತಿನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ, ತಾಲ್ಲೂಕು, ಹೋಬಳಿ, ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಹಾಗೂ ಹೊರದೇಶ ಗಳಲ್ಲಿ ಅಸ್ತಿತ್ವದಲ್ಲಿರುವ ಪರಿಷತ್ತಿನ ವಿವಿಧ ಅಂಗಗಳು.

(೬) **'ಕ್ಷೇತ್ರ ಘಟಕ'** ಎಂದರೆ ಬೆಂಗಳೂರು ನಗರ ಜಿಲ್ಲೆಯಲ್ಲಿನ ಪ್ರತಿ ವಿಧಾನಸಭಾ ಕ್ಷೇತ್ರದ ಪರಿಷತ್ತಿನ ಅಂಗ. ಈ ಘಟಕಗಳನ್ನು ತಾಲ್ಲೂಕು ಘಟಕಗಳಿಗೆ ಸಮನಾಗಿ ಪರಿಗಣಿಸತಕ್ಕದ್ದು.

(೭) **'ವಾರ್ಡ್ ಘಟಕ'** ಎಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಾಗೂ ಇತರೆ ಯಾವುದೇ ನಗರ ಪಾಲಿಕೆ / ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಯಾವುದೇ ವಾರ್ಡ್‌ಗೆ ಸಂಬಂಧಿಸಿದಂತೆ ಪರಿಷತ್ತಿನಿಂದ ರಚಿಸಲಾದ ಪ್ರತ್ಯೇಕ ಘಟಕ.

(೮) **'ನೋಂದಣಾಧಿಕಾರಿ'** ಎಂದರೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ರ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ನೇಮಕ ಗೊಂಡಿರುವ ಅಧಿಕಾರಿ.

(೯) ವಾರ್ಷಿಕ ಸಾಮಾನ್ಯ / ವಿಶೇಷ ಸಾಮಾನ್ಯ ಸಭೆ ಎಂದರೆ ಪರಿಷತ್ತಿನ ಸರ್ವ ಸದಸ್ಯರನ್ನೊಳ ಗೊಂಡಂತೆ ನಡೆಸುವ ಸಭೆ. ಆದರೆ, ಇಂತಹ ಸಭೆಯ ದಿನಾಂಕದ ೯೦ (ತೊಂಬತ್ತು) ದಿನಗಳ ಪೂರ್ವದಲ್ಲಿ ಪರಿಷತ್ತಿನ ಸದಸ್ಯತ್ವವನ್ನು ಪಡೆದಿದ್ದವರು ಮಾತ್ರ ಇಂಥ ಸಭೆಯಲ್ಲಿ ಭಾಗವಹಿಸಲು ಅರ್ಹರು.

(೧೦) ಸರ್ಕಾರ ಎಂದರೆ ಸಂದರ್ಭಾನುಸಾರವಾಗಿ ಕರ್ನಾಟಕ ಸರ್ಕಾರ / ಭಾರತ ಸರ್ಕಾರ.

(೧೧)ಕಾರ್ಯಕಾರಿ ಸಮಿತಿ ಸಭೆ ಎಂದರೆ ಕೇಂದ್ರ ಪರಿಷತ್ತಿನ / ಆಯಾ ಘಟಕದ ಕಾರ್ಯಕಾರಿ ಸಮಿತಿಯ ನಿಗದಿತ / ವಿಶೇಷ / ತುರ್ತು ಸಭೆ.

(೧೨)ಆಡಳಿತ ವರ್ಷ ಎಂದರೆ ಪ್ರತಿ ಏಪ್ರಿಲ್ ಮಾಹೆಯ ೧ನೆಯ ತಾರೀಖಿನಿಂದ ಆ ಮುಂದಿನ ಮಾರ್ಚ್ ೩೧ರವರೆಗೆ ಇರುವ ಹಣಕಾಸಿನ ವರ್ಷ ಅಥವಾ ಸರ್ಕಾರ ಮಾರ್ಪಡಿಸ ಬಹುದಾದ ಹಣಕಾಸಿನ ವರ್ಷ.

೬. ಪರಿಷತ್ತಿನ ಸದಸ್ಯತ್ವ : (೧) ಪರಿಷತ್ತಿನ ಧ್ಯೇಯೋದ್ದೇಶಗಳನ್ನು ಒಪ್ಪಿಕೊಂಡು ಅದರ ನಿಯಮ–ನಿಬಂಧನೆಗಳಿಗೆ ಬದ್ಧರಾಗುವ ಕನ್ನಡ ಸಂಸ್ಥೆಗಳು ಹಾಗೂ ಕನ್ನಡ ಓದು ಬರಹ ಬಲ್ಲ ಎಲ್ಲ ವ್ಯಕ್ತಿಗಳೂ ಮತ್ತು ಕೆಳಕಾಣಿಸಿದ ಅರ್ಹತೆಯುಳ್ಳವರು ಪರಿಷತ್ತಿನ ಸದಸ್ಯತ್ವ ಪಡೆಯಬಹುದು.

(ಅ) ೧೮ ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದವರು.

(ಆ) *ವಿದ್ಯಾರ್ಹತೆ : ಕನ್ನಡ ವಿಷಯವನ್ನು ಒಳಗೊಂಡಂತೆ ಕನಿಷ್ಠ ಪ್ರಾಥಮಿಕ ಶಿಕ್ಷಣ ಪಡೆದ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಅಥವಾ ಸದಸ್ಯತ್ವ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪರಿಷತ್ತು ನಡೆಸುವ 'ಸರಳ ಕನ್ನಡ ಪರೀಕ್ಷೆ'ಯಲ್ಲಿ ಉತ್ತೀರ್ಣರಾದವರು. ಈ ಪರೀಕ್ಷೆಯ ಸಂಬಂಧವಾಗಿ ಕೇಂದ್ರ ಪರಿಷತ್ತಿನ ಪಠ್ಯಪುಸ್ತಕ ರಚನಾ ಸಮಿತಿಯು ಸೂಕ್ತ ಪಠ್ಯಕ್ರಮ ಹಾಗೂ ನಿಯಮಗಳನ್ನು ರಚಿಸತಕ್ಕದ್ದು. ಕನ್ನಡ ಓದು–ಬರಹ ಬಾರದ ವ್ಯಕ್ತಿಗಳು ಈಗಾಗಲೇ ಆಜೀವ ಸದಸ್ಯರಾಗಿದ್ದಲ್ಲಿ, ಅಂತಹವರ ಸದಸ್ಯತ್ವ ಅಬಾಧಿತವಾಗಿ ಮುಂದುವರೆಯತಕ್ಕದ್ದು.

ವಿದ್ಯಾರ್ಹತೆಯಿಂದ ವಿನಾಯಿತಿ : ಜಾನಪದ, ನೃತ್ಯ, ಸಂಗೀತ, ರಂಗಭೂಮಿ, ಚಿತ್ರರಂಗ, ಚಿತ್ರಕಲೆ, ಯಕ್ಷಗಾನ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಕಲಾವಿದರು, ಕೃಷಿಕರು, ಕುಶಲ ಕರ್ಮಿಗಳು, ಕಾರ್ಮಿಕರು, ಇನ್ನಿತರೆ ಸಾಮಾನ್ಯ ವ್ಯಕ್ತಿಗಳು ಹಾಗೂ ಕನ್ನಡ ನಾಡು, ನುಡಿ, ನೆಲ, ಜಲ – ಇವುಗಳ ರಕ್ಷಣೆಗಾಗಿ ಶ್ರಮಿಸಿದ ಓದು, ಬರಹ

ಬಾರದ ಕನ್ನಡಿಗರು, ಪರಿಷತ್ತಿನ ಸದಸ್ಯತ್ವವನ್ನು ಬಯಸಿ ಅರ್ಜಿ ಸಲ್ಲಿಸಿದಲ್ಲಿ, ಕನಿಷ್ಠ ವಿದ್ಯಾರ್ಹತೆಯ ಈ ನಿಯಮ ಅನ್ವಯವಾಗತಕ್ಕದ್ದಲ್ಲ. ಈ ವಿನಾಯಿತಿಯ ಸಂಬಂಧವಾಗಿ ಸೂಕ್ತ ಉಪನಿಯಮಗಳನ್ನು / ಉಪ ಸಮಿತಿಯನ್ನು ರಚಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.

(ಇ) ಸದಸ್ಯತ್ವ ಬಯಸುವ ವ್ಯಕ್ತಿ, ತನ್ನ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಆಪರಾಧಿಕ ಪ್ರಕರಣ ವಿಚಾರಣೆಗೆ ಬಾಕಿ ಇರುವುದಿಲ್ಲ ಎಂಬುದಾಗಿ ಸ್ವ–ಘೋಷಿತ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಆದರೆ, ಇಂತಹ ವ್ಯಕ್ತಿ ಕನ್ನಡ ನಾಡು, ನುಡಿ, ನೆಲ, ಜಲ ಇವುಗಳ ರಕ್ಷಣೆಯ ಸಂಬಂಧವಾಗಿ ಜರುಗಿದ ಹೋರಾಟಗಳಲ್ಲಿ ಭಾಗಿ ಯಾಗಿದ್ದನೆನ್ನುವ ಕಾರಣಕ್ಕಾಗಿ, ಅಂತಹ ಆಪರಾಧಿಕ ಪ್ರಕರಣ ದಾಖಲಾಗಿದ್ದರೆ ಈ ನಿಯಮ ಅನ್ವಯಿಸುವುದಿಲ್ಲ. ಈ ಸಂಬಂಧ ಸೂಕ್ತ ದಾಖಲೆಯನ್ನು ಒದಗಿಸತಕ್ಕದ್ದು.

(ಈ) ಸದಸ್ಯತ್ವದ ಅರ್ಜಿಯೊಂದಿಗೆ ಸ್ವಯಂ ದೃಢೀಕರಿಸಿದ ಆಧಾರ್ ಕಾರ್ಡ್ ಹಾಗೂ ವಿದ್ಯಾರ್ಹತೆಗೆ ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು ಸಲ್ಲಿಸತಕ್ಕದ್ದು.

(ಉ) ಮತದಾರರ ಹೆಸರಿಗೆ ಆಧಾರ್ ಕಾರ್ಡ್ ಜೋಡಣೆ ಮಾಡುವ ಸಂಬಂಧವಾಗಿ ಕಾನೂನು ಜಾರಿಗೆ ಬಂದಲ್ಲಿ, ಅದರನ್ವಯ ಅದು ಜಾರಿಗೆ ಬಂದ ದಿನಾಂಕದಂದು ಇರುವ ಪರಿಷತ್ತಿನ ಸದಸ್ಯರಿಗೆ ನೀಡುವ ಗುರುತಿನ ಚೀಟಿ 'ಸ್ಮಾರ್ಟ್ ಕಾರ್ಡ್'ಗೆ ಆಧಾರ್ ಕಾರ್ಡ್ ಸಂಖ್ಯೆಯನ್ನು ಜೋಡಣೆ ಮಾಡತಕ್ಕದ್ದು.

(ಊ)ಪರಿಷತ್ತಿನ ಧ್ಯೇಯೋದ್ದೇಶಗಳನ್ನು ಒಪ್ಪಿಕೊಂಡು ಅದರ ನಿಯಮ– ನಿಬಂಧನೆಗಳಿಗೆ ಬದ್ಧವಾಗುವ ಯಾವುದೇ ಕನ್ನಡ ಸಂಘ–ಸಂಸ್ಥೆ, ಪರಿಷತ್ತಿನ ಅಂಗಸಂಸ್ಥೆಯಾಗಲು, ಬಯಸಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿ ಯೊಂದಿಗೆ ಸಂಸ್ಥೆಯ ನೋಂದಣಿ ಪತ್ರ ಮತ್ತು ಸಂಸ್ಥೆಯು ಅಂಗೀಕರಿಸಿದ ನಡೆವಳಿಯ ದೃಢೀಕೃತ ಪ್ರತಿಗಳನ್ನು ಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಿ ಸದಸ್ಯತ್ವ ಪಡೆಯಬಹುದು. ಅಂತಹ ಸಂಸ್ಥೆಯು ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿ ಗೊಂಡಿರದಿದ್ದಲ್ಲಿ ಪರಿಷತ್ತಿನ ಸದಸ್ಯತ್ವ ಪಡೆಯಬಹು ದಾದರೂ ಅದು ಯಾವುದೇ ಚುನಾವಣೆಯಲ್ಲೂ ಮತ ಚಲಾಯಿಸುವ ಹಕ್ಕನ್ನು ಹೊಂದಿರುವುದಿಲ್ಲ.

(೨) ಪರಿಷತ್ತಿನ ಸದಸ್ಯರ ವರ್ಗಗಳು, ಅವರು ಸಲ್ಲಿಸಬೇಕಾದ ಶುಲ್ಕ :

| | | | |
|---|---|---|---|
| (ಅ) ಮಹಾ ಪೋಷಕರು | ರೂ. | ೧,೦೦,೦೦೦/- | (ಒಂದು ಲಕ್ಷ) |
| (ಆ) ಪೋಷಕರು | ರೂ. | ೫೦,೦೦೦/- | (ಐವತ್ತು ಸಾವಿರ) |
| (ಇ) ಆಜೀವ ಸದಸ್ಯರು | ರೂ. | ೨೫೦/- | (ಇನ್ನೂರ ಐವತ್ತು) |
| (ಈ) ಮಹಾ ಪೋಷಕ ಸಂಸ್ಥೆಗಳು | ರೂ. | ೨,೦೦,೦೦೦/- | (ಎರಡು ಲಕ್ಷ) |
| (ಉ) ಪೋಷಕ ಸಂಸ್ಥೆಗಳು | ರೂ. | ೧,೦೦,೦೦೦/- | (ಒಂದು ಲಕ್ಷ) |
| (ಊ) ಸದಸ್ಯ / ದಾನಿ ಸಂಸ್ಥೆಗಳು | ರೂ. | ೨೫,೦೦೦/- | (ಇಪ್ಪತ್ತೈದು ಸಾವಿರ) |
| (ಋ) ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ಅಸ್ತಿತ್ವದಲ್ಲಿ ಇರುವ ಸಂಘ-ಸಂಸ್ಥೆ ರೂ. ೫,೦೦೦/- (ಐದು ಸಾವಿರ) | | | |
| (ಎ) ಭಾರತೀಯ ಸೇನೆ, ಅರೆಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ / ನಿವೃತ್ತರಾಗಿರುವ ಕನ್ನಡ ಸೈನಿಕರಿಗೆ ಹಾಗೂ ದಿವ್ಯಾಂಗಚೇತನರಿಗೆ ಆಜೀವ ಸದಸ್ಯತ್ವವನ್ನು ಮತ್ತು ಸ್ಮಾರ್ಟ್‌ಕಾರ್ಡ್‌ನ್ನು ಶುಲ್ಕರಹಿತ(ಉಚಿತ)ವಾಗಿ ನೀಡತಕ್ಕದ್ದು. | | | |
| (ಏ) ಹೊರದೇಶದ ಕನ್ನಡಿಗರು ಅಮೆರಿಕದ ಹತ್ತು ಡಾಲರುಗಳಿಗೆ ಸರಿಸಮಾನವಾದ ಭಾರತದ ರೂಪಾಯಿಗಳನ್ನು ಆಜೀವ ಸದಸ್ಯತ್ವದ ಶುಲ್ಕವಾಗಿ ಪಾವತಿಸತಕ್ಕದ್ದು. | | | |

೬. ಸದಸ್ಯತ್ವ ಪಡೆಯುವ ಪ್ರಕ್ರಿಯೆ : (೧)ಸದಸ್ಯತ್ವ ಪಡೆಯಬಯಸುವ ಆಯಾ ವರ್ಗಗಳ ವ್ಯಕ್ತಿಗಳು ಹಾಗೂ ಸಂಸ್ಥೆಗಳು ನೇರವಾಗಿ, ಪರಿಷತ್ತಿನ ಜಾಲತಾಣ (ವೆಬ್‌ಸೈಟ್) / ಮೊಬೈಲ್ ಆ್ಯಪ್ / ಕೇಂದ್ರ ಪರಿಷತ್ತಿನ ಕಚೇರಿಯಲ್ಲಿ ನಿಗದಿ ಪಡಿಸಿರುವ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ, ಅಗತ್ಯ ದಾಖಲೆಗಳನ್ನು ಲಗತ್ತಿಸಿ ಆನ್‌ಲೈನ್ ಮೂಲಕ ಶುಲ್ಕವನ್ನು ಪಾವತಿಸತಕ್ಕದ್ದು. ಇಂತಹ ಅರ್ಜಿಯನ್ನು ಹಾಗೂ ದಾಖಲೆಗಳನ್ನು ಪರಿಷತ್ತು ಪರಿಶೀಲಿಸಿದ ಅನಂತರ ಸದಸ್ಯತ್ವವನ್ನು ನೀಡಲಾಗುವುದು.

(೨) ಆಯಾ ವರ್ಗಗಳಿಂದ ಸ್ವೀಕೃತವಾಗುವ ಸದಸ್ಯತ್ವ ಶುಲ್ಕವನ್ನು 'ಸ್ಥಾಯಿನಿಧಿ'ಗೆ ವರ್ಗಾಯಿಸತಕ್ಕದ್ದು.

(೩) ಈಗಾಗಲೇ ಸದಸ್ಯತ್ವ ಪಡೆದು ಗುರುತಿನ ಚೀಟಿ ಹೊಂದಿದವರು ಅಪೇಕ್ಷಿಪಟ್ಟಲ್ಲಿ ಮಾತ್ರ ಹಾಗೂ ಹೊಸದಾಗಿ ಸದಸ್ಯತ್ವ ಪಡೆಯುವವರು ಆಧುನಿಕ ಗುರುತಿನ ಚೀಟಿ 'ಸ್ಮಾರ್ಟ್‌ಕಾರ್ಡ್'ನ್ನು ಕಡ್ಡಾಯವಾಗಿ ಪಡೆಯತಕ್ಕದ್ದು. ಈ ಸಂಬಂಧ ರೂ. ೧೫೦-೦೦ (ಒಂದುನೂರ ಐವತ್ತು ರೂಪಾಯಿ)ಗಳನ್ನು ಹೆಚ್ಚುವರಿಯಾಗಿ (ಸ್ಮಾರ್ಟ್‌ಕಾರ್ಡ್ ವೆಚ್ಚ ಮತ್ತು ಅಂಚೆ ವೆಚ್ಚ ಸೇರಿ) ಪಾವತಿಸಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಈ ಸ್ಮಾರ್ಟ್‌ಕಾರ್ಡ್‌ನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ.

(೪) ಪರಿಷತ್ತಿನಿಂದ ಪ್ರಕಟಣೆಗೊಳ್ಳುತ್ತಿರುವ 'ಕನ್ನಡ ನುಡಿ' ಪತ್ರಿಕೆಯನ್ನು ಎಲ್ಲ ಸದಸ್ಯರುಗಳು ಉಚಿತವಾಗಿ ಆ್ಯಪ್ / ಜಾಲತಾಣದ ಮೂಲಕ ಪಡೆಯಬಹುದು. ಅದರ ಮುದ್ರಿತ ಪ್ರತಿ ಬಯಸುವವರಿಗೆ ಅದನ್ನು ಮುದ್ರಿಸಿ ಒದಗಿಸುವ ಸಾಧ್ಯತೆಯ ಸಂಬಂಧವಾಗಿ ಹಾಗೂ ಅದರ ಚಂದಾ ಶುಲ್ಕವನ್ನು ನಿಗದಿಪಡಿಸುವ ಸಂಬಂಧವಾಗಿ ಸೂಕ್ತ ನಿರ್ಣಯ ತೆಗೆದು ಕೊಳ್ಳುವ ಅಧಿಕಾರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.

(೫) ಪರಿಷತ್ತಿನ ಸದಸ್ಯತ್ವದ ನೋಂದಣಿಯ ಅಭಿಯಾನವನ್ನು ಪರಿಷತ್ತಿನ ವಿವಿಧ ಘಟಕಗಳ ಮಟ್ಟದಲ್ಲಿ ಜರುಗಿಸುವ ಕುರಿತು ಸೂಕ್ತ ಮಾರ್ಗದರ್ಶಿ ಸೂಚನೆಗಳನ್ನು ಆಗಾಗ್ಗೆ ಹೊರಡಿಸುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರುತ್ತಾರೆ. ಇಂಥ ಸೂಚನೆಗಳನ್ನು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ದಾಖಲಿಸತಕ್ಕದ್ದು.

(೬) ಸದಸ್ಯತ್ವ ಒಮ್ಮೆ ಅಂಗೀಕಾರವಾದ ಅನಂತರ ಅದರ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವಂತಿಲ್ಲ.

(೭) ವಾರ್ಷಿಕ ಸಾಮಾನ್ಯ / ವಿಶೇಷ ಸಭೆಯಲ್ಲಿ ಭಾಗವಹಿಸಲು ಮತ್ತು ಇಂಥ ಸಭೆಗಳಲ್ಲಿ ಅಲ್ಲದೇ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಲು ಸದಸ್ಯರು ಪರಿಷತ್ತಿನ ಗುರುತಿನ ಚೀಟಿ/ಸ್ಮಾರ್ಟ್‌ಕಾರ್ಡನ್ನು ಹೊಂದಿರಬೇಕು. ಗುರುತಿನ ಚೀಟಿ/ಸ್ಮಾರ್ಟ್‌ಕಾರ್ಡ್ ಹೊಂದದೆ ಇರುವವರು ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಸೂಚಿಸಿರುವ ಗುರುತಿನ ಚೀಟಿಯಲ್ಲಿ ಒಂದನ್ನು ತೋರಿಸಿ ಸದಸ್ಯರ ಸಭೆಯಲ್ಲಿ ಭಾಗವಹಿಸುವುದು.

(೮) ಯಾವುದೇ ಸದಸ್ಯನ ಅಥವಾ ಸದಸ್ಯ ಸಂಸ್ಥೆಯ ವರ್ತನೆಯು ಪರಿಷತ್ತಿನ ಘನತೆ, ಗೌರವಗಳಿಗೆ ಹಾಗೂ ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿದ್ದುದು ಕಂಡುಬಂದಲ್ಲಿ, ಅಂತಹ ಸದಸ್ಯರಿಂದ ಅಥವಾ ಸದಸ್ಯ ಸಂಸ್ಥೆಯಿಂದ ವಿವರಣೆಯನ್ನು ಪಡೆದು, ಪರಿಶೀಲನೆ ಮಾಡಿ ಮೇಲ್ನೋಟಕ್ಕೆ ಆರೋಪ ಸರಿ ಇದೆ ಎಂದು ಕಂಡುಬಂದಲ್ಲಿ, ಅಂತಹ ವ್ಯಕ್ತಿಯ / ಸಂಸ್ಥೆಯ ಸದಸ್ಯತ್ವವನ್ನು ಮುಂದಿನ ಆದೇಶದವರೆಗೆ ಅಮಾನತ್ತಿನಲ್ಲಿರಿಸುವ ಅಧಿಕಾರವು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು. ಈ ಸಂಬಂಧ ತಮ್ಮ ನಿರ್ಣಯಕ್ಕೆ ಅಧ್ಯಕ್ಷರು ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಪಡೆಯಬೇಕು.

(೯) ಕಾರ್ಯಕಾರಿ ಸಮಿತಿಯ ಅಥವಾ ಆಜೀವ ಸದಸ್ಯರಲ್ಲಿ ಯಾರಾದರೂ ಆಪರಾಧಿಕ ಅಪರಾಧದ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಗಾದಲ್ಲಿ ಅಥವಾ ಅವರು ಪರಿಷತ್ತಿನ ಘನತೆ, ಗೌರವಗಳಿಗೆ ಧಕ್ಕೆಯುಂಟು ಮಾಡಿದಲ್ಲಿ ಅಂತಹವರು ಪರಿಷತ್ತಿನ ಸದಸ್ಯತ್ವ ದಿಂದ ಅಮಾನತ್ತು ಗೊಳಿಸಲ್ಪಡುತ್ತಾರೆ. ಆಪರಾಧಿಕ ಅಪರಾಧಗಳಿಗೆ ಶಿಕ್ಷೆಗೆ ಒಳಗಾದಲ್ಲಿ, ಅಂತಹವರಿಗೆ ಹೇಳಿಕೆ ನೀಡಲು ಅವಕಾಶ

ಕಲ್ಪಿಸಿ, ಅವರು ಎಸಗಿದ ಅಪರಾಧದ ತೀಕ್ಷ್ಣತೆಯನ್ನು ಪರಿಗಣಿಸಿ, ಅವರನ್ನು ಪರಿಷತ್ತಿನ ಸದಸ್ಯತ್ವದಿಂದ ವಜಾಗೊಳಿಸಲಾಗುತ್ತದೆ.

(೧೦)ಯಾವುದೇ ಸದಸ್ಯ, ಸದಸ್ಯ ಸಂಸ್ಥೆಯು ಪರಿಷತ್ತಿನ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದಲ್ಲಿ ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಕೇಂದ್ರ ಕಾರ್ಯಕಾರಿ ಸಮಿತಿಗೆ ಇರುತ್ತದೆ. ಈ ನಿರ್ಣಯವನ್ನು ಕಾರ್ಯಕಾರಿ ಸಮಿತಿ ಸಭೆಯಲ್ಲಿ ದಾಖಲಿಸುವುದು ಅವಶ್ಯ.

೮. ಸದಸ್ಯರ ಮತ್ತು ಸದಸ್ಯ–ಸಂಸ್ಥೆಗಳ ಹಕ್ಕು–ಬಾಧ್ಯತೆಗಳು ಹಾಗೂ ಸೌಲಭ್ಯಗಳು : (೧) ಪರಿಷತ್ತಿನ ಉತ್ಸವ, ಉಪನ್ಯಾಸ, ಗೋಷ್ಠಿ, ಸಮ್ಮೇಳನ ಇತ್ಯಾದಿ ಕಾರ್ಯಕ್ರಮಗಳಲ್ಲಿ ಹಾಜರಾಗುವ ಮಹಾಪೋಷಕರು, ಪೋಷಕರು ಹಾಗೂ ಮಹಾಪೋಷಕ ಸಂಸ್ಥೆ / ಪೋಷಕ ಸಂಸ್ಥೆಯ ಪ್ರತಿನಿಧಿಯೊಬ್ಬರಿಗೆ, ದಾನಿಗಳಿಗೆ, ದಾನಿ ಸಂಸ್ಥೆಗಳ ಪ್ರತಿನಿಧಿಯೊಬ್ಬರಿಗೆ ವೇದಿಕೆಯ ಮುಂಭಾಗದಲ್ಲಿ ಸೂಕ್ತ ಆಸನದ ವ್ಯವಸ್ಥೆ ಮಾಡಿ ಅವರನ್ನು ಗೌರವಿಸುವುದು.

(೨) ಎಲ್ಲ ವರ್ಗಗಳ ಸದಸ್ಯರೂ ಪರಿಷತ್ತಿನ ಆಜೀವ ಸದಸ್ಯರೆಂದು ಪರಿಗಣಿಸಲ್ಪಟ್ಟು ಅವರು ಪುಸ್ತಕ ಭಂಡಾರ, ವಾಚನಾಲಯ ಮೊದಲಾದವುಗಳ ಸೌಲಭ್ಯಗಳನ್ನು ಪಡೆಯಲು ಹಾಗೂ ಚುನಾವಣಾ ನಿಯಮಗಳಿಗೆ ಒಳಪಟ್ಟು ಚುನಾವಣೆಗಳಲ್ಲಿ ಮತದಾನ ಮಾಡಲು ಅರ್ಹರಾಗಿರುತ್ತಾರೆ.

(೩) ಪರಿಷತ್ತಿನ ಪ್ರಕಟಣೆಗಳ ಪ್ರತಿ ಶೀರ್ಷಿಕೆಯ ಪ್ರತಿಗಳನ್ನು ಮಾರಾಟ ಮಾಡಲು, ಎಲ್ಲಾ ವರ್ಗಗಳ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ರಿಯಾಯಿತಿ ನೀಡಲು ಆಯಾ ಕಾಲಕ್ಕೆ ತಕ್ಕಂತೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರ ವಿವೇಚನೆಗೆ ಒಳಪಟ್ಟಿರುತ್ತದೆ.

(೪) ಸಾಮಾನ್ಯ ಹಾಗೂ ವಿಶೇಷ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸುವುದಕ್ಕೆ ಮತ್ತು ಚುನಾವಣೆಗಳಲ್ಲಿ ಮತದಾನ ಮಾಡುವುದಕ್ಕೆ ಸದಸ್ಯ ಸಂಸ್ಥೆಯು ಕನ್ನಡ ಓದು, ಬರಹ ಬಲ್ಲ ಒಬ್ಬ ಪ್ರತಿನಿಧಿಯನ್ನು ಕಳುಹಿಸಬಹುದು. ಸದಸ್ಯ ಸಂಸ್ಥೆಯು, ಪ್ರತಿನಿಧಿಯ ಹೆಸರು, ಮೊಬೈಲ್ ಸಂಖ್ಯೆ ಇನ್ನಿತರ ವಿವರಗಳೊಂದಿಗೆ ಸಭೆ ನಡೆಯುವ ೧೫ ದಿನಗಳ ಮುಂಚಿತವಾಗಿ ಹಾಗೂ ಮತದಾನದ ದಿನಾಂಕಕ್ಕೆ ೪೫ ದಿನಗಳ ಮುಂಚಿತವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು. ಇಂಥ ಲಿಖಿತ ಮನವಿಯನ್ನು ಒಪ್ಪಿಕೊಂಡ ಬಗ್ಗೆ ಪರಿಷತ್ತು ಸಂಬಂಧಪಟ್ಟ ಸದಸ್ಯ ಸಂಸ್ಥೆಗೆ ತಿಳಿಸತಕ್ಕದ್ದು.

(೫) ಸದಸ್ಯ ಸಂಸ್ಥೆಯ ಪ್ರತಿನಿಧಿಗೆ ಪರಿಷತ್ತಿನ ಯಾವುದೇ ಸ್ಥಾನಕ್ಕೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶವಿರುವುದಿಲ್ಲ. ಆದರೆ ಅಂತಹ ವ್ಯಕ್ತಿ ವೈಯಕ್ತಿಕವಾಗಿ ಪರಿಷತ್ತಿನ ಆಜೀವ ಸದಸ್ಯತ್ವವನ್ನು ಪಡೆದಿದ್ದರೆ ಸ್ಪರ್ಧಿಸಬಹುದು.

(೬) (ಅ) **ಯಾವುದೇ ಸದಸ್ಯನು ಕೇಂದ್ರ ಪರಿಷತ್ತಿನ ಅಥವಾ ತನಗೆ ಸಂಬಂಧಿಸಿದ ಘಟಕದ ಕಾರ್ಯಕಾರಿ ಸಮಿತಿಯ ಯಾವುದೇ ನಿರ್ಣಯದಿಂದ / ಗೊತ್ತುವಳಿ ಯಿಂದ ಬಾಧಿತನಾದಲ್ಲಿ ಅಂತಹ ಸದಸ್ಯನು ವಾರ್ಷಿಕ / ವಿಶೇಷ ಸಾಮಾನ್ಯ ಸಭೆಗೆ ಮೇಲ್ಮನವಿಯನ್ನು ಸಲ್ಲಿಸುವ ಹಕ್ಕನ್ನು ಹೊಂದಿರುತ್ತಾನೆ.**

(ಆ) **ಪ್ರತಿ ಅರ್ಹ ಸದಸ್ಯರಿಗೆ ಸಾಮಾನ್ಯ ಸಭೆಯಲ್ಲಿ / ವಿಶೇಷ ಸಭೆಯಲ್ಲಿ / ಚುನಾವಣೆಯಲ್ಲಿ ಮತದಾನ ಮಾಡುವ ಸಂದರ್ಭದಲ್ಲಿ ಒಂದೇ ಮತ ಚಲಾಯಿಸಲು ಅವಕಾಶವಿರತಕ್ಕದ್ದು.**

(೭) **ಯಾವುದೇ ಸಭೆಯಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪರ ಮತ್ತು ವಿರೋಧವಾಗಿ ಸಮಾನ ಮತಗಳು ಬಂದಲ್ಲಿ ಆ ಸಭೆಯ ಅಧ್ಯಕ್ಷರಿಗೆ ಹೆಚ್ಚುವರಿಯಾಗಿ ಒಂದು ನಿರ್ಣಾಯಕ ಮತವನ್ನು ಚಲಾಯಿಸಲು ಅಧಿಕಾರ ಇರತಕ್ಕದ್ದು.**

೯. **ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ರಚನೆ, ಕಾರ್ಯವ್ಯಾಪ್ತಿ : (೧) ಪರಿಷತ್ತಿನ ದೈನಂದಿನ ಹಾಗೂ ವಿಶೇಷ ಸಂದರ್ಭಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ, ಆ ಸಂಬಂಧವಾಗಿ ಸೂಕ್ತ ನಿರ್ಣಯ ಕೈಗೊಳ್ಳುವುದಕ್ಕಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಸಮಿತಿ ಇರತಕ್ಕದ್ದು.**

**(೨)** ಕೇಂದ್ರ ಪರಿಷತ್ತಿನ ಅಧ್ಯಕ್ಷರು ಇದರ ಪ್ರತಿನಿಧಿಯಾಗಿ ಕಾರ್ಯಕಲಾಪಗಳನ್ನು ನಡೆಸತಕ್ಕದ್ದು. ಈ ಸಮಿತಿಯಲ್ಲಿ **ಪದಾಧಿಕಾರಿಗಳು** ಸೇರಿದಂತೆ ಸದಸ್ಯರು ಈ ಕೆಳಕಾಣಿಸಿದಂತೆ ಇರತಕ್ಕದ್ದು.

| | | |
|---|---|---|
| ೧. | **ಚುನಾಯಿತ** ಅಧ್ಯಕ್ಷರು | ೦೧ |
| ೨. | ಗೌರವ ಕಾರ್ಯದರ್ಶಿಗಳು | ೦೨ |
| ೩. | ಗೌರವ ಕೋಶಾಧ್ಯಕ್ಷರು | ೦೧ |
| ೪. | **ಆಯಾ ಜಿಲ್ಲಾ ಘಟಕಗಳ ಚುನಾಯಿತ ಅಧ್ಯಕ್ಷರು [ಜಿಲ್ಲೆಗಳ ಒಟ್ಟು ಸಂಖ್ಯೆಗೆ ಅನುಗುಣವಾಗಿ]** | –– |
| ೫. | ಗಡಿ ನಾಡು/**ರಾಜ್ಯ** ಘಟಕಗಳ ಚುನಾಯಿತ ಅಧ್ಯಕ್ಷರು (ತಮಿಳುನಾಡು, ಆಂಧ್ರಪ್ರದೇಶ, **ತೆಲಂಗಾಣ,** ಮಹಾರಾಷ್ಟ್ರ, ಗೋವಾ ಮತ್ತು ಕೇರಳ **ರಾಜ್ಯಗಳ ಗಡಿಗಳಿಗೆ ಹೊಂದಿಕೊಂಡ ಗಡಿ ನಾಡು/ರಾಜ್ಯ ಘಟಕಗಳ ಚುನಾಯಿತ ಅಧ್ಯಕ್ಷರು) ಘಟಕಗಳ ಒಟ್ಟು ಸಂಖ್ಯೆಗೆ ಅನುಗುಣವಾಗಿ** | ೦೬ |
| **೬.** | **ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಹಾಗೂ ಹೊರದೇಶ ಘಟಕಗಳ ನಾಮನಿರ್ದೇಶಿತ ಅಧ್ಯಕ್ಷರು** **[ಕರ್ನಾಟಕ ಮತ್ತು ಗಡಿ ನಾಡು/ರಾಜ್ಯಗಳನ್ನು ಹೊರತುಪಡಿಸಿ, ಭಾರತದ ಬೇರಾವುದೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಹೊರರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಘಟಕಗಳಿಗೆ ಅನುಗುಣವಾಗಿ]** **(ವಿಶೇಷ ಆಹ್ವಾನಿತರು)** | |
| ೭. | ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು | ೦೧ |

| | | |
|---|---|---|
| ೮. | ನಿಕಟಪೂರ್ವ ಸಮ್ಮೇಳನಾಧ್ಯಕ್ಷರು | ೦೧ |
| ೯. | ಕನ್ನಡ ಅಧ್ಯಯನದ ವ್ಯವಸ್ಥೆಯುಳ್ಳ ವಿಶ್ವವಿದ್ಯಾಲಯದ ಪ್ರತಿನಿಧಿಗಳು | ೦೨ |
| ೧೦. | ಮಹಿಳಾ ಪ್ರತಿನಿಧಿಗಳು | ೦೨ |
| ೧೧. | ಪರಿಶಿಷ್ಟ ಜಾತಿ ಪ್ರತಿನಿಧಿಗಳು | ೦೨ |
| ೧೨. | ಪರಿಶಿಷ್ಟ ಪಂಗಡ ಪ್ರತಿನಿಧಿ | ೦೧ |
| **೧೩.** | **ಹಿಂದುಳಿದ ವರ್ಗಗಳ ಪ್ರತಿನಿಧಿಗಳು** | **೦೨** |
| **೧೪.** | **ಅಲ್ಪಸಂಖ್ಯಾತರ ಪ್ರತಿನಿಧಿಗಳು** | **೦೨** |
| ೧೫. | ಸಂಘ ಸಂಸ್ಥೆಗಳ ಪ್ರತಿನಿಧಿಗಳು | ೦೫ |
| ೧೬. | ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು (ಪದನಿಮಿತ್ತ) | ೦೧ |
| **೧೭.** | **ಜಿಲ್ಲಾ ಸಂಘಗಳ ರಿಜಿಸ್ಟ್ರಾರ್ (ಪದನಿಮಿತ್ತ)** | **೦೧** |
| **೧೮.** | **ವಾರ್ತಾ ಮತ್ತು ಪ್ರಸಾರ ಇಲಾಖೆಯ ನಿರ್ದೇಶಕರು (ಪದನಿಮಿತ್ತ)** | **೦೧** |
| **೧೯.** | **ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು (ಪದನಿಮಿತ್ತ)** | **೦೧** |

**(೩) ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳಾದ ಗೌರವ ಕಾರ್ಯದರ್ಶಿಗಳು, ಗೌರವ ಸಂಘಟನಾ ಕಾರ್ಯದರ್ಶಿಗಳು, ಗೌರವ ಕೋಶಾಧ್ಯಕ್ಷರು ಹಾಗೂ ಮಿಕ್ಕುಳಿದ ಪ್ರತಿನಿಧಿ / ಪದನಿಮಿತ್ತ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡುವ ಅಧಿಕಾರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ.**

**(೪) ಕೇಂದ್ರ ಪರಿಷತ್ತಿನ ಅಧ್ಯಕ್ಷರ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷ ಸ್ಥಾನಗಳಿಗೆ ಚುನಾವಣೆ ಆದ ನಂತರದ** ಕಾರ್ಯಕಾರಿ ಸಮಿತಿಯು ಅಸ್ತಿತ್ವಕ್ಕೆ ಬರಬೇಕಾದರೆ ಚುನಾಯಿತ ಸದಸ್ಯರ ಸಂಖ್ಯೆಯ ಮೂರನೆಯ ಒಂದು ಭಾಗದಷ್ಟಾದರೂ ಸದಸ್ಯರು ಸಭೆಯಲ್ಲಿ ಭಾಗವಹಿಸಿರಬೇಕು.

**(೫) ಅಧ್ಯಕ್ಷರ ತಾತ್ಕಾಲಿಕ ಗೈರುಹಾಜರಿ : ಯಾವುದೇ ಕಾರಣದಿಂದಲಾದರೂ ಕೇಂದ್ರ ಪರಿಷತ್ತಿನ ಅಧ್ಯಕ್ಷರು ತಾತ್ಕಾಲಿಕವಾಗಿ ಗೈರುಹಾಜರಾದಲ್ಲಿ, ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು, ಸಭೆಗಳನ್ನು ನಡೆಸಲು ಕೇಂದ್ರ ಕಾರ್ಯಕಾರಿ ಸಮಿತಿಯಲ್ಲಿರುವ ಚುನಾಯಿತ ಜಿಲ್ಲಾಧ್ಯಕ್ಷರು ಅಥವಾ ಚುನಾಯಿತ ಗಡಿ ನಾಡು/ ರಾಜ್ಯ ಅಧ್ಯಕ್ಷರುಗಳಲ್ಲಿ ಒಬ್ಬರನ್ನು ತಾತ್ಕಾಲಿಕ ಅಧ್ಯಕ್ಷರನ್ನಾಗಿ ಆಯ್ಕೆಮಾಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ.**

**(೬) ಕನ್ನಡ ಶಾಲೆಗಳ ಪುನಃಶ್ಚೇತನ : ಪರಿಷತ್ತಿನ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಅನೇಕ ಸರ್ಕಾರಿ ಹಾಗೂ ಖಾಸಗೀ ಕನ್ನಡ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದರಿಂದಾಗಿ ಗುಣಮಟ್ಟದ ಶಿಕ್ಷಣ ವಿದ್ಯಾರ್ಥಿಗಳಿಗೆ ದೊರೆಯುತ್ತಿಲ್ಲವಾದ್ದರಿಂದ, ಅಂತಹ ಶಾಲೆಗಳನ್ನು ಆಯಾ ಘಟಕಗಳ**

ಮುಖಾಂತರ ಸಮೀಕ್ಷೆ ನಡೆಸುವ ಮೂಲಕ ಗುರುತಿಸಿ, ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಪರಿಷತ್ತು ಸೂಕ್ತ ಕ್ರಮಕೈಗೊಳ್ಳತಕ್ಕದ್ದು. ಈ ಸಂಬಂಧವಾಗಿ ಒಂದು ಆ್ಯಪ್ ತಯಾರಿಸಿ, ಅದರ ಮೂಲಕ ಸಮೀಕ್ಷೆ ನಡೆಸಿ, ಅಂತಹ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಸಂಬಂಧಿಸಿದ ಸರ್ಕಾರ, ಶಿಕ್ಷಣ ಸಂಸ್ಥೆಗಳ ಗಮನ ಸೆಳೆಯತಕ್ಕದ್ದು.

(೭) ಪರಿಷತ್ತಿನ ವಿವಿಧ ಘಟಕಗಳಿಗೆ ಸ್ವಂತ ಕಟ್ಟಡ : (ಅ) ಪರಿಷತ್ತಿನ ಅನೇಕ ಘಟಕಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದರಿಂದ, ಪ್ರತಿ ಜಿಲ್ಲಾ ಘಟಕ ತನ್ನ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು / ಕ್ಷೇತ್ರ / ಹೋಬಳಿ ಘಟಕಗಳಿಗಾಗಿ ಕಟ್ಟಡ ನಿರ್ಮಿಸಲು ಸೂಕ್ತ ಸ್ಥಳವನ್ನು ಸ್ಥಳೀಯ ಸಂಸ್ಥೆ ಗಳಿಂದಾಗಲೀ, ದಾನಿಗಳಿಂದಾಗಲೀ, ಸರ್ಕಾರದಿಂದಾಗಲೀ ಪಡೆದುಕೊಂಡು ಅದನ್ನು 'ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು' ಈ ಹೆಸರಿಗೆ ನೋಂದಾಯಿತ ವರ್ಗಾವಣೆ ಮಾಡಿಸಿಕೊಂಡು ಕೇಂದ್ರ ಪರಿಷತ್ತಿಗೆ ತಿಳಿಸತಕ್ಕದ್ದು.

(ಆ) ಕಟ್ಟಡಗಳಿಗೆ ಏಕರೂಪ ವಿನ್ಯಾಸ ನೀಲನಕ್ಷೆ ತಯಾರಿಕೆ : ಜಿಲ್ಲಾ, ತಾಲ್ಲೂಕು / ಕ್ಷೇತ್ರ ಮತ್ತು ಹೋಬಳಿ ಘಟಕಗಳಿಗೆ ಸ್ವಂತ ಕಟ್ಟಡ ನಿರ್ಮಿಸಲಿಕ್ಕಾಗಿ, ಏಕರೂಪ ವಿನ್ಯಾಸದ ನೀಲನಕ್ಷೆಯನ್ನು ತಯಾರಿಸಿ, ಆ ಪ್ರಕಾರವೇ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕೆಂದು ಸಂಬಂಧಿಸಿದ ಘಟಕಕ್ಕೆ ಕೇಂದ್ರ ಪರಿಷತ್ತಿನ ಅಧ್ಯಕ್ಷರು ಮಾರ್ಗದರ್ಶಿ ಸೂಚನೆಯನ್ನು ಕೊಡತಕ್ಕದ್ದು.

(ಇ) ಕಟ್ಟಡ ನಿರ್ಮಾಣಕ್ಕೆ ಧನಸಂಗ್ರಹ : ಆಯಾ ಘಟಕದ ಕಟ್ಟಡ ನಿರ್ಮಾಣ ವೆಚ್ಚಕ್ಕಾಗಿ ಧನವನ್ನು ಸರ್ಕಾರದಿಂದ ಅನುದಾನವಾಗಿ, ಸಂಘ–ಸಂಸ್ಥೆಗಳಿಂದ, ಖಾಸಗೀ ವ್ಯಕ್ತಿಗಳಿಂದ ದಾನವಾಗಿ ಕೇಂದ್ರ ಪರಿಷತ್ತು ಪಡೆಯತಕ್ಕದ್ದು. ಈ ಸಂಬಂಧ ಆಯಾ ಘಟಕಗಳು ಕಟ್ಟಡಕ್ಕಾಗಿ ದೇಣಿಗೆ ಸಂಗ್ರಹಿಸಿ, ಅದನ್ನು ಕೇಂದ್ರ ಪರಿಷತ್ತಿಗೆ ಕಳಿಸತಕ್ಕದ್ದು. ಹೀಗೆ ಕೇಂದ್ರ ಪರಿಷತ್ತು ಮತ್ತು ಜಿಲ್ಲಾ ಘಟಕ ಸಂಗ್ರಹಿಸಿದ ಒಟ್ಟಾರೆ ಮೊತ್ತವನ್ನು ಕೇಂದ್ರ ಪರಿಷತ್ತು, ಆಯಾ ಘಟಕದ ನಿರ್ಮಾಣ ವೆಚ್ಚಕ್ಕಾಗಿ ಒದಗಿಸತಕ್ಕದ್ದು.

(ಈ) ಕಟ್ಟಡಗಳ ನಿರ್ಮಾಣ ಸಂಬಂಧ ಉಪನಿಯಮಗಳ ರಚನೆ : ಕೇಂದ್ರ ಪರಿಷತ್ತಿನ ವಿವಿಧ ಘಟಕಗಳಿಗಾಗಿ ಕಟ್ಟಡ ನಿರ್ಮಾಣ ಕುರಿತಂತೆ, ಸೂಕ್ತ ಉಪನಿಯಮಗಳನ್ನು ರಚಿಸುವುದಲ್ಲದೇ, ಆಯಾ ಘಟಕಕ್ಕೆ ನಿರ್ದೇಶನ ನೀಡುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆದುಕೊಂಡು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಚಲಾಯಿಸತಕ್ಕದ್ದು.

೧೦. ಕೇಂದ್ರ ಪರಿಷತ್ತಿನ ಹಾಗೂ ಇತರ ಘಟಕಗಳ ಅಧ್ಯಕ್ಷರ ಆಯ್ಕೆ : (೧) ಕೇಂದ್ರ ಪರಿಷತ್ತಿನ ಹಾಗೂ ಆಯಾ ಘಟಕಗಳ ಅಧ್ಯಕ್ಷರುಗಳನ್ನು (ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಹಾಗೂ ಹೊರದೇಶ ಘಟಕಗಳ ಅಧ್ಯಕ್ಷರನ್ನು ಹೊರತುಪಡಿಸಿ) ಪರಿಷತ್ತಿನ

ಅರ್ಹ ಮತದಾರರು ಆ್ಯಪ್ ಮೂಲಕ / ಮತದಾನದ ಮೂಲಕ ಚುನಾಯಿಸತಕ್ಕದ್ದು. ಈ ಚುನಾವಣೆ ನಡೆದ ಎರಡು ತಿಂಗಳೊಳಗಾಗಿ ಜಿಲ್ಲಾ, ತಾಲ್ಲೂಕು, ಹೋಬಳಿ ಹಾಗೂ ಗಡಿ ನಾಡು/ರಾಜ್ಯ ಘಟಕಗಳು ರಚನೆಗೊಂಡು ಅವುಗಳು ಕೇಂದ್ರ ಪರಿಷತ್ತು ಸೂಚಿಸುವ ಕಾರ್ಯಚಟುವಟಿಕೆಗಳನ್ನು ನಡೆಸತಕ್ಕದ್ದು.

(೨) ಎಲ್ಲಾ ಜಿಲ್ಲಾ ಘಟಕಗಳ ಅಧ್ಯಕ್ಷರು ಮತ್ತು ಗಡಿ ನಾಡು/ರಾಜ್ಯ ಘಟಕಗಳ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಪದನಿಮಿತ್ತ ಸದಸ್ಯರಾಗಿರತಕ್ಕದ್ದು. ಹೊರರಾಜ್ಯಗಳ, ಕೇಂದ್ರಾಡಳಿತ ಪ್ರದೇಶಗಳ ಹಾಗೂ ಹೊರದೇಶಗಳ ಘಟಕಗಳ ಅಧ್ಯಕ್ಷರನ್ನು ಕಾರ್ಯಕಾರಿ ಸಮಿತಿ ಸಭೆಗೆ ಆಹ್ವಾನಿತರನ್ನಾಗಿ ಕರೆಯಬಹುದು.

(೩) ಪರಿಷತ್ತಿನ ಎಲ್ಲ ಕಾರ್ಯಕಾರಿ ಸಮಿತಿಗಳ ಅವಧಿಯು ಕೇಂದ್ರ ಪರಿಷತ್ತಿನ ಅಧ್ಯಕ್ಷರ ಚುನಾವಣೆ ಫಲಿತಾಂಶ ಘೋಷಣೆಯಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಇರತಕ್ಕದ್ದು.

೧೧. **ಜಿಲ್ಲಾ ಘಟಕಗಳು :** (೧) ಕರ್ನಾಟಕದ ಪ್ರತಿ ಕಂದಾಯ ಜಿಲ್ಲೆಗೆ ಒಂದರಂತೆ ಜಿಲ್ಲಾ ಘಟಕವನ್ನು ರಚಿಸತಕ್ಕದ್ದು.

(೨) ಪ್ರತಿ ಕಂದಾಯ ಜಿಲ್ಲೆಯಲ್ಲಿಯ ಮತದಾರರೇ ಆಯಾ ಜಿಲ್ಲಾ ಘಟಕದ ಅಧ್ಯಕ್ಷರನ್ನು ಆ್ಯಪ್ ಮೂಲಕ / ಮತದಾನದ ಮೂಲಕ ಚುನಾಯಿಸತಕ್ಕದ್ದು. ಒಂದು ಜಿಲ್ಲೆಯ ಮತದಾರರ ಪಟ್ಟಿಯಲ್ಲಿರುವ ಪರಿಷತ್ತಿನ ಸದಸ್ಯ ಬೇರೊಂದು ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವಂತಿಲ್ಲ.

(೩) ಕಂದಾಯ ಜಿಲ್ಲೆಗಳಿಗೆ ತಾಲ್ಲೂಕುಗಳಿರುವಂತೆ ಬೆಂಗಳೂರು ನಗರ ಜಿಲ್ಲೆಗೆ ವಿಧಾನಸಭಾ ಕ್ಷೇತ್ರಗಳಿರುವುದರಿಂದ, ಪ್ರತಿ ವಿಧಾನಸಭಾ ಕ್ಷೇತ್ರವನ್ನು ಪರಿಷತ್ತಿನ ಆಡಳಿತಕ್ಕೋಸ್ಕರವಾಗಿ ಒಂದು ತಾಲ್ಲೂಕನ್ನಾಗಿ ಪರಿಗಣಿಸಿ, ಪ್ರತಿ ಕ್ಷೇತ್ರಕ್ಕೂ, ಪರಿಷತ್ತಿನ ಒಂದು ಘಟಕವನ್ನು ರಚಿಸತಕ್ಕದ್ದು. ಆಯಾ ಕ್ಷೇತ್ರ ಘಟಕದ ಅಧ್ಯಕ್ಷರನ್ನು ಆಯಾ ವಿಧಾನಸಭಾ ಕ್ಷೇತ್ರದಲ್ಲಿ ವಾಸಿಸುವ ಮತದಾರರೇ ಆ್ಯಪ್ ಮೂಲಕ / ಮತದಾನದ ಮೂಲಕ ಚುನಾಯಿಸತಕ್ಕದ್ದು. ಇವರನ್ನು 'ಕ್ಷೇತ್ರ ಘಟಕದ ಅಧ್ಯಕ್ಷರು' ಎಂದು ಕರೆಯುವುದು. ಚುನಾಯಿತ ಅಧ್ಯಕ್ಷರುಗಳು ಬೆಂಗಳೂರು ನಗರ ಜಿಲ್ಲಾ ಕಾರ್ಯಕಾರಿ ಸಮಿತಿಯ ಪದನಿಮಿತ್ತ ಸದಸ್ಯರಾಗುತ್ತಾರೆ.

೧೨. **ಜಿಲ್ಲಾ ಘಟಕಗಳ ಕಾರ್ಯಕಾರಿ ಸಮಿತಿ :** (೧) ಜಿಲ್ಲಾ ಘಟಕದ ದೈನಂದಿನ ಹಾಗೂ ವಿಶೇಷ ಸಂದರ್ಭಗಳ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ, ಆ ಸಂಬಂಧವಾಗಿ ಸೂಕ್ತ ನಿರ್ಣಯ ಕೈಗೊಳ್ಳುವುದಕ್ಕಾಗಿ ಜಿಲ್ಲಾ ಘಟಕದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಸಮಿತಿ ಇರತಕ್ಕದ್ದು.

(೨) ಜಿಲ್ಲಾ ಘಟಕದ ಅಧ್ಯಕ್ಷರು ಇದರ ಪ್ರತಿನಿಧಿಯಾಗಿ ಕಾರ್ಯಕಲಾಪಗಳನ್ನು ನಡೆಸತಕ್ಕದ್ದು. ಈ ಸಮಿತಿಯಲ್ಲಿ ಪದಾಧಿಕಾರಿಗಳು ಸೇರಿದಂತೆ ಸದಸ್ಯರು ಈ ಕೆಳಕಾಣಿಸಿದಂತೆ ಇರತಕ್ಕದ್ದು.

| | | |
|---|---|---|
| ೧. | **ಚುನಾಯಿತ** ಅಧ್ಯಕ್ಷರು | ೦೧ |
| ೨. | ಗೌರವ ಕಾರ್ಯದರ್ಶಿಗಳು | ೦೨ |
| ೩. | ಗೌರವ ಕೋಶಾಧ್ಯಕ್ಷರು | ೦೧ |
| ೪. | ತಾಲ್ಲೂಕು ಘಟಕಗಳ ಚುನಾಯಿತ ಅಧ್ಯಕ್ಷರುಗಳು (ಕಂದಾಯ ಇಲಾಖೆ ಗುರುತುಪಡಿಸಿದಂತೆ; ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ವಿಧಾನಸಭಾ ಕ್ಷೇತ್ರ ಘಟಕಗಳ ಸಂಖ್ಯೆಗೆ ಅನುಗುಣವಾಗಿ ಚುನಾಯಿತ ಅಧ್ಯಕ್ಷರುಗಳು) | – |
| ೫. | ಮಹಿಳಾ ಪ್ರತಿನಿಧಿಗಳು | ೦೨ |
| ೬. | ಪರಿಶಿಷ್ಟ ಜಾತಿ ಪ್ರತಿನಿಧಿಗಳು | ೦೨ |
| ೭. | ಪರಿಶಿಷ್ಟ ಪಂಗಡ ಪ್ರತಿನಿಧಿ | ೦೧ |
| ೮. | **ಅಲ್ಪಸಂಖ್ಯಾತರ ಪ್ರತಿನಿಧಿಗಳು** | **೦೨** |
| ೯. | **ಹಿಂದುಳಿದ ವರ್ಗಗಳ ಪ್ರತಿನಿಧಿಗಳು** | **೦೨** |
| ೧೦. | ಸಂಘ ಸಂಸ್ಥೆಗಳ ಪ್ರತಿನಿಧಿಗಳು | ೦೨ |
| ೧೧. | **ಜಿಲ್ಲಾ ಸಂಘಗಳ ನೋಂದಣಾಧಿಕಾರಿ (ಪದನಿಮಿತ್ತ)** | **೦೧** |
| ೧೨. | **ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಪದನಿಮಿತ್ತ)** | **೦೧** |
| ೧೩. | **ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಪದನಿಮಿತ್ತ)** | **೦೧** |
| ೧೪. | **ಮಹಾವಿದ್ಯಾಲಯದ ಪ್ರಾಂಶುಪಾಲರು (ಪದನಿಮಿತ್ತ)** | **೦೧** |
| ೧೫. | **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಮುಖ್ಯಸ್ಥರು (ಪದನಿಮಿತ್ತ)** | **೦೧** |
| ೧೬. | **ಜಿಲ್ಲಾ ವಾರ್ತಾಧಿಕಾರಿ (ಪದನಿಮಿತ್ತ)** | **೦೧** |
| ೧೭. | **ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು (ಪದನಿಮಿತ್ತ)** | **೦೧** |
| ೧೮. | ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷರು | ೦೧ |

**(೩) ಸಂಘಟನಾ ಕಾರ್ಯದರ್ಶಿಗಳು ಹಾಗೂ ಸಹ ಕಾರ್ಯದರ್ಶಿಗಳು :** ಪರಿಷತ್ತಿನ ಜಿಲ್ಲಾ ಘಟಕದ ಎಲ್ಲ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಜಿಲ್ಲೆಯ ವಿವಿಧ ಭಾಗಗಳಿಗೆ ಪ್ರವಾಸ ಮಾಡುತ್ತಾ ಕಾರ್ಯ ನಿರ್ವಹಿಸುವ ಸಲುವಾಗಿ ಇಬ್ಬರು (೨) ಸಂಘಟನಾ ಕಾರ್ಯದರ್ಶಿಗಳನ್ನು ಹಾಗೂ ಇಬ್ಬರು (೨) ಸಹ ಕಾರ್ಯದರ್ಶಿಗಳನ್ನು ನೇಮಕ ಮಾಡಿಕೊಳ್ಳುವ ಮತ್ತು ಅವರುಗಳ ಜವಾಬ್ದಾರಿ ಹಾಗೂ ಅವರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ನಿಗದಿಗೊಳಿಸುವ ಅಧಿಕಾರ ಆಯಾ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಇರತಕ್ಕದ್ದು.

**(೪) ಅಧ್ಯಕ್ಷರ ತಾತ್ಕಾಲಿಕ ಗೈರುಹಾಜರಿ :** ಯಾವುದೇ ಕಾರಣದಿಂದಲಾದರೂ ಜಿಲ್ಲಾ ಘಟಕದ ಅಧ್ಯಕ್ಷರು ತಾತ್ಕಾಲಿಕವಾಗಿ ಗೈರುಹಾಜರಾದಲ್ಲಿ, ಜಿಲ್ಲಾ ಘಟಕದ ಕಾರ್ಯಚಟುವಟಿಕೆಗಳನ್ನು, ಸಭೆಗಳನ್ನು ನಡೆಸಲು, ತಾಲ್ಲೂಕು ಘಟಕಗಳ ಚುನಾಯಿತ ಅಧ್ಯಕ್ಷರುಗಳಲ್ಲಿ ಒಬ್ಬರನ್ನು ತಾತ್ಕಲಿಕ ಅಧ್ಯಕ್ಷರನ್ನಾಗಿ ಆಯ್ಕೆಮಾಡುವ ಅಧಿಕಾರ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಇರುತ್ತದೆ.

**೧೩. ತಾಲ್ಲೂಕು / ಕ್ಷೇತ್ರ ಘಟಕಗಳು :** (೧) ತಾಲ್ಲೂಕು / ಕ್ಷೇತ್ರ ಘಟಕದ ದೈನಂದಿನ ಹಾಗೂ ವಿಶೇಷ ಸಂದರ್ಭಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ, ಆ

ಸಂಬಂಧವಾಗಿ ಸೂಕ್ತ ನಿರ್ಣಯ ಕೈಗೊಳ್ಳುವುದಕ್ಕಾಗಿ ತಾಲ್ಲೂಕು / ಕ್ಷೇತ್ರ ಘಟಕದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಸಮಿತಿ ಇರತಕ್ಕದ್ದು. ತಾಲ್ಲೂಕು ಅಧ್ಯಕ್ಷರನ್ನು ಆಯಾ ತಾಲ್ಲೂಕಿನ ಅರ್ಹ ಮತದಾರರು ಆ್ಯಪ್ ಮೂಲಕ / ಮತದಾನದ ಮೂಲಕ ಚುನಾಯಿಸತಕ್ಕದ್ದು.

(೨) ತಾಲ್ಲೂಕು / ಕ್ಷೇತ್ರ ಘಟಕದ ಅಧ್ಯಕ್ಷರು ಇದರ ಪ್ರತಿನಿಧಿಯಾಗಿ ಕಾರ್ಯ ಕಲಾಪಗಳನ್ನು ನಡೆಸತಕ್ಕದ್ದು. ಈ ಸಮಿತಿಯಲ್ಲಿ ಪದಾಧಿಕಾರಿಗಳು ಸೇರಿದಂತೆ ಸದಸ್ಯರು ಈ ಕೆಳಕಾಣಿಸಿದಂತೆ ಇರತಕ್ಕದ್ದು.

| | | |
|---|---|---|
| ೧. | ಚುನಾಯಿತ ಅಧ್ಯಕ್ಷರು | ೦೧ |
| ೨. | ಗೌರವ ಕಾರ್ಯದರ್ಶಿಗಳು | ೦೨ |
| ೩ | ಗೌರವ ಕೋಶಾಧ್ಯಕ್ಷರು | ೦೧ |
| ೪. | ಚುನಾಯಿತ ಹೋಬಳಿ ಅಧ್ಯಕ್ಷರುಗಳು<br>(ಆಯಾ ತಾಲ್ಲೂಕಿನಲ್ಲಿರುವ ಹೋಬಳಿಗಳ ಒಟ್ಟು ಸಂಖ್ಯೆಗನುಗುಣವಾಗಿ) | –– |
| ೫. | ಮಹಿಳಾ ಪ್ರತಿನಿಧಿಗಳು | ೦೨ |
| ೬. | ಪರಿಶಿಷ್ಟ ಜಾತಿ ಪ್ರತಿನಿಧಿಗಳು | ೦೨ |
| ೭. | ಪರಿಶಿಷ್ಟ ಪಂಗಡ ಪ್ರತಿನಿಧಿ | ೦೧ |
| ೮. | ಹಿಂದುಳಿದ ವರ್ಗಗಳ ಪ್ರತಿನಿಧಿ | ೦೧ |
| ೯. | ಅಲ್ಪಸಂಖ್ಯಾತರ ಪ್ರತಿನಿಧಿ | ೦೧ |
| ೧೦. | ಸಂಘ ಸಂಸ್ಥೆಗಳ ಪ್ರತಿನಿಧಿ | ೦೧ |
| ೧೧. | ಉಪವಿಭಾಗದ ಸಹಕಾರ ಸಂಘದ ಸಹಾಯಕ ನಿಬಂಧಕರು (ಪದನಿಮಿತ್ತ) | ೦೧ |
| ೧೨. | ತಾಲ್ಲೂಕು ಶಿಕ್ಷಣಾಧಿಕಾರಿಗಳು (ಪದನಿಮಿತ್ತ) | ೦೧ |
| ೧೩. | ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು (ಪದನಿಮಿತ್ತ) | ೦೧ |
| ೧೪. | ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರು (ಪದನಿಮಿತ್ತ) | ೦೧ |
| ೧೫. | ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು (ಪದನಿಮಿತ್ತ) | ೦೧ |
| ೧೬. | ತಾಲ್ಲೂಕು / ಕ್ಷೇತ್ರ ಘಟಕದ ನಿಕಟಪೂರ್ವ ಅಧ್ಯಕ್ಷರು | ೦೧ |

(೩) *ಸಂಘಟನಾ ಕಾರ್ಯದರ್ಶಿಗಳು :* ಪರಿಷತ್ತಿನ ತಾಲ್ಲೂಕು / ಕ್ಷೇತ್ರ ಘಟಕದ ಎಲ್ಲ ಕಾರ್ಯ ಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ತಾಲ್ಲೂಕಿನ / ಕ್ಷೇತ್ರದ ವಿವಿಧ ಭಾಗಗಳಿಗೆ ಪ್ರವಾಸ ಮಾಡುತ್ತಾ ಕಾರ್ಯ ನಿರ್ವಹಿಸುವ ಸಲುವಾಗಿ ಇಬ್ಬರು (೨) ಸಂಘಟನಾ ಕಾರ್ಯದರ್ಶಿಗಳನ್ನು ನೇಮಕ ಮಾಡಿಕೊಳ್ಳುವ ಮತ್ತು ಅವರುಗಳ ಜವಾಬ್ದಾರಿ ಹಾಗೂ ಅವರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ನಿಗದಿಗೊಳಿಸುವ ಅಧಿಕಾರ ಆಯಾ ತಾಲ್ಲೂಕು / ಕ್ಷೇತ್ರ ಘಟಕದ ಅಧ್ಯಕ್ಷರಿಗೆ ಇರತಕ್ಕದ್ದು.

(೪) ಅಧ್ಯಕ್ಷರ ತಾತ್ಕಾಲಿಕ ಗೈರುಹಾಜರಿ : ಯಾವುದೇ ಕಾರಣದಿಂದಲಾದರೂ ತಾಲ್ಲೂಕು / ಕ್ಷೇತ್ರ ಘಟಕದ ಅಧ್ಯಕ್ಷರು ತಾತ್ಕಾಲಿಕವಾಗಿ ಗೈರು ಹಾಜರಾದಲ್ಲಿ, ಘಟಕದ ಕಾರ್ಯಚಟುವಟಿಕೆಗಳನ್ನು, ಸಭೆಗಳನ್ನು ನಡೆಸಲು ತಾಲ್ಲೂಕು /ಕ್ಷೇತ್ರ ಘಟಕದ ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರೊಬ್ಬರನ್ನು ತಾತ್ಕಾಲಿಕ ಅಧ್ಯಕ್ಷರನ್ನಾಗಿ ಆಯ್ಕೆಮಾಡುವ ಅಧಿಕಾರ ಘಟಕದ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ.

೧೪. ಹೋಬಳಿ ಘಟಕಗಳು : (೧) ತಾಲ್ಲೂಕು ಘಟಕದ ವ್ಯಾಪ್ತಿಯಲ್ಲಿನ ಹೋಬಳಿಗಳಲ್ಲಿ ಪರಿಷತ್ತಿನ ಘಟಕಗಳನ್ನು ಅಸ್ತಿತ್ವಕ್ಕೆ ತರುವ ಅಧಿಕಾರ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು. ಹೀಗೆ ರಚಿಸಲ್ಪಟ್ಟ ಹೋಬಳಿ ಘಟಕಗಳ ಅಧ್ಯಕ್ಷರನ್ನು ಆಯಾ ಹೋಬಳಿಯ ಅರ್ಹ ಮತದಾರರು ಆ್ಯಪ್ ಮೂಲಕ / ಮತದಾನದ ಮೂಲಕ ಚುನಾಯಿಸತಕ್ಕದ್ದು.

(೨) ಹೋಬಳಿ ಘಟಕದ ದೈನಂದಿನ ಹಾಗೂ ವಿಶೇಷ ಸಂದರ್ಭಗಳ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ, ಆ ಸಂಬಂಧವಾಗಿ ಸೂಕ್ತ ನಿರ್ಣಯ ಕೈಗೊಳ್ಳುವುದಕ್ಕಾಗಿ ಆ ಘಟಕದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಸಮಿತಿ ಇರತಕ್ಕದ್ದು.

(೩) ಹೋಬಳಿ ಘಟಕದ ಅಧ್ಯಕ್ಷರು ಇದರ ಪ್ರತಿನಿಧಿಯಾಗಿ ಕಾರ್ಯಕಲಾಪಗಳನ್ನು ನಡೆಸತಕ್ಕದ್ದು. ಈ ಸಮಿತಿಯಲ್ಲಿ ಪದಾಧಿಕಾರಿಗಳು ಸೇರಿದಂತೆ ಸದಸ್ಯರು ಈ ಕೆಳಕಾಣಿಸಿದಂತೆ ಇರತಕ್ಕದ್ದು.

| | | |
|---|---|---|
| ೧. | ಚುನಾಯಿತ ಅಧ್ಯಕ್ಷರು | ೦೧ |
| ೨. | ಗೌರವ ಕಾರ್ಯದರ್ಶಿ | ೦೧ |
| ೩. | ಗೌರವ ಕೋಶಾಧ್ಯಕ್ಷರು | ೦೧ |
| ೪. | ಮಹಿಳಾ ಪ್ರತಿನಿಧಿ | ೦೧ |
| ೫. | ಪರಿಶಿಷ್ಟ ಜಾತಿ ಪ್ರತಿನಿಧಿ | ೦೧ |
| ೬. | ಪರಿಶಿಷ್ಟ ಪಂಗಡ ಪ್ರತಿನಿಧಿ | ೦೧ |
| ೭. | ಹಿಂದುಳಿದ ವರ್ಗಗಳ ಪ್ರತಿನಿಧಿ | ೦೧ |
| ೮. | ಅಲ್ಪಸಂಖ್ಯಾತರ ಪ್ರತಿನಿಧಿ | ೦೧ |
| ೯. | ಹೋಬಳಿ ಮಟ್ಟದಲ್ಲಿರುವ ಶಿಕ್ಷಣ ಇಲಾಖೆಯ ಮುಖ್ಯಸ್ಥರು (ಪದನಿಮಿತ್ತ) | ೦೧ |
| ೧೦. | ಪದವಿಪೂರ್ವ/ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರು ಅಥವಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು | ೦೧ |

(೪) ಸಂಘಟನಾ ಕಾರ್ಯದರ್ಶಿ : ಪರಿಷತ್ತಿನ ಹೋಬಳಿ ಘಟಕದ ಎಲ್ಲ ಕಾರ್ಯ ಚಟುವಟಿಕೆ ಗಳನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಹೋಬಳಿಯ

ವಿವಿಧ ಭಾಗಗಳಿಗೆ ಪ್ರವಾಸ ಮಾಡುತ್ತಾ ಕಾರ್ಯ ನಿರ್ವಹಿಸುವ ಸಲುವಾಗಿ ಒಬ್ಬರು (೧) ಸಂಘಟನಾ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಳ್ಳುವ ಮತ್ತು ಅವರ ಜವಾಬ್ದಾರಿ ಹಾಗೂ ಅವರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ನಿಗದಿಗೊಳಿಸುವ ಅಧಿಕಾರ ಆಯಾ ಹೋಬಳಿ ಘಟಕದ ಅಧ್ಯಕ್ಷರಿಗೆ ಇರತಕ್ಕದ್ದು.

(೫) ಅಧ್ಯಕ್ಷರ ತಾತ್ಕಾಲಿಕ ಗೈರುಹಾಜರಿ : ಯಾವುದೇ ಕಾರಣದಿಂದಲಾದರೂ ಹೋಬಳಿ ಘಟಕದ ಅಧ್ಯಕ್ಷರು ತಾತ್ಕಾಲಿಕವಾಗಿ ಗೈರುಹಾಜರಾದಲ್ಲಿ, ಘಟಕದ ಕಾರ್ಯಚಟುವಟಿಕೆಗಳನ್ನು, ಸಭೆಗಳನ್ನು ನಡೆಸಲು ಹೋಬಳಿ ಘಟಕದ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ತಾತ್ಕಾಲಿಕ ಅಧ್ಯಕ್ಷರನ್ನಾಗಿ ಆಯ್ಕೆಮಾಡುವ ಅಧಿಕಾರ ಹೋಬಳಿ ಘಟಕದ ಅಧ್ಯಕ್ಷರಿಗೆ ಇರುತ್ತದೆ.

(೬) ೨೦೨೧–೨೦೨೬ರ ಅವಧಿಯಲ್ಲಿಯೇ ತಿದ್ದುಪಡಿಯಾದ ನಿಯಮ–ನಿಬಂಧನೆಗಳಿಗೆ ಅನುಗುಣವಾಗಿ ಮುಂದಿನ ಅವಧಿಗೆ ಚುನಾವಣೆ ಜರುಗುವ ಮೊದಲೇ ಹೋಬಳಿ ಘಟಕಗಳನ್ನು ಅಸ್ತಿತ್ವಕ್ಕೆ ತರುವುದು : ರಾಜ್ಯದ ಅನೇಕ ಗ್ರಾಮಗಳು ಗಣನೀಯವಾಗಿ ಅಭಿವೃದ್ಧಿ ಗೊಂಡಿರುವುದರಿಂದ ಕೆಲ ತಾಲ್ಲೂಕುಗಳ ಹೋಬಳಿಗಳಿಗೆ ಪರಿಷತ್ತಿನ ಘಟಕಗಳನ್ನು ಸ್ಥಾಪಿಸುವುದು ಅವಶ್ಯವೆಂದು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಮನವರಿಕೆಯಾದಲ್ಲಿ ತಿದ್ದುಪಡಿಯಾದ ನಿಯಮ–ನಿಬಂಧನೆಗಳಿಗೆ ಅನುಗುಣವಾಗಿ ಮುಂದಿನ ಚುನಾವಣೆಯ ಪೂರ್ವದಲ್ಲಿ ಹೋಬಳಿ ಘಟಕಗಳನ್ನು ರಚಿಸುವ ಅಧಿಕಾರ, ಈ ತಿದ್ದುಪಡಿ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಕೇಂದ್ರ ಪರಿಷತ್ತಿಗೆ ಇರತಕ್ಕದ್ದು. ಹೀಗೆ ಘಟಕಗಳನ್ನು ಅಸ್ತಿತ್ವಕ್ಕೆ ತಂದು ಅವುಗಳಿಗೆ ಅಧ್ಯಕ್ಷರನ್ನು, ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು, ಸದಸ್ಯರನ್ನು, ಆಯಾ ಜಿಲ್ಲಾ ಘಟಕದ ಅಧ್ಯಕ್ಷರೊಂದಿಗೆ ಸಮಾಲೋಚಿಸಿ ನಾಮನಿರ್ದೇಶನ ಮಾಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು. ಹೋಬಳಿ ಘಟಕಗಳ ಕಾರ್ಯಕಾರಿ ಸಮಿತಿಯ ರಚನೆಗೆ, ಕಾರ್ಯವ್ಯಾಪ್ತಿಗೆ ಹಾಗೂ ಕಾರ್ಯಕಲಾಪಗಳಿಗೆ ಪ್ರಸ್ತುತ ತಿದ್ದುಪಡಿಯಾದ ನಿಯಮಗಳು ಅನ್ವಯವಾಗತಕ್ಕದ್ದು. ಪರಿಷತ್ತಿನ ಪ್ರಸ್ತುತ ಅವಧಿಯು ೨೦೨೬ರಲ್ಲಿ ಕೊನೆಗೊಂಡ ನಂತರ ಹೋಬಳಿ ಘಟಕದ ಅಧ್ಯಕ್ಷರ ಸ್ಥಾನಕ್ಕೂ ಚುನಾವಣೆ ಜರುಗಬೇಕಾಗಿರುವುದರಿಂದ ಆ ನಂತರದ ಹೋಬಳಿ ಘಟಕದ ಕಾರ್ಯಕಾರಿ ಸಮಿತಿಯ ರಚಿಸುವ ಸಂಬಂಧ ಈ ನಿಯಮ ಅನ್ವಯಿಸುವುದಿಲ್ಲ. ನಿಯಮ ೩೨(೩) ಅನ್ವಯವಾಗತಕ್ಕದ್ದು.

(೭) ವಾರ್ಡ್ ಘಟಕಗಳು : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷರೊಂದಿಗೆ ಹಾಗೂ ಆಯಾ ಕ್ಷೇತ್ರ ಘಟಕದ ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ಪಡೆದುಕೊಂಡು ಪ್ರತಿ ವಾರ್ಡ್‌ಗೂ ಒಂದರಂತೆ 'ವಾರ್ಡ್ ಘಟಕ'ವನ್ನು ಸ್ಥಾಪಿಸುವ ಹಾಗೂ ಅದಕ್ಕೆ

ಒಬ್ಬರು ಅಧ್ಯಕ್ಷರು, ಒಬ್ಬರು ಗೌರವ ಕಾರ್ಯದರ್ಶಿ, ಒಬ್ಬರು ಗೌರವ ಕೋಶಾಧ್ಯಕ್ಷರನ್ನು ಹಾಗೂ ಇಬ್ಬರು ಸದಸ್ಯರನ್ನು (ಈ ಐವರಲ್ಲಿ ಕನಿಷ್ಠ ಇಬ್ಬರು ಮಹಿಳೆಯರನ್ನು ಒಳಗೊಂಡಂತೆ) ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ನಾಮನಿರ್ದೇಶನ ಮಾಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ.

೧೫. ಗಡಿ ನಾಡು/ರಾಜ್ಯ ಘಟಕಗಳು : (೧) ಗಡಿ ನಾಡು/ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗೋವಾ ಮತ್ತು ಕೇರಳ ರಾಜ್ಯಗಳಲ್ಲಿ 'ಗಡಿ ನಾಡು/ರಾಜ್ಯ ಘಟಕ'ಗಳನ್ನು ಕೇಂದ್ರ ಪರಿಷತ್ತು ರಚಿಸತಕ್ಕದ್ದು.

(೨) ಗಡಿ ನಾಡು/ರಾಜ್ಯ ಘಟಕದ ದೈನಂದಿನ ಹಾಗೂ ವಿಶೇಷ ಸಂದರ್ಭಗಳ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ, ಆ ಸಂಬಂಧವಾಗಿ ಸೂಕ್ತ ನಿರ್ಣಯ ಕೈಗೊಳ್ಳುವುದಕ್ಕಾಗಿ ಆ ಘಟಕದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಸಮಿತಿ ಇರತಕ್ಕದ್ದು.

(೩) ಗಡಿ ನಾಡು/ರಾಜ್ಯ ಘಟಕದ ಅಧ್ಯಕ್ಷರು ಇದರ ಪ್ರತಿನಿಧಿಯಾಗಿ ಕಾರ್ಯಕಲಾಪಗಳನ್ನು ನಡೆಸತಕ್ಕದ್ದು. ಈ ಸಮಿತಿಯಲ್ಲಿ ಪದಾಧಿಕಾರಿಗಳು ಸೇರಿದಂತೆ ಸದಸ್ಯರು ಈ ಕೆಳಕಾಣಿಸಿದಂತೆ ಇರತಕ್ಕದ್ದು.

| | | |
|---|---|---|
| ೧. | ಚುನಾಯಿತ ಅಧ್ಯಕ್ಷರು | ೦೧ |
| ೨. | ಗೌರವ ಕಾರ್ಯದರ್ಶಿಗಳು | ೦೨ |
| ೩. | ಗೌರವ ಕೋಶಾಧ್ಯಕ್ಷರು | ೦೧ |
| ೪. | ಮಹಿಳಾ ಪ್ರತಿನಿಧಿ | ೦೧ |
| ೫. | ಪರಿಶಿಷ್ಟ ಜಾತಿ ಪ್ರತಿನಿಧಿ | ೦೧ |
| ೬. | ಪರಿಶಿಷ್ಟ ಪಂಗಡ ಪ್ರತಿನಿಧಿ | ೦೧ |
| ೭. | ಹಿಂದುಳಿದ ವರ್ಗಗಳ ಪ್ರತಿನಿಧಿ | ೦೧ |
| ೮. | ಅಲ್ಪಸಂಖ್ಯಾತರ ಪ್ರತಿನಿಧಿ | ೦೧ |
| ೯. | ಸ್ಥಳೀಯ ಕನ್ನಡ ಸಂಘ-ಸಂಸ್ಥೆಗಳ ಅಧ್ಯಕ್ಷರುಗಳು | ೦೨ |

(೪) ಸಂಘಟನಾ ಕಾರ್ಯದರ್ಶಿಗಳು : ಪರಿಷತ್ತಿನ ಗಡಿ ನಾಡು/ರಾಜ್ಯ ಘಟಕದ ಎಲ್ಲ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಗಡಿನಾಡು/ರಾಜ್ಯದ ವಿವಿಧ ಭಾಗಗಳಿಗೆ ಪ್ರವಾಸ ಮಾಡುತ್ತಾ ಕಾರ್ಯ ನಿರ್ವಹಿಸುವ ಸಲುವಾಗಿ ಇಬ್ಬರು (೨) ಸಂಘಟನಾ ಕಾರ್ಯದರ್ಶಿಗಳನ್ನು ನೇಮಕ ಮಾಡಿಕೊಳ್ಳುವ ಮತ್ತು ಅವರುಗಳ ಜವಾಬ್ದಾರಿ ಹಾಗೂ ಅವರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ನಿಗದಿಗೊಳಿಸುವ ಅಧಿಕಾರ ಆಯಾ ಗಡಿನಾಡು/ರಾಜ್ಯ ಘಟಕದ ಅಧ್ಯಕ್ಷರಿಗೆ ಇರತಕ್ಕದ್ದು.

(೫) ಒಂದು ಗಡಿನಾಡು/ರಾಜ್ಯ ಮತದಾರರ ಪಟ್ಟಿಯಲ್ಲಿರುವ ಮತದಾರರು ಬೇರೊಂದು ಗಡಿ ನಾಡು/ರಾಜ್ಯದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವಂತಿಲ್ಲ ಮತ್ತು ಚುನಾವಣೆಯಲ್ಲಿ ಆ ಸ್ಥಾನಕ್ಕೆ ಸ್ಪರ್ಧಿಸಿದ ಅಭ್ಯರ್ಥಿಗಳ ಪರ ಮತದಾನ ಮಾಡುವಂತಿಲ್ಲ.

(೬) ಗಡಿ ನಾಡು/ರಾಜ್ಯಗಳಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳನ್ನು ಸ್ಥಾಪಿಸುವುದು : ಯಾವುದೇ ಗಡಿ ನಾಡು/ರಾಜ್ಯದಲ್ಲಿಯ ಜಿಲ್ಲೆಗಳಲ್ಲಿ ಜಿಲ್ಲಾ ಘಟಕಗಳನ್ನು, ತಾಲ್ಲೂಕುಗಳಲ್ಲಿ ತಾಲ್ಲೂಕು ಘಟಕಗಳನ್ನು, ಆಯಾ ಜಿಲ್ಲೆ / ತಾಲ್ಲೂಕಿನಲ್ಲಿ ಇರುವ ಕನ್ನಡಿಗರ ಸಂಖ್ಯೆಗೆ ಅನುಗುಣವಾಗಿ ಸ್ಥಾಪಿಸುವುದು ಅವಶ್ಯವೆಂದು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಕಂಡುಬಂದಲ್ಲಿ, ಆಯಾ ಜಿಲ್ಲಾ ಘಟಕ / ತಾಲ್ಲೂಕು ಘಟಕ ಸ್ಥಾಪಿಸುವ; ಆಯಾ ಘಟಕಗಳಿಗೆ ಸಂಬಂಧಿಸಿದಂತೆ ಕಾರ್ಯಕಾರಿ ಸಮಿತಿಯ ಸ್ವರೂಪವನ್ನು ನಿರ್ಣಯಿಸಿ ರಚಿಸುವ ಹಾಗೂ ಆಯಾ ಘಟಕದ ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯಾ ಗಡಿ ನಾಡು/ರಾಜ್ಯಗಳ ಚುನಾಯಿತ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸಿ, ನಾಮನಿರ್ದೇಶನ ಮಾಡುವ ಮೂಲಕ ನೇಮಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು. ಹೀಗೆ ರಚನೆಯಾದ ಜಿಲ್ಲಾ ಘಟಕಗಳ ಅಧ್ಯಕ್ಷರು ಗಡಿ ನಾಡು/ರಾಜ್ಯ ಘಟಕದ ಹಾಗೂ ತಾಲ್ಲೂಕು ಘಟಕಗಳ ಅಧ್ಯಕ್ಷರು ಆಯಾ ಜಿಲ್ಲಾ ಘಟಕದ ಕಾರ್ಯಕಾರಿ ಸಮಿತಿಯ ಸದಸ್ಯ ರಾಗಿರುತ್ತಾರೆ.

(೭) ಅಧ್ಯಕ್ಷರ ತಾತ್ಕಾಲಿಕ ಗೈರುಹಾಜರಿ : ಯಾವುದೇ ಕಾರಣದಿಂದಲಾದರೂ ಗಡಿನಾಡು/ ರಾಜ್ಯ ಘಟಕದ ಅಧ್ಯಕ್ಷರು ತಾತ್ಕಾಲಿಕವಾಗಿ ಗೈರು ಹಾಜರಾದಲ್ಲಿ, ಘಟಕದ ಕಾರ್ಯ ಚಟುವಟಿಕೆ ಗಳನ್ನು, ಸಭೆಗಳನ್ನು ನಡೆಸಲು ಗಡಿ ನಾಡು/ರಾಜ್ಯ ಘಟಕದ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಒಬ್ಬರನ್ನು ತಾತ್ಕಾಲಿಕ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಅಧಿಕಾರ ಗಡಿ ನಾಡು/ರಾಜ್ಯ ಘಟಕದ ಅಧ್ಯಕ್ಷರಿಗೆ ಇರುತ್ತದೆ.

೧೬. ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕ : ಭಾರತದ ಬೇರಾವುದೇ ರಾಜ್ಯದಲ್ಲಿ (ಕರ್ನಾಟಕ ಮತ್ತು ಗಡಿನಾಡು/ರಾಜ್ಯಗಳನ್ನು ಹೊರತುಪಡಿಸಿ) ಮತ್ತು ಯಾವುದೇ ಕೇಂದ್ರಾಡಳಿತ ಪ್ರದೇಶದಲ್ಲಿ ಕನಿಷ್ಠ ೧೦೦ ಮಂದಿ ಪರಿಷತ್ತಿನ ಆಜೀವ ಸದಸ್ಯರು ಇದ್ದರೆ, ಅಂತಹ ರಾಜ್ಯಕ್ಕೆ / ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ 'ಹೊರರಾಜ್ಯ / ಕೇಂದ್ರಾಡಳಿತ ಪ್ರದೇಶ ಘಟಕ'ವನ್ನು ಅಸ್ತಿತ್ವಕ್ಕೆ ತರಬಹುದು.

೧೭. ಹೊರದೇಶ ಘಟಕ : (೧) ವಿಶ್ವಸಂಸ್ಥೆಯ ಮಾನ್ಯತೆ ಪಡೆದ ಯಾವುದೇ ಹೊರದೇಶದಲ್ಲಿ ಕನಿಷ್ಠ ೧೦೦ ಮಂದಿ ಪರಿಷತ್ತಿನ ಆಜೀವ ಸದಸ್ಯರಿದ್ದರೆ ಅಂತಹ ದೇಶದಲ್ಲಿ ಹೊರದೇಶ ಘಟಕ ತೆರೆಯಬಹುದು.

(೨) ಅಸ್ತಿತ್ವಕ್ಕೆ ಬಂದ ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಹಾಗೂ ಹೊರದೇಶ ಘಟಕಗಳಿಗೆ ಅಧ್ಯಕ್ಷರನ್ನು ನಾಮನಿರ್ದೇಶನ ಮಾಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ.

೧೮. ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಘಟಕಗಳ ಕಾರ್ಯಕಾರಿ ಸಮಿತಿ : (೧) ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಘಟಕಗಳ ಅಧ್ಯಕ್ಷರು ನಾಮನಿರ್ದೇಶನಗೊಂಡ ನಂತರದ ಎರಡು ತಿಂಗಳೊಳಗಾಗಿ ತಮ್ಮ ತಮ್ಮ ಘಟಕಗಳಿಗೆ ಈ ಕೆಳಕಾಣಿಸಿದಂತೆ ಕಾರ್ಯಕಾರಿ ಸಮಿತಿಯನ್ನು ರಚಿಸಿಕೊಂಡು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಂದ ಅನುಮೋದನೆ ಪಡೆದುಕೊಳ್ಳತಕ್ಕದ್ದು.

| | | |
|---|---|---|
| ೧. | ಅಧ್ಯಕ್ಷರು | ೦೧ |
| ೨. | ಗೌರವ ಕಾರ್ಯದರ್ಶಿ | ೦೧ |
| ೩. | ಗೌರವ ಕೋಶಾಧ್ಯಕ್ಷರು | ೦೧ |

(೨) ಈ ಘಟಕಗಳ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗುವವರು ಆಯಾ ರಾಜ್ಯದ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಘಟಕಗಳ ಕಾರ್ಯವ್ಯಾಪ್ತಿಯಲ್ಲಿ ವಾಸವಾಗಿದ್ದು, ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

೧೯. ಕೇಂದ್ರ ಪರಿಷತ್ತಿನ ಅಧ್ಯಕ್ಷರ ಅಧಿಕಾರ ಮತ್ತು ಜವಾಬ್ದಾರಿಗಳು : (೧) ಕೇಂದ್ರ ಪರಿಷತ್ತಿನ ದೈನಂದಿನ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ಜರುಗುವಂತೆ ನೋಡಿಕೊಳ್ಳುವುದು.

(೨) ಕಾರ್ಯಕಾರಿ ಸಮಿತಿಯನ್ನೊಳಗೊಂಡಂತೆ ಸಾಮಾನ್ಯ ಸಭೆ, ವಿಶೇಷ ಸಾಮಾನ್ಯ ಸಭೆ, ಸಲಹಾ ಸಮಿತಿ, ಉಪಸಮಿತಿ ಹಾಗೂ ಇನ್ನಿತರೆ ಸಮಿತಿ ಸಭೆಗಳ ಅಧ್ಯಕ್ಷತೆಯನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರೇ ವಹಿಸುವುದು.

(೩) ಹೊಸ ಘಟಕಗಳಿಗೆ ನಾಮನಿರ್ದೇಶನ : ಹೊಸ ರಾಜ್ಯ ರಚನೆಯಾದ ಕಾರಣದಿಂದಾಗಿ ಹೊಸ ಗಡಿ ನಾಡು/ರಾಜ್ಯ ರಚನೆಯಾದಲ್ಲಿ, ಅಂತಹ ಗಡಿ ನಾಡು/ ರಾಜ್ಯ ಘಟಕಕ್ಕೆ; ಹೊರರಾಜ್ಯದಲ್ಲಿ ಘಟಕ ಸ್ಥಾಪಿಸಿದ್ದಲ್ಲಿ, ಅಂತಹ ಹೊರರಾಜ್ಯ ಘಟಕಕ್ಕೆ ಅಧ್ಯಕ್ಷರನ್ನು ಹಾಗೂ ಕರ್ನಾಟಕ ರಾಜ್ಯದಲ್ಲಿ ಹೊಸ ಜಿಲ್ಲೆ, ತಾಲ್ಲೂಕು, ಕ್ಷೇತ್ರ ಅಥವಾ ಹೋಬಳಿ ರಚನೆಯಾದಲ್ಲಿ ಆಯಾ ಜಿಲ್ಲೆ, ತಾಲ್ಲೂಕು, ಕ್ಷೇತ್ರ, ಹೋಬಳಿಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಅಸ್ತಿತ್ವಕ್ಕೆ ತಂದು ಅವುಗಳ ಘಟಕಗಳಿಗೆ ಅಧ್ಯಕ್ಷರನ್ನು ನಾಮನಿರ್ದೇಶನ ಮಾಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು. ಇಂತಹ ಅಧ್ಯಕ್ಷರುಗಳನ್ನು ಹಾಗೂ ಪದಾಧಿಕಾರಿಗಳನ್ನು ನಾಮನಿರ್ದೇಶನ ಮಾಡುವ ಕೇಂದ್ರ ಪರಿಷತ್ತಿನ ಅಧ್ಯಕ್ಷರು ನಿಯಮ ೩೨(೭) ರಲ್ಲಿ ವಿವರಿಸಿರುವ ಅರ್ಹತೆಯನ್ನು ಪರಿಗಣಿಸತಕ್ಕದ್ದು. ಈ ಸಂಬಂಧವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರು ತಮ್ಮ ಕಾರ್ಯಕಾರಿ ಸಮಿತಿಯ ಅನುಮೋದನೆ ಯನ್ನು ಪಡೆಯತಕ್ಕದ್ದು.

(೪) ಕೇಂದ್ರ ಪರಿಷತ್ತಿನ ಅಧ್ಯಕ್ಷರ ಆಪ್ತ ಸಿಬ್ಬಂದಿಯ ನೇಮಕ : ಕೇಂದ್ರ ಪರಿಷತ್ತಿನ ಅಧ್ಯಕ್ಷರು ತಮ್ಮ ಅಧಿಕಾರಾವಧಿಗೆ ಸೀಮಿತಗೊಳ್ಳುವಂತೆ ಗುತ್ತಿಗೆ ಆಧಾರದ ಮೇಲೆ ಆಪ್ತ ಸಿಬ್ಬಂದಿಯನ್ನಾಗಿ, ಇಬ್ಬರು ಆಪ್ತ ಸಹಾಯಕರನ್ನು, ಮಾಧ್ಯಮ ಸಲಹೆಗಾರರೊಬ್ಬರನ್ನು, ಕಾನೂನು ಸಲಹೆಗಾರರೊಬ್ಬರನ್ನು, ಸಾರ್ವಜನಿಕ ಸಂಪರ್ಕಾಧಿಕಾರಿಯೊಬ್ಬರನ್ನು ಹಾಗೂ ಇನ್ನಿತರ ಅತ್ಯವಶ್ಯಕ ಸಿಬ್ಬಂದಿಗಳನ್ನು ನೇಮಕ

ಮಾಡಿಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು. ಅವರಿಗೆ ಗೌರವ ಸಂಭಾವನೆಯನ್ನು ಹಣಕಾಸು ಸಲಹಾ ಸಮಿತಿಯ ಸಮ್ಮತಿಯೊಂದಿಗೆ, ನಿಗದಿಪಡಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರತಕ್ಕದ್ದು.

(೫) ಸಂಘಟನಾ ಕಾರ್ಯದರ್ಶಿಗಳು ಹಾಗೂ ಸಹಕಾರ್ಯದರ್ಶಿಗಳು : ಪರಿಷತ್ತಿನ ಎಲ್ಲ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ರಾಜ್ಯದ ವಿವಿಧ ಭಾಗಗಳಿಗೆ ಪ್ರವಾಸ ಮಾಡುತ್ತಾ ಕಾರ್ಯನಿರ್ವಹಿಸುವ ಸಲುವಾಗಿ ಐವರು (೫) ಸಂಘಟನಾ ಕಾರ್ಯದರ್ಶಿಗಳನ್ನು ಹಾಗೂ ಮೂವರು (೩) ಸಹ ಕಾರ್ಯದರ್ಶಿಗಳನ್ನು ನೇಮಕ ಮಾಡಿಕೊಳ್ಳುವ ಮತ್ತು ಅವರುಗಳ ಜವಾಬ್ದಾರಿ ಹಾಗೂ ಅವರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ನಿಗದಿಗೊಳಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು.

೨೦. ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅಧಿಕಾರ ಮತ್ತು ಜವಾಬ್ದಾರಿಗಳು :

(೧) ಪರಿಷತ್ತಿನ ಕೇಂದ್ರ ಕಚೇರಿಯ ದೈನಂದಿನ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಲು ಪರಿಷತ್ತಿನ ಅಧ್ಯಕ್ಷರು, ಗೌರವ ಕಾರ್ಯದರ್ಶಿಗಳು ಮತ್ತು ಗೌರವ ಕೋಶಾಧ್ಯಕ್ಷರು ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರಿನಲ್ಲಿಯೇ ವಾಸವಾಗಿರತಕ್ಕದ್ದು.

(೨) ಕೇಂದ್ರ ಚುನಾವಣಾಧಿಕಾರಿ ನೇಮಕಾತಿ : ಕೇಂದ್ರ ಪರಿಷತ್ತಿನ ಅಧ್ಯಕ್ಷರ ಹಾಗೂ ಪರಿಷತ್ತಿನ ಘಟಕಗಳ ಅಧ್ಯಕ್ಷರ ಅಧಿಕಾರಾವಧಿ ಕೊನೆಗೊಳ್ಳುವ ಆರು ತಿಂಗಳ ಮೊದಲೇ ಕೇಂದ್ರ ಪರಿಷತ್ತಿನ ಅಧ್ಯಕ್ಷರು ಕಾರ್ಯಕಾರಿ ಸಮಿತಿಯ ಅನುಮೋದನೆಯೊಂದಿಗೆ, ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಿ, ಆಯಾ ಸ್ಥಾನಗಳಿಗೆ ಚುನಾವಣೆ ನಡೆಸಿಕೊಡಲು ಬೆಂಗಳೂರಿನಲ್ಲಿ ಸೇವೆಯಲ್ಲಿರುವ ಕರ್ನಾಟಕ ಸರ್ಕಾರದ ಹಿರಿಯ ಐ.ಎ.ಎಸ್. ಅಧಿಕಾರಿಯೊಬ್ಬರನ್ನು ಮುಖ್ಯ ಚುನಾವಣಾಧಿಕಾರಿ ಯನ್ನಾಗಿ ನೇಮಕ ಮಾಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳವರಿಗೆ ವಿನಂತಿಸಿ ಕೊಳ್ಳತಕ್ಕದ್ದು

(೩) ಚುನಾವಣೆಗಳು ಮುಂದೂಡಲ್ಪಟ್ಟಾಗ ಅವಧಿ ಮುಗಿದಿದ್ದರೂ ಕೇಂದ್ರ ಪರಿಷತ್ತಿನ ಆಯಾ ಘಟಕಗಳ ಅಧ್ಯಕ್ಷರ, ಕಾರ್ಯಕಾರಿ ಸಮಿತಿಗಳ ಮುಂದುವರಿಕೆ : ನೈಸರ್ಗಿಕ ವಿಕೋಪದಿಂದಾಗಲಿ, ಮಾನವ ನಿಯಂತ್ರಣಕ್ಕೆ ಮೀರಿದ ವಿಪತ್ತಿನಿಂದಾಗಲೀ ಅಥವಾ ನ್ಯಾಯಾಲಯದ / ಸರ್ಕಾರದ ಆದೇಶದಿಂದಾಗಲೀ ಪರಿಷತ್ತಿನ ಚುನಾವಣೆ ಮುಂದೂಡಲ್ಪಟ್ಟಲ್ಲಿ, ಮುಂದೆ ಚುನಾವಣೆ ನಡೆಯುವವರೆಗೆ ಹಾಲಿ ಇರುವ ಕೇಂದ್ರ ಪರಿಷತ್ತಿನ ಹಾಗೂ ಆಯಾ ಘಟಕಗಳ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಗಳೇ ಮುಂದುವರೆಯತಕ್ಕದ್ದು. ಈ ರೀತಿ ಮುಂದುವರಿದ ಅವಧಿ ಆರು ತಿಂಗಳುಗಳಿಗೆ ಮೀರತಕ್ಕದ್ದಲ್ಲ.

(೪) ಅಧ್ಯಕ್ಷರ ಅಧಿಕಾರಾವಧಿ ಪೂರ್ಣಗೊಳ್ಳುವ ಮೊದಲೇ ಕೇಂದ್ರ ಪರಿಷತ್ತಿನ ಅಧ್ಯಕ್ಷ ಸ್ಥಾನ ಯಾವುದೇ ಕಾರಣದಿಂದಾಗಿ ತೆರವಾದಲ್ಲಿ ಇನ್ನುಳಿದ ಅವಧಿಗೆ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರಲ್ಲಿ ಒಬ್ಬರನ್ನು ಹಂಗಾಮಿ

ಅಧ್ಯಕ್ಷರನ್ನಾಗಿ ಕಾರ್ಯಕಾರಿ ಸಮಿತಿಯಲ್ಲಿ ಆಯ್ಕೆ ಮಾಡಿಕೊಳ್ಳತಕ್ಕದ್ದು. ಇದೇ ನಿಯಮ ಹೊರದೇಶ ಘಟಕಗಳನ್ನು ಹೊರತು ಪಡಿಸಿ ಪರಿಷತ್ತಿನ ಉಳಿದೆಲ್ಲಾ ಘಟಕಗಳಿಗೆ ಅನ್ವಯವಾಗತಕ್ಕದ್ದು.

೨೧. ಅಧ್ಯಕ್ಷರ / ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ರಾಜೀನಾಮೆ / ಸ್ಥಾನ ತೆರವು :

(೧) (ಅ) ಕೇಂದ್ರ ಪರಿಷತ್ತಿನ ಅಥವಾ ಇತರ ಯಾವುದೇ ಘಟಕದ ಅಧ್ಯಕ್ಷರು / ಕಾರ್ಯಕಾರಿ ಸಮಿತಿಯ ಸದಸ್ಯರು ತಾವು ಹೊಂದಿರುವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬಯಸಿದಲ್ಲಿ, ತಮ್ಮ ರಾಜೀನಾಮೆ ಪತ್ರವನ್ನು ಆಯಾ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಗೆ ಸಲ್ಲಿಸತಕ್ಕದ್ದು. ಅಧ್ಯಕ್ಷರ ರಾಜೀನಾಮೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರುತ್ತದೆ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ರಾಜೀನಾಮೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಆಯಾ ಘಟಕದ ಅಧ್ಯಕ್ಷರಿಗೆ ಇರುತ್ತದೆ.

(ಆ) ರಾಜೀನಾಮೆ ಸಲ್ಲಿಸಿದ ಅಧ್ಯಕ್ಷರು / ಕಾರ್ಯಕಾರಿ ಸಮಿತಿಯ ಸದಸ್ಯರು ತಮ್ಮ ರಾಜೀನಾಮೆಯನ್ನು ಸಲ್ಲಿಸಿದ ತಾರೀಖಿನಿಂದ ಹದಿನೈದು ದಿನಗಳೊಳಗಾಗಿ ರಾಜೀನಾಮೆಯನ್ನು ವಾಪಸ್ಸು ಪಡೆಯದಿದ್ದಲ್ಲಿ ಅಥವಾ ರಾಜೀನಾಮೆಯು ತಿರಸ್ಕೃತಗೊಳ್ಳದಿದ್ದಲ್ಲಿ ಹದಿನೈದನೇ ದಿನ ಮುಕ್ತಾಯವಾದ ಕೂಡಲೇ ಆ ಅಧ್ಯಕ್ಷರ / ಸದಸ್ಯರ ರಾಜೀನಾಮೆಯು ಅಂಗೀಕರಿಸಲ್ಪಟ್ಟಿದೆ ಎಂದು ಹಾಗೂ ಆ ಸ್ಥಾನವು ತೆರವಾಗಿದೆ ಎಂದೂ ಪರಿಗಣಿಸತಕ್ಕದ್ದು. ಒಂದು ವೇಳೆ ನೀಡಿದ್ದ ರಾಜೀನಾಮೆಯನ್ನು ೧೫ನೇ ದಿನ ಪೂರ್ಣಗೊಳ್ಳುವ ಮೊದಲು ವಾಪಸ್ಸು ಪಡೆದಲ್ಲಿ ಅವರು ತಾವು ಹೊಂದಿರುವ ಸ್ಥಾನಗಳಲ್ಲಿ ಮುಂದುವರೆಯುವರು.

(೨) ತೆರವಾದ ಸ್ಥಾನಕ್ಕೆ ಬೇರೊಬ್ಬರನ್ನು ಸಹ–ಆಯ್ಕೆ (ಕೋ–ಆಪ್ಟ್) ಮಾಡಿಕೊಳ್ಳುವುದು : ರಾಜೀನಾಮೆ ಅಂಗೀಕೃತವಾದ ಅಥವಾ ಬೇರಾವುದೇ ಕಾರಣದಿಂದಾಗಿ ತೆರವಾದ ಸ್ಥಾನಕ್ಕೆ ಉಳಿದ ಅವಧಿಗೆ ಅರ್ಹರಾದ ಬೇರೊಬ್ಬರನ್ನು ಸಹ–ಆಯ್ಕೆ (ಕೋ–ಆಪ್ಟ್) ಮಾಡಿಕೊಳ್ಳುವ ಅಧಿಕಾರವನ್ನು ಆಯಾ ಘಟಕದ ಕಾರ್ಯಕಾರಿ ಸಮಿತಿ ಹೊಂದಿರುತ್ತದೆ. ತೆರವಾದ ಸ್ಥಾನದಲ್ಲಿ ಯಾವ ಜಿಲ್ಲೆ / ತಾಲ್ಲೂಕು / ವರ್ಗದ ವ್ಯಕ್ತಿ ಸದಸ್ಯನಾಗಿದ್ದನೋ ಅದೇ ಜಿಲ್ಲೆ / ತಾಲ್ಲೂಕು / ವರ್ಗಕ್ಕೆ ಸೇರಿದ ವ್ಯಕ್ತಿಯನ್ನೇ ಸಹ–ಆಯ್ಕೆ (ಕೋ–ಆಪ್ಟ್) )ಮಾಡಿಕೊಳ್ಳತಕ್ಕದ್ದು. ಸಹ–ಆಯ್ಕೆ (ಕೋ–ಆಪ್ಟ್) ಮಾಡಿಕೊಂಡ ಮಾಹಿತಿಯನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಆಯಾ ಘಟಕವು ಸಲ್ಲಿಸತಕ್ಕದ್ದು ಮತ್ತು ಅದನ್ನು ಅವರು ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ದಾಖಲಿಸತಕ್ಕದ್ದು.

೨೨. ಕಾರ್ಯಕಾರಿ ಸಮಿತಿಯ ಸಭೆ : (೧) ಕಾರ್ಯಕಾರಿ ಸಮಿತಿಗಳ ಪ್ರಥಮ ಸಭೆ: ಕೇಂದ್ರ ಪರಿಷತ್ತಿನ ಅಧ್ಯಕ್ಷರ ಚುನಾವಣೆಯ ಫಲಿತಾಂಶ ಘೋಷಣೆಯಾದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಚುನಾಯಿತರಾದ ಜಿಲ್ಲಾ, ಗಡಿ ನಾಡು/ರಾಜ್ಯ ಘಟಕಗಳ ಅಧ್ಯಕ್ಷರುಗಳ ಸಭೆಯನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು

ಜರುಗಿಸತಕ್ಕದ್ದು. ಈ ಸಭೆಯ ನಂತರದ ಎರಡು ವಾರಗಳೊಗಾಗಿ ಪ್ರತಿ ಜಿಲ್ಲಾ ಘಟಕದ ಕಾರ್ಯಕಾರಿ ಸಮಿತಿ ಮತ್ತು ತಾಲ್ಲೂಕು ಘಟಕಗಳ ಅಧ್ಯಕ್ಷರುಗಳ ಸಭೆಯನ್ನು ಆಯಾ ಜಿಲ್ಲಾ ಘಟಕದ ಅಧ್ಯಕ್ಷರು ಜರುಗಿಸತಕ್ಕದ್ದು. ಜಿಲ್ಲಾ ಘಟಕದ ಈ ಸಭೆ ಜರುಗಿದ ನಂತರದ ಎರಡು ವಾರಗಳೊಗಾಗಿ ಪ್ರತಿ ತಾಲ್ಲೂಕು ಘಟಕದ ಕಾರ್ಯಕಾರಿ ಸಮಿತಿ ಮತ್ತು ಆಯಾ ತಾಲ್ಲೂಕಿನ ಹೋಬಳಿ ಘಟಕಗಳ ಅಧ್ಯಕ್ಷರುಗಳ ಸಭೆಯನ್ನು ಜರುಗಿಸತಕ್ಕದ್ದು. ಅನಂತರದ ಒಂದು ವಾರದೊಳಗಾಗಿ ಹೋಬಳಿ ಘಟಕಗಳ ಕಾರ್ಯಕಾರಿ ಸಮಿತಿ ಸಭೆಯನ್ನು ಜರುಗಿಸತಕ್ಕದ್ದು.

(೨) ಕಾರ್ಯಕಾರಿ ಸಮಿತಿಗಳು ಕ್ರಿಯಾ ಯೋಜನೆಯನ್ನು ರೂಪಿಸುವುದು : ಈ ಎಲ್ಲಾ ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ಮುಂದಿನ ಒಂದು ವರ್ಷಕ್ಕೆ ಸೀಮಿತಗೊಂಡ ಒಂದು ಸ್ಥೂಲವಾದ ಕ್ರಿಯಾಯೋಜನೆಯನ್ನು ರೂಪಿಸಿ ಕೊಳ್ಳತಕ್ಕದ್ದು. ಆಯಾ ಘಟಕಗಳ ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ಜರುಗುವ ಎಲ್ಲ ಸಭಾ ನಡೆವಳಿಗಳ ಸಂಬಂಧ ವಿವರವಾದ ವರದಿಯನ್ನು ಹೋಬಳಿ ಘಟಕಗಳು ಆಯಾ ತಾಲ್ಲೂಕು, ಜಿಲ್ಲೆ ಮತ್ತು ಕೇಂದ್ರ ಪರಿಷತ್ತಿನ ಅಧ್ಯಕ್ಷರುಗಳಿಗೆ; ತಾಲ್ಲೂಕು ಘಟಕಗಳು ಆಯಾ ಜಿಲ್ಲೆ ಮತ್ತು ಕೇಂದ್ರ ಪರಿಷತ್ತಿನ ಅಧ್ಯಕ್ಷರುಗಳಿಗೆ; ಹಾಗೂ ಜಿಲ್ಲಾ ಮತ್ತು ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಘಟಕಗಳು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ, ತಮ್ಮ ತಮ್ಮ ಕಾರ್ಯಕಾರಿ ಸಮಿತಿ ಸಭೆಗಳು ಜರುಗಿದ ಒಂದು ವಾರದೊಳಗೆ ಸಲ್ಲಿಸತಕ್ಕದ್ದು.

(೩) ಕಾರ್ಯಕಾರಿ ಸಮಿತಿಗಳ ಕನಿಷ್ಠ ಸಂಖ್ಯೆಯ ಸಭೆಗಳು: ಕೇಂದ್ರ ಪರಿಷತ್ತಿನ ಹಾಗೂ ಪ್ರತಿ ಜಿಲ್ಲೆ, ತಾಲ್ಲೂಕು, ಹೋಬಳಿ, ಗಡಿನಾಡು/ರಾಜ್ಯ ಘಟಕಗಳ ಕಾರ್ಯಕಾರಿ ಸಮಿತಿಯು ಒಂದು ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿ ; ಹೊರರಾಜ್ಯ / ಕೇಂದ್ರಾಡಳಿತ ಪ್ರದೇಶ ಘಟಕಗಳ ಕಾರ್ಯಕಾರಿ ಸಮಿತಿಯು ಒಂದು ವರ್ಷದಲ್ಲಿ ಕನಿಷ್ಠ ಮೂರು ಬಾರಿ ; ಹೊರದೇಶ ಘಟಕಗಳ ಕಾರ್ಯಕಾರಿ ಸಮಿತಿಯು ವರ್ಷದಲ್ಲಿ ಒಂದು ಬಾರಿ ಸಭೆಯನ್ನು ನಡೆಸತಕ್ಕದ್ದು. ಅವಶ್ಯವೆನಿಸಿದಲ್ಲಿ ವಿಶೇಷ ಹಾಗೂ ತುರ್ತು ಸಭೆಯನ್ನು ನಡೆಸಲು ಆಯಾ ಘಟಕಗಳ ಅಧ್ಯಕ್ಷರು ಅಧಿಕಾರ ಹೊಂದಿರುತ್ತಾರೆ.

೨೩. ಕಾರ್ಯಕಾರಿ ಸಮಿತಿ ಸಭೆಯ ಸೂಚನಾ ಪತ್ರ : ಘಟಕವಾರು ಕಾರ್ಯಕಾರಿ ಸಮಿತಿ ಸಭೆಯ ಸೂಚನಾ ಪತ್ರವನ್ನು ಆಯಾ ಘಟಕಗಳ ಕಾರ್ಯಕಾರಿ ಸಮಿತಿಯ ಗೌರವ ಕಾರ್ಯದರ್ಶಿ ಸಭೆಯ ದಿನಾಂಕಕ್ಕೆ ಕನಿಷ್ಠ ೦೭ ದಿನಗಳ ಮುಂಚಿತವಾಗಿ ಸಮಿತಿಯ ಸದಸ್ಯರ ಗಮನಕ್ಕೆ ಬರುವಂತೆ ಸೂಚನಾಪತ್ರವನ್ನು ಪರಿಷತ್ತಿನ ಆ್ಯಪ್ / ಸಾಮಾಜಿಕ ಜಾಲತಾಣ / ಪತ್ರದ ಮೂಲಕ ಜಾರಿಗೊಳಿಸಬೇಕು. ಸೂಚನಾಪತ್ರದ ಪ್ರತಿಯನ್ನು ಪರಿಷತ್ತಿನ ಆಯಾ ಘಟಕದ ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಸಭಾ ಸೂಚನಾ ಪತ್ರ ಯಾವುದೇ ಸದಸ್ಯರ ಗಮನಕ್ಕೆ ಬಂದಿರಲಿಲ್ಲ ಎನ್ನುವ ಕಾರಣದಿಂದಾಗಿ ಸಭೆಯನ್ನು ಅಸಿಂಧು ಎಂಬುದಾಗಿ ಪರಿಗಣಿಸತಕ್ಕದ್ದಲ್ಲ.

೨೪. ಕಾರ್ಯಕಾರಿ ಸಮಿತಿ ಸಭೆಯ ಅವಶ್ಯ ಸದಸ್ಯರ ಸಂಖ್ಯೆ (ಕೋರಂ):

(೧) ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಘಟಕಗಳ ಕಾರ್ಯಕಾರಿ ಸಮಿತಿಗಳನ್ನು ಹೊರತುಪಡಿಸಿ ಕೇಂದ್ರ ಪರಿಷತ್ತು ಮತ್ತು ಇತರ ಘಟಕಗಳ ಕಾರ್ಯಕಾರಿ ಸಮಿತಿಯ ಸಭೆಗೆ ಆಯಾ ಸಮಿತಿಯ ಒಟ್ಟು ಸದಸ್ಯರ ಕನಿಷ್ಠ ೨/೩ (ಮೂರನೆಯ ಎರಡು) ಭಾಗದಷ್ಟು ಸದಸ್ಯರು ಹಾಜರಿರತಕ್ಕದ್ದು. ಅದು ಆಯಾ ಸಭೆಗೆ ಅವಶ್ಯ ಸದಸ್ಯರ ಸಂಖ್ಯೆ (ಕೋರಂ) ಆಗುತ್ತದೆ. ಸಭೆ ನಡೆಸಲು ಕನಿಷ್ಠ ಅವಶ್ಯ ಸಂಖ್ಯೆಯ ಸದಸ್ಯರು ಹಾಜರಿಲ್ಲದಿದ್ದಲ್ಲಿ ಅಂತಹ ಸಭೆಯನ್ನು ಒಂದು ಗಂಟೆಯ ಅವಧಿಗೆ ಅಥವಾ ಅಧ್ಯಕ್ಷರ ವಿವೇಚನಾನುಸಾರ ನಿಗದಿಗೊಳಿಸಲಾದ ನಿರ್ದಿಷ್ಟ ಸ್ಥಳ, ದಿನ ಮತ್ತು ಸಮಯಕ್ಕೆ ಮುಂದೂಡಬಹುದು. ಹೀಗೆ ಮುಂದೂಡಲ್ಪಟ್ಟ ಸಭೆಗೆ ಅವಶ್ಯ ಸಂಖ್ಯೆಯ ಸದಸ್ಯರ ಹಾಜರಾತಿ (ಕೋರಂ) ಅವಶ್ಯಕತೆ ಇರುವುದಿಲ್ಲ. ಸೂಚನಾಪತ್ರದಲ್ಲಿ ಇಲ್ಲದ ಯಾವುದೇ ಹೊಸ ವಿಷಯಗಳನ್ನು ಮುಂದೂಡಿದ ಸಭೆಯಲ್ಲಿ ಮಂಡಿಸುವಂತಿಲ್ಲ.

(೨) ಇತರ ಘಟಕಗಳ ಕಾರ್ಯಕಾರಿ ಸಮಿತಿಯ ಸಭೆಗಳ ಕೋರಂ : ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಘಟಕಗಳ ಕಾರ್ಯಕಾರಿ ಸಮಿತಿಗೆ ಅನುಕ್ರಮವಾಗಿ ಅಧ್ಯಕ್ಷರನ್ನೊಳಗೊಂಡಂತೆ ಕೇವಲ ಮೂವರು ಸದಸ್ಯರು ಮಾತ್ರ ಇರುವುದರಿಂದ ಈ ಕಾರ್ಯಕಾರಿ ಸಮಿತಿಗಳ ಪ್ರತಿ ಸಭೆಗೆ ಎಲ್ಲಾ ಸದಸ್ಯರ ಹಾಜರಾತಿ ಇರತಕ್ಕದ್ದು.

೨೫. ಉಪ ಸಮಿತಿಗಳು : ಕೇಂದ್ರ ಪರಿಷತ್ತಿನ ಧ್ಯೇಯೋದ್ದೇಶಗಳ ಅನುಷ್ಠಾನಕ್ಕಾಗಿ ವಿವಿಧ ಕಾರ್ಯಕಲಾಪಗಳನ್ನು ಸುಗಮವಾಗಿ ಹಾಗೂ ಸುಸೂತ್ರವಾಗಿ ನಡೆಸಲು ಅವಶ್ಯಕತೆಗಳಿಗೆ ಅನುಗುಣವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರು ಉಪಸಮಿತಿಗಳನ್ನು ರಚಿಸುವ ಅಧಿಕಾರ ಹೊಂದಿರುತ್ತಾರೆ. ಉಪ ಸಮಿತಿ ಸಭೆಗಳ ನಡೆವಳಿಗಳನ್ನು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಮಂಡಿಸತಕ್ಕದ್ದು.

೨೬. ಸೇವಾ ಸಿಬ್ಬಂದಿ : (೧) ಪರಿಷತ್ತಿನ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಹಾಗೂ ನಿಯಮ–ನಿಬಂಧನೆಗಳ ಪಾಲನೆಗಾಗಿ ಮತ್ತು ದೈನಂದಿನ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅವಶ್ಯವಿರುವ ಸಿಬ್ಬಂದಿಯನ್ನು ಕೇಂದ್ರ ಪರಿಷತ್ತಿನ ಕಛೇರಿಗೆ ನೇಮಕ ಮಾಡಿಕೊಳ್ಳುವ ಅಧಿಕಾರ ಅಧ್ಯಕ್ಷರಿಗೆ ಇರುತ್ತದೆ.

(೨) ಪರಿಷತ್ತಿನ ಸಿಬ್ಬಂದಿಗಳ ವೇತನ, ಬಡ್ತಿ, ಶಿಸ್ತು ಕ್ರಮ : ಪರಿಷತ್ತಿನ ಕಾರ್ಯ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಸಂಕಇ ೨೭೧ ಕಸಧ ೯೪, ಬೆಂಗಳೂರು ದಿನಾಂಕ ೨೪ನೆಯ ಮೇ ೧೯೯೬ರಂತೆ ೬೨ ಹುದ್ದೆಗಳಿಗೆ ಅನುಮತಿ ದೊರೆತಿದ್ದು, ಆಯಾ ಹುದ್ದೆಗಳಿಗೆ ಕರ್ನಾಟಕ ಸರ್ಕಾರದ ಸೇವೆಯಲ್ಲಿನ ತತ್ಸಮಾನ ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ನೀಡುವುದು. ಕಾಲಕಾಲಕ್ಕೆ ವೇತನವನ್ನು ಹೆಚ್ಚಿಸುವ, ಬಡ್ತಿ ನೀಡುವ, ಪರಿಷತ್ತಿನ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಮತ್ತು ದಂಡಿಸುವ ಹಾಗೂ ಕೆಲಸದಿಂದ ವಜಾಗೊಳಿಸುವ

ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರುತ್ತಾರೆ. ಈ ಸಂಬಂಧದ ತಮ್ಮ ಆದೇಶವನ್ನು ಅಧ್ಯಕ್ಷರು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ದಾಖಲಿಸತಕ್ಕದ್ದು.

(೩) ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ : ಕೇಂದ್ರ ಪರಿಷತ್ತಿನ ಸಿಬ್ಬಂದಿಗಳ ನಿರ್ವಹಣೆಗಾಗಿ ಸರ್ಕಾರದ ಅನುಮತಿಯೊಂದಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಕೊಳ್ಳತಕ್ಕದ್ದು. ಆಯ್ಕೆ ನೇಮಕಾತಿ ಪ್ರಾಧಿಕಾರದಲ್ಲಿ ಕೇಂದ್ರ ಪರಿಷತ್ತಿನ ಅಧ್ಯಕ್ಷರು, ಗೌರವ ಕಾರ್ಯದರ್ಶಿಗಳು ಹಾಗೂ ಗೌರವ ಕೋಶಾಧ್ಯಕ್ಷರು ಇರತಕ್ಕದು.

(೪) ಘಟಕಗಳಿಗೆ ಸಿಬ್ಬಂದಿ ನೇಮಕ : ಜಿಲ್ಲಾ, ತಾಲ್ಲೂಕು, ಹೋಬಳಿ, ಗಡಿ ನಾಡು/ ರಾಜ್ಯ, ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಘಟಕಗಳ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ಆಯಾ ಘಟಕಗಳ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅವುಗಳಿಗೆ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅನುಮತಿ ನೀಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ. ಈ ಕುರಿತು ಕೇಂದ್ರ ಪರಿಷತ್ತಿನ ಹಣಕಾಸು ಸಮಿತಿಯ ಅನುಮತಿ ಪಡೆಯುವುದು ಅವಶ್ಯ.

(೫) ಸೇವಾ ನಿಯಮಗಳ ರಚನೆ : ಸಿಬ್ಬಂದಿಗಳ ಸೇವಾ ಷರತ್ತು ನಿಯಂತ್ರಣ ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಪರಿಷತ್ತು ಸೂಕ್ತ ಸೇವಾ ನಿಯಮಾವಳಿಗಳನ್ನು ರಚಿಸತಕ್ಕದ್ದು.

(೬) ಲೆಕ್ಕಪತ್ರ ಅಧೀಕ್ಷಕರ ನೇಮಕ : ಪರಿಷತ್ತಿನ ಲೆಕ್ಕಪತ್ರಗಳ ಉಸ್ತುವಾರಿಯನ್ನು ನಿರ್ವಹಿಸಲು ಕರ್ನಾಟಕ ಸರ್ಕಾರದ ಲೆಕ್ಕಪತ್ರ ಇಲಾಖೆಯ ಒಬ್ಬರು ಲೆಕ್ಕಪತ್ರ ಅಧೀಕ್ಷಕರನ್ನು ಪ್ರತಿ ನಿಯೋಜನೆಯ ಮೇರೆಗೆ ನೇಮಿಸಿಕೊಳ್ಳತಕ್ಕದ್ದು.

೨೭. ತಿದ್ದುಪಡಿಗಳು :(೧) ಉಪ ವಿಧಿಗಳ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಕಾನೂನಾತ್ಮಕವಾದ ಸೂಕ್ತ ಸಲಹೆ-ಸೂಚನೆಗಳನ್ನು ಪರಿಷತ್ತಿಗೆ ನೀಡಲಿಕ್ಕಾಗಿ, ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ, ಕನ್ನಡದಲ್ಲಿ ಗಣನೀಯ ಸಾಧನೆಗೈದ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ಒಳಗೊಂಡಂತೆ ೮ ಜನ ಸದಸ್ಯರ ಒಂದು ತಿದ್ದುಪಡಿ ಸಲಹಾ ಸಮಿತಿಯನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ರಚಿಸತಕ್ಕದ್ದು. ಯಾವ ಧ್ಯೇಯೋದ್ದೇಶ, ನಿಯಮ-ನಿಬಂಧನೆಗಳಿಗೆ ಅಪೇಕ್ಷಿತ ತಿದ್ದುಪಡಿಯನ್ನು ತರಬಯಸಲಾಗುತ್ತದೆಯೋ ಅವುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ, ಕೇಂದ್ರ ಪರಿಷತ್ತಿನ ಅಧ್ಯಕ್ಷರು ತಿದ್ದುಪಡಿ ಸಮಿತಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಒಂದು ಮನವಿ ಪತ್ರವನ್ನು ಕಳಿಸತಕ್ಕದ್ದು.

(೨) ತಿದ್ದುಪಡಿ ಸಮಿತಿಯ ಸಭೆ : ತಿದ್ದುಪಡಿ ಸಮಿತಿಯ ಸಭೆ ಜರುಗಿಸಲು ಎಲ್ಲ ಅನುಕೂಲಗಳನ್ನು ಕೇಂದ್ರ ಪರಿಷತ್ತು ಮಾಡಿಕೊಡತಕ್ಕದ್ದು. ಸಮಿತಿಯ ಅಧ್ಯಕ್ಷರ

**ಹಾಗೂ ಸದಸ್ಯರ ಗೌರವಧನವನ್ನು ನಿಗದಿಗೊಳಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು.**

**(೩) ಉದ್ದೇಶಿತ ತಿದ್ದುಪಡಿಗೆ ಕಾರ್ಯಕಾರಿ ಸಮಿತಿ ಅನುಮೋದನೆ : ತಿದ್ದುಪಡಿ ಸಮಿತಿಯು ತಿದ್ದುಪಡಿಗಳ ಸಂಬಂಧ ತನ್ನ ಸಲಹೆ, ಸೂಚನೆಗಳನ್ನೊಳಗೊಂಡ ವರದಿಯನ್ನು ಸಲ್ಲಿಸಿದ ನಂತರ, ಅದನ್ನು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಿ, ಅದಕ್ಕೆ ೩/೪ (ನಾಲ್ಕನೆಯ ಮೂರರಷ್ಟು) ಭಾಗದ ಸದಸ್ಯರ ಅನುಮೋದನೆಯನ್ನು ಪಡೆಯತಕ್ಕದ್ದು.**

**(೪) ಉದ್ದೇಶಿತ ತಿದ್ದುಪಡಿಗೆ ವಿಶೇಷ ಸಾಮಾನ್ಯ ಸಭೆಯ ಅನುಮೋದನೆ ಹಾಗೂ ನೋಂದಣಿ : ಉದ್ದೇಶಿತ ತಿದ್ದುಪಡಿಗೆ ಅನುಮೋದನೆಯನ್ನು ಪಡೆಯಲಿಕ್ಕಾಗಿ ಕರೆಯಬೇಕಾದ ವಿಶೇಷ ಸಾಮಾನ್ಯ ಸಭೆಯ ದಿನಾಂಕವನ್ನು ನಿಗದಿಗೊಳಿಸಿ, ಆ ದಿನಾಂಕಕ್ಕೆ ೨೧ ದಿನಗಳ ಮುಂಚಿತವಾಗಿ ಉದ್ದೇಶಿತ ತಿದ್ದುಪಡಿಯನ್ನು ಒಳಗೊಂಡ ಸೂಚನಾ ಪತ್ರವನ್ನು ಪರಿಷತ್ತಿನ ಆ್ಯಪ್ / ಸಾಮಾಜಿಕ ಜಾಲತಾಣ / ಪತ್ರದ ಮೂಲಕ, ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಅರ್ಹ ಸದಸ್ಯರ ಗಮನಕ್ಕೆ ತರತಕ್ಕದ್ದು. ಆ ಸಭೆಯಲ್ಲಿ ಹಾಜರಿದ್ದ ಒಟ್ಟು ಸದಸ್ಯರ ೩/೪ (ನಾಲ್ಕನೆಯ ಮೂರರಷ್ಟು) ಸಂಖ್ಯೆಯ ಸದಸ್ಯರು ಬಹುಮತದಿಂದ ತಿದ್ದುಪಡಿಯನ್ನು ಅನುಮೋದಿಸಿದಲ್ಲಿ, ಅನುಮೋದಿತ ತಿದ್ದುಪಡಿಯನ್ನು ೩೦ ದಿನಗಳೊಳಗಾಗಿ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಕೊಳ್ಳತಕ್ಕದ್ದು. ಹೀಗೆ ನೋಂದಣಿಯಾದ ನಂತರವೇ ತಿದ್ದುಪಡಿ ಜಾರಿಗೆ ಬರುತ್ತದೆ.**

೨೮. **ಹಣಕಾಸು ಸಮಿತಿ :** (೧) ಕೇಂದ್ರ ಪರಿಷತ್ತಿನ ಹಣಕಾಸು ನಿರ್ವಹಣೆಯ ಜವಾಬ್ದಾರಿ ಹಣಕಾಸು ಸಮಿತಿಗೆ ಸೇರಿದ್ದಾಗಿರುತ್ತದೆ. ಹಣಕಾಸು ಸಮಿತಿಯ ರಚನೆ ಹಾಗೂ ಕಾರ್ಯವ್ಯಾಪ್ತಿ ಈ ಕೆಳಕಾಣಿಸಿದಂತೆ ಇರತಕ್ಕದ್ದು. **ಆದಾಗ್ಯೂ ಅವಶ್ಯಕತೆ ಇದೆ ಎಂದು ಕಂಡುಬಂದಲ್ಲಿ ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹಣಕಾಸು ಸಮಿತಿಗೆ ಹೆಚ್ಚುವರಿ ಸದಸ್ಯರನ್ನು ಸೇರ್ಪಡೆ ಮಾಡಿಸುವ ಮೂಲಕ ಒಟ್ಟು ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಅಧಿಕಾರ ಹೊಂದಿರುತ್ತಾರೆ. ಈ ಸಂಬಂಧ ತಮ್ಮ ಆದೇಶವನ್ನು ಕಾರ್ಯಕಾರಿ ಸಮಿತಿಯಲ್ಲಿ ದಾಖಲಿಸತಕ್ಕದ್ದು.**

**ಸಮಿತಿ ಅಧ್ಯಕ್ಷರು** – ಕೇಂದ್ರ ಪರಿಷತ್ತಿನ ಅಧ್ಯಕ್ಷರು.............................. ೦೧

**ಸಮಿತಿಯ ಸದಸ್ಯರು :**

(ಅ) ಕೇಂದ್ರ ಪರಿಷತ್ತಿನ ಗೌರವ ಕಾರ್ಯದರ್ಶಿಗಳು........................... ೦೨
ಗೌರವ ಕೋಶಾಧ್ಯಕ್ಷರು .................................................... ೦೧
ಕಾರ್ಯಕಾರಿ ಸಮಿತಿಯ ಇಬ್ಬರು ಸದಸ್ಯರು............................ ೦೨

(ಆ) ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ
ಕಾರ್ಯದರ್ಶಿ ಅಥವಾ ಅವರ ಪ್ರತಿನಿಧಿ.................................. ೦೧

(ಇ) ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ
ಇಲಾಖೆಯ ನಿರ್ದೇಶಕರು ಅಥವಾ ಅವರ ಪ್ರತಿನಿಧಿ................. ೦೧

(ಈ) ಪರಿಷತ್ತಿಗೆ ಸರ್ಕಾರದ ನಿಯೋಜನೆ ಮೇರೆಗೆ
ನೇಮಕಗೊಂಡಿರುವ ಲೆಕ್ಕಪತ್ರ ಅಧೀಕ್ಷಕರು.............................. ೦೧

ಒಟ್ಟು (ಒಂಬತ್ತು) = ೦೯

(೨) ಗೌರವ ಕೋಶಾಧ್ಯಕ್ಷರು ಈ ಸಮಿತಿಯ ಸಂಚಾಲಕರಾಗಿ ಕಾರ್ಯನಿರ್ವಹಿಸತಕ್ಕದ್ದು.

(೩) **ಹಣಕಾಸು ಸಮಿತಿಯ ಅಧಿಕಾರ ಮತ್ತು ಜವಾಬ್ದಾರಿ :**

(ಅ) ವಾರ್ಷಿಕ **ಲೆಕ್ಕಪರಿಶೋಧನಾ ವರದಿ ಮತ್ತು ಹಣಕಾಸು ತಃಖ್ತೆಗಳನ್ನು ಪರಿಶೀಲಿಸಿ ಕಾರ್ಯಕಾರಿ ಸಮಿತಿಯ ಗಮನಕ್ಕೆ ತರುವುದು.**

**(ಆ) ಕಟ್ಟಡಗಳು, ಪ್ರಕಟಣೆಗಳು, ಕಾರ್ಯಕ್ರಮಗಳು, ಹೊಸ ಹುದ್ದೆಗಳ ಸೃಷ್ಟಿ ಹಾಗೂ ಹಣಕಾಸಿಗೆ ಸಂಬಂಧಿಸಿದ ಇನ್ನಿತರೇ ವಿಷಯಗಳನ್ನು ಪರಿಶೀಲಿಸಿ ಕಾರ್ಯಕಾರಿ ಸಮಿತಿ ಸಭೆಯ ಗಮನಕ್ಕೆ ತರುವುದು.**

**(ಇ) ಪರಿಷತ್ತಿನ ಪ್ರತಿ ತಿಂಗಳ ಆದಾಯ ವೆಚ್ಚವನ್ನು ಪರಿಶೀಲಿಸುವುದು ಮತ್ತು ಅದನ್ನು ಕಾರ್ಯಕಾರಿ ಸಮಿತಿಯ ಗಮನಕ್ಕೆ ತರುವುದು.**

**(ಈ) ಕೇಂದ್ರ ಪರಿಷತ್ತಿನ ಅಧ್ಯಕ್ಷರು ವಿದೇಶದಲ್ಲಿರುವವರಿಂದ ಕಾನೂನಿನನ್ವಯ ಸ್ವೀಕರಿಸುವ ದೇಣಿಗೆಯನ್ನು ಅನುಮೋದಿಸುವುದು.**

(೪) ಈ ಸಮಿತಿಯ ಸಭೆಗೆ ಕನಿಷ್ಠ ಐವರು ಸದಸ್ಯರ ಹಾಜರಾತಿ ಇರತಕ್ಕದ್ದು.

**(೫) ಪರಿಷತ್ತಿನ ಹಣಕಾಸು ನಿರ್ವಹಣೆಯ ಸಂಬಂಧವಾಗಿ ಸೂಕ್ತ ಉಪ ನಿಬಂಧನೆಗಳನ್ನು ರಚಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ.**

೨೯. **ಪ್ರಕಟಣಾ ಸಮಿತಿ :** (೧) ಪರಿಷತ್ತಿನ ಗ್ರಂಥ ಪ್ರಕಟಣಾಕಾರ್ಯ, ಪ್ರಕಟಣಾ ಸಮಿತಿಗೆ ಸೇರಿದ್ದಾಗಿರುತ್ತದೆ. ಪ್ರಕಟಣಾ ಸಮಿತಿಯ ರಚನೆ ಮತ್ತು ಕಾರ್ಯವ್ಯಾಪ್ತಿ ಈ ಕೆಳಕಾಣಿಸಿದಂತೆ ಇರತಕ್ಕದ್ದು. **ಆದಾಗ್ಯೂ, ಅವಶ್ಯಕತೆ ಇದೆ ಎಂದು ಕಂಡುಬಂದಲ್ಲಿ ಕೇಂದ್ರ ಪರಿಷತ್ತಿನ ಅಧ್ಯಕ್ಷರು ಪ್ರಕಟಣಾ ಸಮಿತಿಗೆ ಹೆಚ್ಚುವರಿ ಸದಸ್ಯರನ್ನು ಸೇರ್ಪಡಿಸುವ ಮೂಲಕ ಒಟ್ಟು ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಅಧಿಕಾರ ಹೊಂದಿರುತ್ತಾರೆ. ಈ ಸಂಬಂಧ ತಮ್ಮ ಆದೇಶವನ್ನು ಕಾರ್ಯಕಾರಿ ಸಮಿತಿಯಲ್ಲಿ ದಾಖಲಿಸತಕ್ಕದ್ದು.**

**ಸಮಿತಿ ಅಧ್ಯಕ್ಷರು** – ಕೇಂದ್ರ ಪರಿಷತ್ತಿನ ಅಧ್ಯಕ್ಷರು................ ೦೧

**ಸಮಿತಿಯ ಸದಸ್ಯರು :**

(ಅ) ಕೇಂದ್ರ ಪರಿಷತ್ತಿನ ಗೌರವ ಕಾರ್ಯದರ್ಶಿಗಳು........... ೦೨
ಕೇಂದ್ರ ಪರಿಷತ್ತಿನ ಗೌರವ ಕೋಶಾಧ್ಯಕ್ಷರು .............. ೦೧
ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರು........ ೦೧
ಇಬ್ಬರು ಸಾಹಿತಿಗಳು / ವಿಷಯ ತಜ್ಞರು............... ೦೨

| | | |
|---|---|---|
| (ಆ) | ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಅಥವಾ ಅವರ ಪ್ರತಿನಿಧಿ....... | ೦೧ |
| (ಇ) | ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು.................... | ೦೧ |
| (ಈ) | ಸರ್ಕಾರಿ ಮುದ್ರಣ ಇಲಾಖೆಯ ನಿರ್ದೇಶಕರು ಅಥವಾ ಅವರ ಪ್ರತಿನಿಧಿ........................... | ೦೧ |
| (ಉ) | ಸಾರ್ವಜನಿಕ ಮುಖ್ಯ ಗ್ರಂಥಾಲಯದ ನಿರ್ದೇಶಕರು ಅಥವಾ ಅವರ ಪ್ರತಿನಿಧಿ.................................. | ೦೧ |
| (ಊ) | ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷರು........ | ೦೧ |
| (ಋ) | ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷರು.................................... | ೦೧ |
| | ಒಟ್ಟು (ಹದಿಮೂರು) = | ೧೩ |

(೨) ಅಧ್ಯಕ್ಷರು ಆಯ್ಕೆಮಾಡಿದ ಗೌರವ ಕಾರ್ಯದರ್ಶಿಗಳಲ್ಲಿ ಒಬ್ಬರು ಸಮಿತಿಯ ಸಂಚಾಲಕರಾಗಿರುವರು.

(೩) ಪ್ರಕಟಣಾ ಸಮಿತಿಯ ಅಧಿಕಾರ ಮತ್ತು ಜವಾಬ್ದಾರಿ :

(ಅ) ಪರಿಷತ್ತಿನಿಂದ ಪ್ರಕಟಿಸಬಹುದಾದ ಪುಸ್ತಕಗಳನ್ನು ಆಯ್ಕೆಮಾಡಿ ಕಾರ್ಯಕಾರಿ ಸಮಿತಿಯ ಗಮನಕ್ಕೆ ತರುವುದು.

(ಆ) ಪ್ರಕಟಣೆಗೆ ಬಂದ ಹಸ್ತಪ್ರತಿಗಳನ್ನು ಅವಶ್ಯಕತೆ ಇದ್ದಲ್ಲಿ ಸಂಬಂಧಪಟ್ಟ ವಿಷಯತಜ್ಞರ ಪರಿಶೀಲನೆಗೆ ಒಪ್ಪಿಸಿ ಅವರ ಅಭಿಪ್ರಾಯವನ್ನು ಪಡೆಯುವುದು.

(ಇ) ಗ್ರಂಥ ಪ್ರಕಟಣೆ, ಮುದ್ರಣ, ಬೆಲೆ ನಿಗದಿ, ಮಾರಾಟ, ರಿಯಾಯಿತಿ, ವಿತರಣೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ಮಾರ್ಗದರ್ಶಿ ನಿಯಮ ರಚಿಸುವ ಅಧಿಕಾರ ಪ್ರಕಟಣಾ ಸಮಿತಿಗೆ ಇರುತ್ತದೆ.

(೪) ಈ ಸಮಿತಿಯ ಸಭೆಗೆ ಕನಿಷ್ಠ ಏಳು ಸದಸ್ಯರ ಹಾಜರಾತಿ ಕಡ್ಡಾಯವಾಗಿರುತ್ತದೆ.

(೫) ಗ್ರಂಥ ದಾಸೋಹ : (ಅ) ಪರಿಷತ್ತಿನಿಂದ ಪ್ರಕಟಣೆ ಮತ್ತು ಪ್ರಕಾಶನಗೊಳ್ಳುವ ಗ್ರಂಥಗಳ ಮುದ್ರಣ ವೆಚ್ಚದ ಸಂಬಂಧವಾಗಿ, ದಾನಿಗಳಿಂದ 'ಗ್ರಂಥ ದಾಸೋಹ' ಎಂದು ದೇಣಿಗೆ ಸ್ವೀಕರಿಸಲು ಪರಿಷತ್ತಿನ ಅಧ್ಯಕ್ಷರಿಗೆ ಅಧಿಕಾರವಿರತಕ್ಕದ್ದು. ಆಯಾ ಗ್ರಂಥದಲ್ಲಿ ಗ್ರಂಥ ದಾಸೋಹಿಗಳ ಭಾವಚಿತ್ರ ದೊಂದಿಗೆ ಗ್ರಂಥ ದಾಸೋಹ ಉದ್ದೇಶದ ಉಲ್ಲೇಖ ಇರತಕ್ಕದ್ದು.

(ಆ) ಎಷ್ಟು ಪುಟಗಳ; ಎಷ್ಟು ಪ್ರತಿಗಳ ಮುದ್ರಣ ವೆಚ್ಚವಾಗಿ ಎಷ್ಟು ಮೊತ್ತದ ಹಣವನ್ನು ಗ್ರಂಥ ದಾಸೋಹ ಎಂದು ಸ್ವೀಕರಿಸಬೇಕು ಎಂಬ ಬಗ್ಗೆ ಸೂಕ್ತ ನಿಯಮಗಳನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ರಚಿಸಿ, ಅವುಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ಪಡೆದು ಕೊಳ್ಳತಕ್ಕದ್ದು.

(ಇ) ಗ್ರಂಥ ದಾಸೋಹಕ್ಕಾಗಿ ದೊಡ್ಡ ಮೊತ್ತವನ್ನು ಪರಿಷತ್ತಿಗೆ ದೇಣಿಗೆಕೊಟ್ಟು ಅದನ್ನು ಠೇವಣಿಯಾಗಿರಿಸಿ ಅದರ ಮೇಲೆ ಬರುವ ವಾರ್ಷಿಕ ಬಡ್ಡಿಯನ್ನು ಗ್ರಂಥ ಪ್ರಕಟಣೆಗೆ ವಿನಿಯೋಗಿಸಬೇಕು ಎಂಬ ಸದಿಚ್ಛೆಯಿಂದ ಗ್ರಂಥ ದಾಸೋಹವಾಗಿ ದೇಣಿಗೆ ನೀಡಬಯಸುವವ ರಿಂದ ದೇಣಿಗೆಯನ್ನು ಪಡೆಯುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು. ಈ ಸಂಬಂಧವಾಗಿ ಸೂಕ್ತ ನಿಯಮಗಳನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ರಚಿಸಿ, ಅವುಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

೩೦. ವಾರ್ಷಿಕ ಸಾಮಾನ್ಯ ಸಭೆ: (೧) ಪರಿಷತ್ತಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಪ್ರತಿ ವರ್ಷ ಡಿಸೆಂಬರ್ ಮಾಹೆಯ ಮೂವತ್ತೊಂದನೆ ದಿನಾಂಕದ ಒಳಗಾಗಿ ನಡೆಸತಕ್ಕದ್ದು.

(೨) ಪರಿಷತ್ತಿನ ಎಲ್ಲಾ ಆಡಳಿತ ವಿಷಯಗಳಿಗೆ ಸಂಬಂಧಿಸಿದ ಮತ್ತು ಅದರ ಎಲ್ಲಾ ಆಗುಹೋಗುಗಳ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳುವ ಅಧಿಕಾರವು ವಾರ್ಷಿಕ ಸಾಮಾನ್ಯ ಸಭೆಗೆ ಇರುತ್ತದೆ.

(೩) ವಾರ್ಷಿಕ ಸಾಮಾನ್ಯ ಸಭೆಯ ಒಪ್ಪಿಗೆ ಇಲ್ಲದೇ ಪರಿಷತ್ತಿನ ಸ್ಥಿರಾಸ್ತಿಯನ್ನು ಯಾವುದೇ ರೀತಿಯ ವರ್ಗಾವಣೆ, ವಿಲೇವಾರಿ, ಕ್ರಯ, ಆಧಾರ ಮುಂತಾದವುಗಳನ್ನು ಮಾಡತಕ್ಕದ್ದಲ್ಲ.

(೪) ವಾರ್ಷಿಕ ಸಭೆಯಲ್ಲಿ ಕೆಳಕಾಣಿಸಿದ ವಿಷಯಗಳನ್ನು ತೀರ್ಮಾನಿಸತಕ್ಕದ್ದು.

(ಅ) ಹಿಂದಿನ ವಾರ್ಷಿಕ / ವಿಶೇಷ ಸಾಮಾನ್ಯ ಸಭೆಯ ನಡೆವಳಿಗಳನ್ನು ದೃಢೀಕರಿಸುವುದು.

(ಆ) ಲೆಕ್ಕಪರಿಶೋಧಿತವಾದ (ಆಡಿಟ್ ಆದ) ವಾರ್ಷಿಕ ಲೆಕ್ಕದ ವಿವರವನ್ನು ಚರ್ಚಿಸಿ ಅನುಮೋದಿಸುವುದು.

(ಇ) ವಾರ್ಷಿಕ ಆಯವ್ಯಯವನ್ನು ಚರ್ಚಿಸಿ ಅನುಮೋದಿಸುವುದು.

(ಈ) ಮುಂದಿನ ಹಣಕಾಸಿನ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆ ನಿಗದಿಪಡಿಸುವುದು.

(ಉ) ಕಾರ್ಯಕಾರಿ ಸಮಿತಿಯ ನಿರ್ಣಯ / ಗೊತ್ತುವಳಿ ಸರಿ ಇಲ್ಲ ಎಂಬುದಾಗಿ ಸಾಮಾನ್ಯ / ವಿಶೇಷ ಸಭೆಗೆ ಮೇಲ್ಮನವಿಯನ್ನು ಸಲ್ಲಿಸಿದ್ದಲ್ಲಿ, ಅಂತಹ ಮೇಲ್ಮನವಿಗೆ ಸಂಬಂಧಿಸಿದಂತೆ ನಿರ್ಣಯ ತೆಗೆದುಕೊಳ್ಳುವುದು.

(ಊ)ಮುಂದಿನ ವರ್ಷಕ್ಕೆ ಕ್ರಿಯಾಯೋಜನೆಗಳನ್ನು ರೂಪಿಸಿ ಅವುಗಳಿಗೆ ತಗಲುವ ವೆಚ್ಚಕ್ಕೆ ಅನುಮೋದನೆ ನೀಡುವುದು.

(ಋ) ಸದಸ್ಯರ ವಿರುದ್ಧ ಶಿಸ್ತು ವಿಚಾರಣಾ ವರದಿ ಇದ್ದರೆ ಅದಕ್ಕೆ ಅನುಮೋದನೆ ನೀಡುವುದು ಅಥವಾ ವರದಿಯನ್ನು ತಿರಸ್ಕರಿಸುವುದು.

(ಎ) ಮುಂಬರುವ ವರ್ಷಕ್ಕೆ ಕಾರ್ಯಕಾರಿ ಸಮಿತಿಯವರು ತಯಾರಿಸಿದ ಪರಿಷತ್ತಿನ ಕಾರ್ಯಚಟುವಟಿಕೆಗಳ ಯೋಜನೆಯನ್ನು ಯಥಾವತ್ತಾಗಿ ಅಥವಾ ಬದಲಾವಣೆಯೊಂದಿಗೆ ಅನುಮೋದಿಸುವುದು.

(ಏ) ಪರಿಷತ್ತಿನ ಯಾವುದೇ ಸದಸ್ಯ ಅದರ ಕಾರ್ಯಕಲಾಪಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಬಯಸಿದಲ್ಲಿ ವಾರ್ಷಿಕ ಸಾಮಾನ್ಯ ಸಭೆಗೆ ಗೊತ್ತುಪಡಿಸಿರುವ ದಿನಾಂಕಕ್ಕೆ ಕನಿಷ್ಠ ಎರಡು ವಾರಗಳಿಗೆ ಕಡಿಮೆ ಇಲ್ಲದಷ್ಟು ಮುಂಚಿತವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಪತ್ರದ ಮೂಲಕ ವಿಷಯವನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಕಳುಹಿಸಬಹುದು.

(೫) ವಾರ್ಷಿಕ ಸಾಮಾನ್ಯ / ವಿಶೇಷ ಸಾಮಾನ್ಯ ಸಭೆಯ ಸ್ಥಳ : ವಾರ್ಷಿಕ ಸಾಮಾನ್ಯ / ವಿಶೇಷ ಸಾಮಾನ್ಯ ಸಭೆಯನ್ನು ಬೆಂಗಳೂರಿನಲ್ಲಿ ಅಥವಾ ಕಾರ್ಯಕಾರಿ ಸಮಿತಿಯ ವಿವೇಚನೆಯ ಮೇರೆಗೆ ಕರ್ನಾಟಕದ ಯಾವ ಭಾಗದಲ್ಲಾದರೂ ನಡೆಸಬಹುದು.

(೬) ವಾರ್ಷಿಕ / ವಿಶೇಷ ಸಾಮಾನ್ಯ ಸಭೆಯ ಸೂಚನಾ ಪತ್ರ : ಸೂಚನಾ ಪತ್ರವನ್ನು ವಾರ್ಷಿಕ / ವಿಶೇಷ ಸಾಮಾನ್ಯ ಸಭೆಯನ್ನು ನಿಗದಿಗೊಳಿಸಿದ ದಿನಾಂಕಕ್ಕಿಂತ ಕನಿಷ್ಠ ಇಪ್ಪತ್ತೊಂದು ದಿನಗಳ ಮುಂಚಿತವಾಗಿ ಸಾಮಾಜಿಕ ಜಾಲತಾಣ / ಮೊಬೈಲ್ ಆ್ಯಪ್ / ಪತ್ರದ ಮೂಲಕ ಪ್ರಕಟಿಸಿ ಜಾರಿಗೊಳಿಸತಕ್ಕದ್ದು. ಸೂಚನಾಪತ್ರದ ಪ್ರತಿಯನ್ನು ಪರಿಷತ್ತಿನ ಎಲ್ಲಾ ಘಟಕಗಳ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು ಅವಶ್ಯ. ಯಾವುದೇ ಸಂದರ್ಭದಲ್ಲಿ ಯಾವುದೇ ಸದಸ್ಯರಿಗೆ ಸೂಚನಾ ಪತ್ರ ಅವರ ಗಮನಕ್ಕೆ ಬಂದಿರಲಿಲ್ಲ ಎನ್ನುವ ಕಾರಣ ಮಾತ್ರಕ್ಕೆ ಸಭೆಯನ್ನು ಅಸಿಂಧು ಎಂದು ಪರಿಗಣಿಸತಕ್ಕದ್ದಲ್ಲ.

(೭) ವಾರ್ಷಿಕ ಸಾಮಾನ್ಯ ಸಭೆ / ವಿಶೇಷ ಸಾಮಾನ್ಯ ಸಭೆಯ ಕನಿಷ್ಠ ಸದಸ್ಯರ ಸಂಖ್ಯೆ (ಕೋರಂ): ಪ್ರತಿಯೊಂದು ಸಾಮಾನ್ಯ / ವಿಶೇಷ ಸಾಮಾನ್ಯ ಸಭೆಯಲ್ಲಿ ಕನಿಷ್ಠ ೧೦೦೦ ಸದಸ್ಯರಿಗೆ ಕಡಿಮೆ ಇಲ್ಲದಷ್ಟು ಸದಸ್ಯರು ಹಾಜರಿರಬೇಕು. ಸಭೆ ನಡೆಸಲು ಕನಿಷ್ಠ ಅವಶ್ಯ ಸಂಖ್ಯೆ ಇಲ್ಲದಿದ್ದಲ್ಲಿ ಅಂತಹ ಸಭೆಯನ್ನು ಒಂದು ಗಂಟೆ ಅವಧಿಗೆ ಅಥವಾ ಅಧ್ಯಕ್ಷರ ವಿವೇಚನಾನುಸಾರ ನಿರ್ದಿಷ್ಟ ಸ್ಥಳ, ದಿನ ಮತ್ತು ಸಮಯಕ್ಕೆ ಮುಂದೂಡಬಹುದು. ಹೀಗೆ ಮುಂದೂಡಲ್ಪಟ್ಟ ಸಭೆಗೆ ಅವಶ್ಯ ಸಂಖ್ಯೆಯ ಸದಸ್ಯರ ಹಾಜರಾತಿ (ಕೋರಂ) ಅವಶ್ಯಕತೆ ಇರುವುದಿಲ್ಲ. ಸೂಚನಾಪತ್ರದಲ್ಲಿನ ಕಾರ್ಯಸೂಚಿಯಲ್ಲಿ ಇಲ್ಲದ ಯಾವುದೇ ಹೊಸ ವಿಷಯಗಳನ್ನು ಮುಂದೂಡಿದ ಸಭೆಯಲ್ಲಿ ಮಂಡಿಸುವಂತಿಲ್ಲ.

(೮) ವಾರ್ಷಿಕ ಸಾಮಾನ್ಯ / ವಿಶೇಷ ಸಾಮಾನ್ಯ ಸಭೆಯಲ್ಲಿ ಹಾಜರಾಗುವ ಸದಸ್ಯರ ಹಕ್ಕು : ವಾರ್ಷಿಕ ಸಾಮಾನ್ಯ / ವಿಶೇಷ ಸಾಮಾನ್ಯ ಸಭೆಯಲ್ಲಿನ ಎಲ್ಲಾ

ತೀರ್ಮಾನಗಳನ್ನು ಆ ಸಭೆಯಲ್ಲಿ ಭಾಗವಹಿಸಿದ ಸರ್ವಸದಸ್ಯರು ಬಹುಮತದಿಂದ ತೀರ್ಮಾನಿಸತಕ್ಕದ್ದು.

೩೧. ವಿಶೇಷ ಸಾಮಾನ್ಯ ಸಭೆ : (೧) ವಿಶೇಷ ಸಾಮಾನ್ಯ ಸಭೆಯನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಅಥವಾ, ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ೨/೩(ಮೂರನೆಯ ಎರಡರಷ್ಟು) ಸದಸ್ಯರುಗಳ ಲಿಖಿತ ಮನವಿ ಮೇರೆಗೆ ಕರೆಯಬಹುದು. ಅಲ್ಲದೆ, ಪರಿಷತ್ತಿನ ಮತದಾನದ ಹಕ್ಕು ಹೊಂದಿದ ಒಟ್ಟು ಸದಸ್ಯರ ಪೈಕಿ ೧/೧೦ (ಹತ್ತನೆಯ ಒಂದರಷ್ಟು) ಸಂಖ್ಯೆಯ ಅಥವಾ ಕನಿಷ್ಠ ೧ ಸಾವಿರ ಸಂಖ್ಯೆಯ ಅರ್ಹ ಸದಸ್ಯರು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಲಿಖಿತ ಮನವಿಯನ್ನು ಸಲ್ಲಿಸಿದಲ್ಲಿ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು. ಅಂಥ ಸಭೆಯನ್ನು ಕರೆಯಬೇಕೆಂದು ಬಯಸುವ ಕಾರ್ಯಕಾರಿ ಸಮಿತಿಯ / ಪರಿಷತ್ತಿನ ಅರ್ಹ ಸದಸ್ಯರು ಸಭೆ ಕರೆಯಲು ಉದ್ದೇಶವನ್ನು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ತಮ್ಮ ಮನವಿ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕೇಂದ್ರ ಪರಿಷತ್ತಿನ ಅಧ್ಯಕ್ಷರು ಸಭೆಯ ಉದ್ದೇಶ ಹಾಗೂ ಚರ್ಚಿಸಬಯಸುವ ವಿಷಯಗಳನ್ನು ಪರಿಶೀಲಿಸಿ, ತಮ್ಮ ವಿವೇಚನೆಯಲ್ಲಿ ಉದ್ದೇಶಿತ ಸಭೆಯನ್ನು ಕರೆಯುವ ಸಂಬಂಧ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಯನ್ನು ಪಡೆದು, ವಿಶೇಷ ಸಾಮಾನ್ಯ ಸಭೆಯನ್ನು ಮನವಿಪತ್ರ ತಲುಪಿದ ೪೦ (ನಲವತ್ತು) ದಿನಗಳೊಳಗಾಗಿ ಕರೆಯತಕ್ಕದ್ದು.

(೨) ಇಂಥ ಸಭೆಯನ್ನು ಕರೆಯುವ ಅವಶ್ಯಕತೆಯಿಲ್ಲ ಎನ್ನುವುದಕ್ಕೆ ಸಕಾರಣ ಕಂಡುಬಂದಲ್ಲಿ ಕಾರ್ಯಕಾರಿ ಸಮಿತಿಯು ಮನವಿಪತ್ರವನ್ನು ತಿರಸ್ಕರಿಸುವ ಅಧಿಕಾರ ಹೊಂದಿರತಕ್ಕದ್ದು. ತಿರಸ್ಕಾರದ ನಿರ್ಣಯವನ್ನು ಮನವಿದಾರರ ಗಮನಕ್ಕೆ ಜಾಲತಾಣ / ಮೊಬೈಲ್ ಆ್ಯಪ್ /ಪತ್ರದ ಮೂಲಕ ತರತಕ್ಕದ್ದು.

(೩) ಈ ಸಭೆಯ ದಿನಾಂಕಕ್ಕೆ ೨೧ (ಇಪ್ಪತ್ತೊಂದು) ದಿನಗಳ ಮುಂಚಿತವಾಗಿ ಮನವಿ ಪತ್ರದಲ್ಲಿ ಉಲ್ಲೇಖಿಸಲಾದ ಸಭೆಯ ಉದ್ದೇಶ ಹಾಗೂ ಚರ್ಚಿಸಲು ಉದ್ದೇಶಿದ ವಿಷಯಗಳನ್ನೊಳ ಗೊಂಡ ಸೂಚನಾಪತ್ರವನ್ನು ಸಾಮಾಜಿಕ ಜಾಲತಾಣ / ಮೊಬೈಲ್ ಆ್ಯಪ್ / ಪತ್ರದ ಮೂಲಕ ಪ್ರಕಟಿಸಿ ಜಾರಿಗೊಳಿಸತಕ್ಕದ್ದು.

(೪) ಅರ್ಹ ಸದಸ್ಯರ ಕೋರಿಕೆಯ ಮೇರೆಗೆ ಕರೆಯಲಾದ ವಿಶೇಷ ಸಾಮಾನ್ಯ ಸಭೆಗೆ ಅವಶ್ಯ ಸಂಖ್ಯೆಯ ಸದಸ್ಯರು (ಕೋರಂ) ಹಾಜರಾಗದಿದ್ದಲ್ಲಿ ಅಂತಹ ಸಭೆಯನ್ನು ವಿಸರ್ಜಿಸತಕ್ಕದ್ದು.

೩೨. ಕೇಂದ್ರ ಪರಿಷತ್ತು ಹಾಗೂ ಇತರ ಘಟಕಗಳಿಗೆ ಸಂಬಂಧಿಸಿದ ಸಾಮಾನ್ಯ ನಿಯಮಗಳು:
(೧) ಪರಿಷತ್ತಿನ ವಿವಿಧ ಕಾರ್ಯಕಾರಿ ಸಮಿತಿಗಳ ರಚನೆಗೆ ಸಂಬಂಧಿಸಿದ ನಿಯಮಗಳ ಹೊರತಾಗಿ ನೇಮಕ ಮಾಡಿಕೊಂಡ ಸದಸ್ಯರ ಸ್ಥಾನ ಸೃಷ್ಟಿಸಿಕೊಂಡ ಪದಾಧಿಕಾರಿ ಸ್ಥಾನ ಅಸಿಂಧು: (ಅ) ಕೇಂದ್ರ ಪರಿಷತ್ತು, (ಆ) ಜಿಲ್ಲಾ ಘಟಕ, (ಇ) ತಾಲ್ಲೂಕು ಮತ್ತು ಕ್ಷೇತ್ರ ಘಟಕ, (ಈ) ಹೋಬಳಿ ಘಟಕ, (ಉ) ಗಡಿನಾಡು/ರಾಜ್ಯ ಘಟಕ ಹಾಗೂ

(ಊ) ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಘಟಕಗಳ ಕಾರ್ಯಕಾರಿ ಸಮಿತಿಗಳು ಅನುಕ್ರಮವಾಗಿ ನಿಯಮ ೯(೨); ೧೨(೧); ೧೩(೧); ೧೪(೨); ೧೫(೨) ಮತ್ತು ೧೮(೧) ಇವುಗಳ ಅಡಿಯಲ್ಲಿ ಅಸ್ತಿತ್ವಕ್ಕೆ ಬರಲಿದ್ದು, ಅವುಗಳ ಪದಾಧಿಕಾರಿಗಳ ಹಾಗೂ ಸದಸ್ಯರ ವಿವರಗಳನ್ನು ಆಯಾ ನಿಯಮಗಳಲ್ಲಿ ಕೊಡಲಾಗಿದೆ. ಈ ನಿಯಮಗಳಿಗೆ ಹೊರತಾಗಿ ಯಾವುದೇ ಕಾರ್ಯಕಾರಿ ಸಮಿತಿಯಲ್ಲಿ, ಯಾವುದೇ ವರ್ಗದ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಅಥವಾ ಯಾವುದೇ ಪದಾಧಿಕಾರಿ ಸ್ಥಾನವನ್ನು ಸೃಷ್ಟಿಸಿಕೊಳ್ಳುವ ಅಧಿಕಾರ ಕೇಂದ್ರ ಪರಿಷತ್ತಿನ ಮತ್ತು ಆಯಾ ಘಟಕದ ಅಧ್ಯಕ್ಷರಿಗೆ ಇರತಕ್ಕದ್ದಲ್ಲ. ಅಂತಹ ಸದಸ್ಯತ್ವ / ಸ್ಥಾನ ನಿಯಮ ಬಾಹಿರವೆಂದು ಪರಿಗಣಿಸಲ್ಪಟ್ಟು, ಅಸಿಂಧುವಾಗತಕ್ಕದ್ದು. ನಿಯಮಬಾಹಿರವಾಗಿ ಸ್ಥಾನವನ್ನು ಸೃಷ್ಟಿಸಿದವರ / ಸದಸ್ಯರನ್ನು ನೇಮಕ ಮಾಡಿದವರ ವಿರುದ್ಧ ಕಾನೂನು ಕ್ರಮಕೈಗೊಳ್ಳತಕ್ಕದ್ದು.

(೨) ಕಾರ್ಯಕಾರಿ ಸಮಿತಿಯ ಸಭೆಗಳಿಗೆ ವಿಶೇಷ ಆಹ್ವಾನಿತರನ್ನು ಆಹ್ವಾನಿಸುವುದು: ಕೇಂದ್ರ ಪರಿಷತ್ತಿನ ಹಾಗೂ ಇತರ ಘಟಕಗಳ ಕಾರ್ಯ ಚಟುವಟಿಕೆಗಳಿಗೆ ನೆರವಾಗುವ, ಮಾರ್ಗದರ್ಶನ ನೀಡುವ ಗಣ್ಯರನ್ನು, ತಜ್ಞರನ್ನು ಆಯಾ ಕಾರ್ಯಕಾರಿ ಸಮಿತಿಗೆ ಆಹ್ವಾನಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಹಾಗೂ ಆಯಾ ಘಟಕಗಳ ಅಧ್ಯಕ್ಷರುಗಳಿಗೆ ಇರತಕ್ಕದ್ದು. ಅಲ್ಲದೆ, ಆಯಾ ಗಡಿ ನಾಡು/ರಾಜ್ಯ ಘಟಕಗಳಿಗೆ ಕರ್ನಾಟಕದಲ್ಲಿನ ಗಡಿ ಜಿಲ್ಲೆಗಳಿಂದ ಇಬ್ಬರು ಪ್ರತಿನಿಧಿಗಳನ್ನು ವಿಶೇಷ ಆಹ್ವಾನಿತರನ್ನಾಗಿ ಕಾರ್ಯಕಾರಿ ಸಮಿತಿಯ ಸಭೆಗಳಿಗೆ ಆಹ್ವಾನಿಸುವ ಅಧಿಕಾರ ಆಯಾ ಗಡಿರಾಜ್ಯ ಘಟಕದ ಅಧ್ಯಕ್ಷರಿಗೆ ಇರುತ್ತದೆ.

(೩) ಜಿಲ್ಲಾ, ತಾಲ್ಲೂಕು/ಕ್ಷೇತ್ರ, ಹೋಬಳಿ ಮತ್ತು ಗಡಿ ನಾಡು/ರಾಜ್ಯ ಕಾರ್ಯಕಾರಿ ಸಮಿತಿ ರಚನೆ ಮತ್ತು ಪ್ರಕಟಣೆಗೆ ಕೇಂದ್ರ ಪರಿಷತ್ತಿನ ಅಧ್ಯಕ್ಷರ ಅನುಮೋದನೆ :

(ಅ) ಆಯಾ ಘಟಕದ ಅಧ್ಯಕ್ಷರು ಉದ್ದೇಶಿತ ಕಾರ್ಯಕಾರಿ ಸಮಿತಿಗೆ ನಾಮನಿರ್ದೇಶನ ಗೊಳ್ಳಲಿರುವ ಸದಸ್ಯರುಗಳ ವಿವರಗಳನ್ನು ಸಲ್ಲಿಸುವುದು: ಆಯಾ ಘಟಕದ ಅಧ್ಯಕ್ಷರ ಚುನಾವಣಾ ಫಲಿತಾಂಶ ಘೋಷಣೆಯಾದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ, ಉದ್ದೇಶಿತ ಕಾರ್ಯಕಾರಿ ಸಮಿತಿಗೆ ಚುನಾಯಿತ ಹಾಗೂ ನಾಮನಿರ್ದೇಶನಗೊಳ್ಳುವ ಸದಸ್ಯರುಗಳ ವಿವರಗಳನ್ನೊಳಗೊಂಡ ಒಂದು ಪಟ್ಟಿಯನ್ನು ತಯಾರಿಸಿ, ಹೋಬಳಿ ಘಟಕದ ಅಧ್ಯಕ್ಷರು, ತಾಲ್ಲೂಕು ಘಟಕದ ಅಧ್ಯಕ್ಷರ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷರ ಮೂಲಕ; ತಾಲ್ಲೂಕು / ಕ್ಷೇತ್ರ ಘಟಕದ ಅಧ್ಯಕ್ಷರು ಜಿಲ್ಲಾ ಘಟಕದ ಅಧ್ಯಕ್ಷರ ಮೂಲಕ; ಜಿಲ್ಲಾ ಘಟಕದ ಅಧ್ಯಕ್ಷರು ತಮ್ಮ ಪಟ್ಟಿಯನ್ನು ಉಳಿದ ಘಟಕಗಳ ಅದ್ಯಕ್ಷರುಗಳು ತಮಗೆ ಕಳುಹಿಸಿದ ಪಟ್ಟಿಗಳೊಂದಿಗೆ ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಅನುಮೋದನೆಗಾಗಿ ಕಳಿಸತಕ್ಕದ್ದು. ನಾಮನಿರ್ದೇಶನಗೊಳ್ಳಲಿರುವ ಸದಸ್ಯರುಗಳಿಗೆ ಸಂಬಂಧಿಸಿದಂತೆ ಏನೆಲ್ಲ ವಿವರಗಳನ್ನು ಒದಗಿಸುವ ಬಗ್ಗೆ ಒಂದು ನಮೂನೆಯನ್ನು ಸಿದ್ಧಪಡಿಸಿ ಎಲ್ಲ ಘಟಕಗಳ ಅಧ್ಯಕ್ಷರುಗಳಿಗೆ ಕೇಂದ್ರ

ಪರಿಷತ್ತಿನ ಅಧ್ಯಕ್ಷರು ಕಳಿಸತಕ್ಕದ್ದು. ಹೋಬಳಿ ಘಟಕದ ಹಾಗೂ ತಾಲ್ಲೂಕು / ಕ್ಷೇತ್ರ ಘಟಕಗಳ ಅಧ್ಯಕ್ಷರು ತಮ್ಮ ತಮ್ಮ ಕಾರ್ಯಕಾರಿ ಸಮಿತಿಗೆ ನಾಮನಿರ್ದೇಶನಗೊಳ್ಳಲಿರುವ ಸದಸ್ಯರುಗಳ ಪಟ್ಟಿಯನ್ನು ತಯಾರಿಸುವಾಗ, ಜಿಲ್ಲಾಧ್ಯಕ್ಷರೊಂದಿಗೆ ಸಮಾಲೋಚನೆ ಮಾಡತಕ್ಕದ್ದು. ಹಾಗೆಯೇ ಜಿಲ್ಲಾ ಘಟಕದ ಅಧ್ಯಕ್ಷರು ತಮ್ಮ ಘಟಕದ ಕಾರ್ಯಕಾರಿ ಸಮಿತಿಗೆ ನಾಮನಿರ್ದೇಶನಗೊಳ್ಳಲಿರುವ ಸದಸ್ಯರ ಪಟ್ಟಿಯನ್ನು ತಯಾರಿಸುವಾಗ, ಕೇಂದ್ರ ಪರಿಷತ್ತಿನ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸತಕ್ಕದ್ದು.

(ಆ) ಆಯಾ ಘಟಕಗಳ ಕಾರ್ಯಕಾರಿ ಸಮಿತಿಗೆ ನಾಮನಿರ್ದೇಶನಗೊಳ್ಳುವ ಹಾಗೂ ಚುನಾಯಿತ ಸದಸ್ಯರ ಪಟ್ಟಿ ತಮಗೆ ತಲುಪಿದ ಒಂದು ತಿಂಗಳೊಳಗಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರು ಎಲ್ಲ ವಿವರಗಳನ್ನು ಪರಿಶೀಲಿಸಿ, ಎಲ್ಲವೂ ಕ್ರಮಬದ್ಧವಾಗಿವೆ ಎಂದು ಮನಗಂಡಲ್ಲಿ, ತಮ್ಮ ಅನುಮತಿಯನ್ನು ನೀಡತಕ್ಕದು. ಯಾವುದೇ ಘಟಕದ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ಆಕ್ಷೇಪಣಾರ್ಹ ಅಂಶಗಳು ಕಂಡುಬಂದಲ್ಲಿ ಕೇಂದ್ರ ಪರಿಷತ್ತಿನ ಅಧ್ಯಕ್ಷರು, ಸಂಬಂಧಪಟ್ಟ ಘಟಕದ ಅಧ್ಯಕ್ಷರಿಂದ ವಿವರಣೆಯನ್ನು ಪಡೆಯುವ ಅಧಿಕಾರ ಹೊಂದಿರುತ್ತಾರೆ. ವಿವರಣೆ ಪಡೆದ ನಂತರ ಪುನರ್ ಪರಿಶೀಲನೆ ಮಾಡಿ ಮುಂದಿನ ಎರಡು ವಾರಗಳೊಳಗಾಗಿ ತಮ್ಮ ನಿರ್ಣಯವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ನೀಡತಕ್ಕದ್ದು.

(ಇ) ಕೇಂದ್ರ ಪರಿಷತ್ತಿನ ಅಧ್ಯಕ್ಷರ ಅನುಮತಿ ತಲುಪಿದ ನಂತರ ಆಯಾ ಘಟಕದ ಅಧ್ಯಕ್ಷರು ಕಾರ್ಯಕಾರಿ ಸಮಿತಿಯ ಪಟ್ಟಿಯನ್ನು ಪ್ರಕಟಗೊಳಿಸತಕ್ಕದ್ದು.

(ಈ) ಯಾವುದೇ ಘಟಕದ ಕಾರ್ಯಕಾರಿ ಸಮಿತಿಯ ನಾಮನಿರ್ದೇಶನ ಸದಸ್ಯರ ಸ್ಥಾನ ತೆರವಾದಲ್ಲಿ (ಖಾಲಿಯಾದಲ್ಲಿ) ಆ ಸ್ಥಾನಕ್ಕೆ ಸಹ-ಆಯ್ಕೆ (ಕೋ-ಆಪ್ಟ್) ಮಾಡಿಕೊಳ್ಳುವಾಗ ಈ ಮೇಲಿನ ಎಲ್ಲಾ ನಿಯಮಗಳನ್ನು ಪಾಲಿಸತಕ್ಕದ್ದು.

(ಉ) ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಇವುಗಳ ಘಟಕಗಳ ಅಧ್ಯಕ್ಷರು ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರ ಪೂರ್ವಾನುಮತಿ ಪಡೆದ ನಂತರವೇ, ತಮ್ಮ ಘಟಕದ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

(೪) ಆಯಾ ಘಟಕಗಳ ಕಾರ್ಯಕ್ರಮಗಳ ವರದಿಯನ್ನು ಸಲ್ಲಿಸುವ ಬಗ್ಗೆ : ಪರಿಷತ್ತಿನ ವಿವಿಧ ಘಟಕಗಳು ಆಗಾಗ್ಗೆ ಜರುಗಿಸಿದ ಕಾರ್ಯಕ್ರಮಗಳ ವಿವರಗಳನ್ನು ಪ್ರತಿ ಕಾರ್ಯಕ್ರಮದ ನಂತರದ ಹತ್ತು ದಿನಗೊಳಗಾಗಿ ವಿವರವಾದ ವರದಿಯನ್ನು

(ಅ) ಜಿಲ್ಲಾ ಘಟಕದ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ; (ಆ) ತಾಲ್ಲೂಕು / ಕ್ಷೇತ್ರದ ಘಟಕದ ಅಧ್ಯಕ್ಷರು ಆಯಾ ಜಿಲ್ಲಾ ಘಟಕದ ಅಧ್ಯಕ್ಷರ ಮೂಲಕ ಕೇಂದ್ರ ಪರಿಷತ್ತು ಅಧ್ಯಕ್ಷರಿಗೆ; (ಇ) ಹೋಬಳಿ ಘಟಕದ ಅಧ್ಯಕ್ಷರು ತಮ್ಮ ತಾಲ್ಲೂಕು ಘಟಕದ ಅಧ್ಯಕ್ಷರ ಮೂಲಕ ತಮ್ಮ ಜಿಲ್ಲಾ ಘಟಕದ ಅಧ್ಯಕ್ಷರಿಗೆ; ಹಾಗೂ (ಈ) ಪ್ರತಿ ಗಡಿನಾಡು/ರಾಜ್ಯ ಘಟಕ, ಹೊರರಾಜ್ಯ ಘಟಕ, ಕೇಂದ್ರಾಡಳಿತ ಪ್ರದೇಶ ಘಟಕ ಮತ್ತು ಹೊರದೇಶ ಘಟಕಗಳ ಅಧ್ಯಕ್ಷರುಗಳು ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಸಲ್ಲಿಸತಕ್ಕದ್ದು.

(೫) ಪರಿಷತ್ತಿನ ವಿವಿಧ ಘಟಕಗಳಿಂದ ಲೆಕ್ಕಪತ್ರಗಳ ತ್ರೈಮಾಸಿಕ ಮತ್ತು ವಾರ್ಷಿಕ ವರದಿ ಸಲ್ಲಿಕೆ : ಪ್ರತಿ ವರ್ಷದ ಏಪ್ರಿಲ್ ತಿಂಗಳ ಒಂದನೆಯ ತಾರಿಖಿನಿಂದ ಪ್ರತಿ ಮೂರು ತಿಂಗಳಿಗೊಮ್ಮೆ ತ್ರೈಮಾಸಿಕವಾಗಿ ಹಾಗೂ ಹಣಕಾಸು ವರ್ಷಾಂತ್ಯದ ನಂತರ ಆಯಾ ವರ್ಷದ ಮೇ ತಿಂಗಳ ಕೊನೆಯೊಳಗಾಗಿ ಹಿಂದಿನ ವರ್ಷದ ಅವಧಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಸನ್ನದು ಲೆಕ್ಕಿಗರಿಂದ (ಚಾರ್ಟರ್ಡ್ ಅಕೌಂಟೆಂಟ್ ಅವರಿಂದ) ಲೆಕ್ಕಪರಿಶೋಧನೆ ಮಾಡಿಸಿ ಲೆಕ್ಕಪರಿಶೋಧಕರ ವರದಿಯೊಂದಿಗೆ ಹಣಕಾಸು ತಃಖ್ತೆ, ಮೂಲ ರಸೀತಿ, ಓಚರ್‌ಗಳನ್ನು ಲಗತ್ತಿಸಿದ ವಿವರಗಳನ್ನು – (ಅ) ಜಿಲ್ಲಾ ಘಟಕದ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ, (ಆ) ತಾಲ್ಲೂಕು / ಕ್ಷೇತ್ರ ಘಟಕದ ಅಧ್ಯಕ್ಷರು ಜಿಲ್ಲಾ ಘಟಕದ ಅಧ್ಯಕ್ಷರ ಮೂಲಕ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ; (ಇ) ಹೋಬಳಿ ಘಟಕದ ಅಧ್ಯಕ್ಷರು ಆಯಾ ತಾಲ್ಲೂಕು ಘಟಕದ ಅಧ್ಯಕ್ಷರ ಮೂಲಕ ಜಿಲ್ಲಾ ಘಟಕ ಅಧ್ಯಕ್ಷರಿಗೆ ಹಾಗೂ (ಈ) ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಘಟಕ ಮತ್ತು ಹೊರದೇಶ ಘಟಕಗಳ ಅಧ್ಯಕ್ಷರುಗಳು ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ತಲುಪಿಸತಕ್ಕದ್ದು.

(೬) ಪರಿಷತ್ತಿನ ಸದಸ್ಯತ್ವದ ರದ್ದತಿಯ ಪರಿಣಾಮ : ಪರಿಷತ್ತಿನ ಯಾವುದೇ ವರ್ಗದ ಸದಸ್ಯನ, ಸದಸ್ಯ ಸಂಸ್ಥೆಯ ಸದಸ್ಯತ್ವ ಯಾವುದೇ ಕಾರಣದಿಂದಾಗಿ ರದ್ದಾದ ಪಕ್ಷದಲ್ಲಿ ಅಂತಹ ವ್ಯಕ್ತಿ ಅಥವಾ ಸಂಸ್ಥೆಯ ಪ್ರತಿನಿಧಿ ಯಾವುದೇ ಘಟಕದ ಪದಾಧಿಕಾರಿ ಅಥವಾ ಕಾರ್ಯಕಾರಿ ಸಮಿತಿಯ ಅಥವಾ ಯಾವುದೇ ಸಮಿತಿ / ಉಪಸಮಿತಿಯ ಸದಸ್ಯತ್ವ ಸ್ಥಾನವನ್ನು ಹೊಂದಿದ್ದರೆ, ಆ ಸ್ಥಾನವು ಕೂಡ ರದ್ದಾಗುತ್ತದೆ.

(೭) ನಾಮ ನಿರ್ದೇಶನಗೊಳ್ಳುವವರು ಆಯಾ ಘಟಕದ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಮತದಾರರಾಗಿರ ತಕ್ಕದ್ದು : ಯಾವುದೇ ಜಿಲ್ಲೆ, ತಾಲ್ಲೂಕು / ಕ್ಷೇತ್ರ, ಹೋಬಳಿ, ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಘಟಕಗಳ ಅಧ್ಯಕ್ಷರ, ಕಾರ್ಯಕಾರಿ ಸಮಿತಿಯ ಸದಸ್ಯ ಅಥವಾ ಪದಾಧಿಕಾರಿಗಳ ಸ್ಥಾನಕ್ಕೆ ನಾಮನಿರ್ದೇಶನಗೊಳ್ಳಲು ಅರ್ಹರಾಗಬೇಕಾದ ವ್ಯಕ್ತಿಗಳು ಆಯಾ ಜಿಲ್ಲೆ,

ತಾಲ್ಲೂಕು / ಕ್ಷೇತ್ರ, ಹೋಬಳಿ, ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಘಟಕಗಳ ಭೌಗೋಳಿಕ ಕ್ಷೇತ್ರದಲ್ಲಿ ವಾಸಿಸುವ ಪರಿಷತ್ತಿನ ಅರ್ಹ ಮತದಾರರಾಗಿರತಕ್ಕದ್ದು.

(೮) ಪರಿಷತ್ತಿನ ವಿವಿಧ ಘಟಕಗಳ ಕೇಂದ್ರ ಕಛೇರಿಯ ಸ್ಥಾನ :

(ಅ) ಕರ್ನಾಟಕದಲ್ಲಿಯ ವಿವಿಧ ಘಟಕಗಳ ಕೇಂದ್ರ ಕಛೇರಿಯು ಆಯಾ ಜಿಲ್ಲೆ, ತಾಲ್ಲೂಕು / ಕ್ಷೇತ್ರ ಮತ್ತು ಹೋಬಳಿಗಳ ಕೇಂದ್ರ ಸ್ಥಾನದಲ್ಲಿ ಇರತಕ್ಕದ್ದು.

(ಆ) ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಹಾಗೂ ಹೊರದೇಶಗಳ ಘಟಕಗಳಿಗೆ ಸಂಬಂಧಿಸಿದಂತೆ ಆಯಾ ಘಟಕದ ಕೇಂದ್ರ ಕಛೇರಿಯ ಸ್ಥಳವನ್ನು ನಿರ್ಣಯಿಸುವುದು ಆಯಾ ಘಟಕದ ಕಾರ್ಯಕಾರಿ ಸಮಿತಿಯ ವಿವೇಚನೆಗೆ ಬಿಡಲಾಗಿದೆ.

(ಇ) ಪರಿಷತ್ತಿನ ಘಟಕಗಳ ಕಛೇರಿಯ ಸಮಯ : ಘಟಕಗಳ ಕಛೇರಿಯ ಸಮಯವನ್ನು ಆಗಾಗ್ಗೆ ಸಂದರ್ಭಾನುಸಾರ ಆಯಾ ಘಟಕದ ಕಾರ್ಯಕಾರಿ ಸಮಿತಿಯ ನಡೆವಳಿಯ ಮೂಲಕ ನಿಗದಿಗೊಳಿಸತಕ್ಕದ್ದು ಹಾಗೂ ಅಂತಹ ಸಮಯವನ್ನು ಘಟಕಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು.

(೯) ಪರಿಷತ್ತಿನ ವಿವಿಧ ಘಟಕಗಳ ಹಣಕಾಸಿನ ವ್ಯವಹಾರ : ಪರಿಷತ್ತಿನ ವಿವಿಧ ಘಟಕಗಳ ಆಸ್ತಿ, ದೇಣಿಗೆ ಸಂಗ್ರಹ, ದತ್ತಿ ಸ್ವೀಕಾರ, ಠೇವಣಿ, ಬ್ಯಾಂಕ್ ವ್ಯವಹಾರ ಮುಂತಾದವುಗಳೆಲ್ಲ ಪರಿಷತ್ತಿನ ಧ್ಯೇಯೋದ್ದೇಶಗಳಿಗೆ, ನಿಯಮ ನಿಬಂಧನೆಗಳಿಗೆ ಮತ್ತು ಕೇಂದ್ರ ಪರಿಷತ್ತಿನ ಮಾರ್ಗಸೂಚಿ ನೀತಿ ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು.

(೧೦) ಪರಿಷತ್ತಿನ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರಿಗೆ ಇರಬೇಕಾದ ಅರ್ಹತೆ : ಯಾವುದೇ ಜಿಲ್ಲೆ, ತಾಲ್ಲೂಕು / ಕ್ಷೇತ್ರ, ಹೋಬಳಿ, ಗಡಿ ನಾಡು/ರಾಜ್ಯ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ವ್ಯಕ್ತಿ ಅದೇ ಜಿಲ್ಲೆ, ತಾಲ್ಲೂಕು / ಕ್ಷೇತ್ರ, ಹೋಬಳಿ, ಗಡಿ ನಾಡು/ರಾಜ್ಯ ಘಟಕದ ಅಂತಿಮ ಮತದಾರರ ಪಟ್ಟಿಯಲ್ಲಿ ಹೆಸರುಳ್ಳ ಅರ್ಹ ಮತದಾರನಾಗಿರಬೇಕಲ್ಲದೇ ಚುನಾವಣೆಗೆ ಸ್ಪರ್ಧಿಸಲು ಇರಬೇಕಾದ ಅರ್ಹತೆಗೆ ಸಂಬಂಧಿಸಿದ ಇತರ ನಿಯಮ, ನಿಬಂಧನೆಗಳಿಗೂ ಒಳಪಟ್ಟಿರತಕ್ಕದ್ದು.

(೧೧) ಕಾರ್ಯಕಾರಿ ಸಮಿತಿಯ ಅಧ್ಯಕ್ಷರ/ಸದಸ್ಯರ ಸ್ಥಾನ ತೆರವಾಗಿದ್ದಾಗ ಆ ಸಮಿತಿಯ ನಿರ್ಣಯಗಳು : ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯನ್ನೊಳಗೊಂಡಂತೆ ಯಾವುದೇ ಘಟಕದ ಕಾರ್ಯಕಾರಿ ಸಮಿತಿಯ ಸದಸ್ಯನ ಅಥವಾ ಅಧ್ಯಕ್ಷರ ಸ್ಥಾನ ಯಾವುದೇ ಕಾರಣದಿಂದಾಗಿ ತೆರವಾದಾಗ ಅಂತಹ ಸದಸ್ಯನ ಅಥವಾ ಅಧ್ಯಕ್ಷರ ಸ್ಥಾನಕ್ಕೆ ಬೇರೊಬ್ಬ ಅರ್ಹ ವ್ಯಕ್ತಿಯನ್ನು ಸಹ–ಆಯ್ಕೆ (ಕೋ ಆಪ್ಟ್) ಮಾಡಿಕೊಳ್ಳುವವರೆಗೆ ಆಯಾ ಕಾರ್ಯಕಾರಿ ಸಮಿತಿಯು ನಿಯಮಗಳಾನುಸಾರ ತೆಗೆದುಕೊಳ್ಳುವ ನಿರ್ಣಯಗಳನ್ನು ಸಿಂಧು ಎಂದು ಪರಿಗಣಿಸತಕ್ಕದು.

೩೩. **ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ :** (೧) ಸಾಮಾನ್ಯವಾಗಿ ಪ್ರತಿವರ್ಷ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಡಿಸತಕ್ಕದ್ದು.

(೨) ಯಾವುದೇ ಒಂದು ಸ್ಥಳದಲ್ಲಿ ಸಮ್ಮೇಳನ ಏರ್ಪಡಿಸಬೇಕಾದಾಗ ಕೇಂದ್ರ ಪರಿಷತ್ತು ಆಯಾ ಜಿಲ್ಲಾ ಘಟಕದ ಜವಾಬ್ದಾರಿಯಲ್ಲಿ **ಆಯಾ ಜಿಲ್ಲಾಡಳಿತದ ಸಹಕಾರವನ್ನು ಪಡೆಯತಕ್ಕದ್ದು.**

(೩) **ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ, ಹೊರದೇಶ ಘಟಕಗಳಲ್ಲಿ ಸಮ್ಮೇಳನವನ್ನು ಆಯಾ ಘಟಕಗಳ ಸಹಕಾರದೊಂದಿಗೆ** ಕೇಂದ್ರ ಪರಿಷತ್ತು ನೇರವಾಗಿ ಏರ್ಪಡಿಸತಕ್ಕದ್ದು.

(೪) ಸಮ್ಮೇಳನ ನಡೆಯುವ ಸ್ಥಳದಲ್ಲಿ ಸ್ವಾಗತ ಸಮಿತಿ ರಚನೆ ಆಗತಕ್ಕದ್ದು. **ಆ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸ್ವಾಗತ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು.** ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ಸ್ವಾಗತ ಸಮಿತಿಯ ಕೋಶಾಧ್ಯಕ್ಷರಾಗಿ, ಜಿಲ್ಲೆಯ ಘಟಕದ ಅಧ್ಯಕ್ಷರು ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಆ ಘಟಕದ ಕಾರ್ಯಕಾರಿ ಸಮಿತಿಯ ಇತರ ಸದಸ್ಯರು ಸ್ವಾಗತ ಸಮಿತಿಯ ಸದಸ್ಯರಾಗಿರತಕ್ಕದ್ದು.

(೫) ಆಯಾ ವರ್ಷದ ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡುವ ಹಾಗೂ ಸಮ್ಮೇಳನ ನಡೆಯುವ ವರ್ಷ ಮತ್ತು ಜಿಲ್ಲೆಯನ್ನು ನಿರ್ಧರಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಇರುತ್ತದೆ. ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗುವವರು ಪರಿಷತ್ತಿನ ಸದಸ್ಯರಾಗಿರಬೇಕು.

(೬) **ಸಮ್ಮೇಳನ ನಡೆಸಲು ಕೈಗೊಳ್ಳಬೇಕಾದ ಯುಕ್ತ ಕ್ರಮಗಳ ಬಗ್ಗೆ ಮಾರ್ಗದರ್ಶಿ ಸೂಚನೆಗಳನ್ನು ಹೊರಡಿಸುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರುತ್ತಾರೆ.**

(೭) **ಸಮ್ಮೇಳನವನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯ ಸೌಕರ್ಯಗಳ ವ್ಯವಸ್ಥೆಗಾಗಿ ಜಿಲ್ಲಾಡಳಿತ ಮತ್ತು ಸರ್ಕಾರದ ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವ ಹೊಣೆಗಾರಿಕೆ ಜಿಲ್ಲಾ ಘಟಕದ ಅಧ್ಯಕ್ಷರದ್ದಾಗಿರುತ್ತದೆ.**

(೮) **ಜಿಲ್ಲೆಗಳ ಸರ್ವತೋಮುಖ ಅಭಿವೃದ್ಧಿಗಾಗಿ, ಸಾಹಿತಿಗಳು, ಕಲಾವಿದರನ್ನು ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಪೂರ್ವಸಿದ್ಧತೆಗಾಗಿ ಮುಂದಿನ ಸಮ್ಮೇಳನಗಳನ್ನು ಆಯೋಜಿಸಬಹುದಾದ ಜಿಲ್ಲೆಗಳನ್ನು ಗುರುತಿಸಿ ಮುಂಚಿತವಾಗಿ ಘೋಷಿಸುವ ಅಧಿಕಾರ ಕೇಂದ್ರ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.**

(೯) **ಸಮ್ಮೇಳನದ ರೂಪುರೇಷೆಗಳನ್ನು ಸಿದ್ಧಪಡಿಸಲು, ಸಮ್ಮೇಳನದಲ್ಲಿ ಚರ್ಚೆಗೆ ಬರುವ ವಿಷಯಗಳು, ಗೋಷ್ಠಿಗಳು, ಸಂವಾದ ಮತ್ತು ಸಂಪನ್ಮೂಲ ವ್ಯಕ್ತಿಗಳ ಆಯ್ಕೆಗಾಗಿ ಸಲಹಾ ಸಮಿತಿ ರಚಿಸುವುದಕ್ಕೆ, ಸಮ್ಮೇಳನಕ್ಕೆ ಆಹ್ವಾನಿಸಲಾಗುವ ಗಣ್ಯರ ಆಯ್ಕೆಗೆ ಹಾಗೂ ಸಮ್ಮೇಳನದ ಇತರ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸೂಕ್ತ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು.**

**ಇದೇ ನಿಯಾಮವಳಿ ಜಿಲ್ಲೆ, ತಾಲ್ಲೂಕು, ಹೋಬಳಿ, ಗಡಿನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ, ಹೊರದೇಶಗಳ ಘಟಕಗಳ ಸಮ್ಮೇಳನಗಳಿಗೂ ಅನ್ವಯವಾಗುವುದು.**

(೧೦) ಯಾವುದೇ ಸಂದರ್ಭದಲ್ಲಾಗಲೀ ಅಥವಾ ಯಾವುದೇ ಕಾರಣದಿಂದಾಗಲೀ ನಿರ್ಧರಿತ ಸ್ಥಳದಲ್ಲಿ ಸಮ್ಮೇಳನವನ್ನು ಜರುಗಿಸಲಾಗದಿದ್ದರೆ ಅಂತಹ ಸನ್ನಿವೇಶ ಗಳಲ್ಲಿ ಪರ್ಯಾಯ ಏರ್ಪಾಟು ಮಾಡಿ ಸಮ್ಮೇಳನವನ್ನು ನೆರವೇರಿಸುವುದಕ್ಕೆ ಅಥವಾ ಮುಂದೂಡುವುದಕ್ಕೆ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಅಧಿಕಾರವಿರುತ್ತದೆ.

(೧೧) **ವಿಷಯ ನಿರ್ಧಾರಕ ಸಮಿತಿ :** ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ಮಂಡಿಸಲಾಗುವ ನಿರ್ಣಯಗಳ ಬಗ್ಗೆ ನಿರ್ಧರಿಸುವುದಕ್ಕಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ವಿಷಯ ನಿರ್ಧಾರಕ ಸಮಿತಿಯನ್ನು ರಚಿಸತಕ್ಕದ್ದು. ಮತ್ತು ಆ ಸಮಿತಿಯಲ್ಲಿ ಈ ಕೆಳಕಾಣಿಸಿದವರು **ಸದಸ್ಯರಾಗಿ ಇರತಕ್ಕದ್ದು.**

(ಅ) ಸಮ್ಮೇಳನದ ಅಧ್ಯಕ್ಷರು

(ಆ) ಸಮ್ಮೇಳನದಲ್ಲಿ ಭಾಗವಹಿಸಿರುವ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರು.

(ಇ) ಸಮ್ಮೇಳನಕ್ಕೆ ಆಗಮಿಸಿರುವ ಹಿಂದಿನ ಸಮ್ಮೇಳನಗಳ ಅಧ್ಯಕ್ಷರು

(ಈ) ಸ್ವಾಗತ ಸಮಿತಿಯ ಅಧ್ಯಕ್ಷರು

(ಉ) ಕೇಂದ್ರ ಪರಿಷತ್ತಿನ ಅಧ್ಯಕ್ಷರು ಸೂಚಿಸುವ ಪರಿಷತ್ತಿನ ಸದಸ್ಯರುಗಳಲ್ಲಿ ಇಬ್ಬರು ಪ್ರತಿನಿಧಿಗಳು

೩೪. **ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆದಾಯದ ಮೂಲ :**

(೧) **ಸಮ್ಮೇಳನದ ಪ್ರತಿನಿಧಿ ಶುಲ್ಕ: ಸಮ್ಮೇಳನದಲ್ಲಿ ಭಾಗವಹಿಸುವ ಸದಸ್ಯರಿಂದ / ಇತರರಿಂದ ಸಂಗ್ರಹಿಸಲಾಗುವ ಒಟ್ಟಾರೆ ಶುಲ್ಕದಲ್ಲಿ ಪರಿಷತ್ತಿನ ನಿಯಮ ನಿಬಂಧನೆಗಳನುಸಾರ ಖರ್ಚು ಮಾಡಲಾಗಿ, ಉಳಿಯುವ ಮೊತ್ತವನ್ನು ಕೇಂದ್ರ ಪರಿಷತ್ತಿಗೆ ಕಳುಹಿಸತಕ್ಕದ್ದು.**

(೨) ಸಮ್ಮೇಳನದ ಹಣಕಾಸಿನ ವ್ಯವಹಾರಕ್ಕಾಗಿ ಒಂದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಖಾತೆ ತೆರೆದು ಸ್ವಾಗತ ಸಮಿತಿಯ ಕೋಶಾಧ್ಯಕ್ಷರು (ಜಿಲ್ಲಾಧಿಕಾರಿಗಳು) ಮತ್ತು ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು(ಆಯಾ ಜಿಲ್ಲಾ ಘಟಕದ ಅಧ್ಯಕ್ಷರು) ಜಂಟಿಯಾಗಿ ವ್ಯವಹರಿಸತಕ್ಕದ್ದು. ಚೆಕ್ಕುಗಳಿಗೆ ಜಂಟಿ ಸಹಿ ಕಡ್ಡಾಯ.

(೩) ಸಮ್ಮೇಳನದ ಲೆಕ್ಕಪತ್ರಗಳನ್ನು ಸ್ವಾಗತಸಮಿತಿ ಲೆಕ್ಕಪರಿಶೋಧನೆ (ಆಡಿಟ್)ಮಾಡಿಸಿ, ಸಮ್ಮೇಳನಕ್ಕೆ ಖರ್ಚು ಮಾಡಲಾಗಿ ಉಳಿದ ಮೊತ್ತವನ್ನು ಕೇಂದ್ರ ಪರಿಷತ್ತಿನ ಬ್ಯಾಂಕ್ ಖಾತೆಗೆ ಜಮಾ ಮಾಡಿ ಕೇಂದ್ರ ಪರಿಷತ್ತಿನ ಕಚೇರಿಗೆ ಮಾಹಿತಿ ಸಲ್ಲಿಸತಕ್ಕದ್ದು. **ಈ ಮೊತ್ತವನ್ನು ಕೇಂದ್ರ ಪರಿಷತ್ತು ಆ ಜಿಲ್ಲಾ ಘಟಕದ ಅಭಿವೃದ್ಧಿಗಾಗಿ ವೆಚ್ಚ ಮಾಡಬಹುದು.**

(೪) ಕೇಂದ್ರ ಪರಿಷತ್ತು ನೇರವಾಗಿ ನಡೆಸಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲೆಕ್ಕಪತ್ರಗಳ ಪರಿಶೋಧನೆ(ಆಡಿಟ್) ಮಾಡಿಸಿ, **ಖರ್ಚಾಗದೇ ಉಳಿದ ಮೊತ್ತವನ್ನು ಪರಿಷತ್ತಿನ ಕಾರ್ಯಚಟುವಟಿಕೆಗಳಿಗಾಗಿ ವಿನಿಯೋಗಿಸಬಹುದು.**

(೫) **ಸಮ್ಮೇಳನಗಳ ಆದಾಯ–ವೆಚ್ಚಗಳಿಗೆ ಸಂಬಂಧಿಸಿದಂತೆ ಸೂಕ್ತ ನಿರ್ದೇಶನಗಳನ್ನು ಜಿಲ್ಲಾ ಘಟಕಕ್ಕೆ ನೀಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ.**

೩೫. **ಮಾಹಿತಿ ಹಕ್ಕು ಅಧಿನಿಯಮ ೨೦೦೫ ಅನ್ವಯ : ಪರಿಷತ್ತಿನ ಕಾರ್ಯಚಟುವಟಿಕೆಗಳ ಬಗ್ಗೆ ವಿವರಣೆಯನ್ನು ಪರಿಷತ್ತಿನ ಸದಸ್ಯರು ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಪಡೆಯಬಹುದು. ಸಾರ್ವಜನಿಕ ಮಾಹಿತಿ ಅಧಿಕಾರಿ, ಮೇಲ್ಮನವಿಯ ಪ್ರಾಧಿಕಾರವನ್ನು ಔಚಿತ್ಯಕ್ಕೆ ಅನುಗುಣವಾಗಿ, ಮಾಹಿತಿ ಹಕ್ಕು ಅಧಿನಿಯಮ ೨೦೦೫ರ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರತಕ್ಕದ್ದು.**

೩೬. **ಹಣಕಾಸಿನ ಮತ್ತು ಇತರ ವಿಷಯಗಳು :** (೧) ಪರಿಷತ್ತಿಗೆ ಆಸ್ತಿಯನ್ನು ಕೂಡಿಸುವ, ಅದರ ಆಸ್ತಿಯನ್ನು ರೂಢಿಸುವ, ಅಡವು ಮಾಡುವ, ವಿಲೇ ಮಾಡುವ ಅಧಿಕಾರ ಸಾಮಾನ್ಯ ಸಭೆಗೆ ಇರತಕ್ಕದ್ದು.

(೨) ಪರಿಷತ್ತಿನ ಆಸ್ತಿಯನ್ನು ಬಾಡಿಗೆಗೆ ಕೊಡುವ ಮತ್ತು ಯಾವುದೇ ಆಸ್ತಿಯನ್ನು ಪರಿಷತ್ತು ಬಾಡಿಗೆಗೆ ಪಡೆಯುವ ಅಧಿಕಾರವು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.

(೩) ಪರಿಷತ್ತಿನ ಆಸ್ತಿಗಳ ಕ್ರಯ, ವಿಕ್ರಯ, ಭೋಗ್ಯ, ಅಡವು, ಬಾಡಿಗೆ ಸಂಬಂಧದ ಪತ್ರಗಳಿಗೆ ಪರಿಷತ್ತಿನ ಪರವಾಗಿ ಸಹಿಮಾಡುವ ಅಧಿಕಾರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು ಮತ್ತು ಇಂತಹ ಪತ್ರಗಳನ್ನು ನೋಂದಣಿ ಮಾಡಿಸುವುದಕ್ಕೆ ಪರಿಷತ್ತಿನ ಅಧ್ಯಕ್ಷರು ಅಥವಾ ಅವರಿಂದ ಅಧಿಕಾರ ಪಡೆದ ಒಬ್ಬ ಗೌರವ ಕಾರ್ಯದರ್ಶಿ ಪರಿಷತ್ತಿನ ಪರವಾಗಿ ರುಜುವನ್ನು ಹಾಕಿ ಪರಿಷತ್ತಿನ ಮುದ್ರೆಯನ್ನೊತ್ತುವ ಕಾರ್ಯವನ್ನು ನಿರ್ವಹಿಸಬಹುದು.

(೪) **ಬ್ಯಾಂಕ್ ವ್ಯವಹಾರ : (ಅ) ಕೇಂದ್ರ ಪರಿಷತ್ತಿನ ಹೆಸರಿನಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ ಅಥವಾ ಒಂದು ಅಥವಾ ಹೆಚ್ಚಿನ ರಾಷ್ಟ್ರೀಕೃತ ಹಾಗೂ ಅನುಸೂಚಿತ (ಷೆಡ್ಯೂಲ್) ಬ್ಯಾಂಕುಗಳಲ್ಲಿ ಉಳಿತಾಯ ಅಥವಾ ಚಾಲ್ತಿ ಅಥವಾ ಪರಿಷತ್ತಿನ "ಸ್ಥಾಯಿ ನಿಧಿಯ" ಠೇವಣಿ ಖಾತೆಯನ್ನೊಳಗೊಂಡಂತೆ ಇನ್ನಾವುದೇ ವಿಧದ ಖಾತೆಗಳನ್ನು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅನುಮೋದನೆಯೊಂದಿಗೆ ತೆರೆಯಬಹುದು.**

(ಆ) **ಪರಿಷತ್ತಿನ ಅಭಿವೃದ್ಧಿಗಾಗಿ ಬ್ಯಾಂಕುಗಳಿಂದ ಅಥವಾ ಹಣಕಾಸು ಸಂಸ್ಥೆಗಳಿಂದ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅನುಮೋದನೆಯೊಂದಿಗೆ ಪರಿಷತ್ತಿನ ಹೆಸರಿನಲ್ಲಿ ಸಾಲ ಪಡೆಯುವ ಅಧಿಕಾರ ಕೇಂದ್ರ ಪರಿಷತ್ತಿಗೆ ಇರುತ್ತದೆ.**

(ಇ) ಬ್ಯಾಂಕ್ ಖಾತೆಗಳ ನಿರ್ವಹಣೆಯಲ್ಲಿ ಯಾವುದೇ ಖಾತೆಯಿಂದ ಹಣ ಹಿಂತೆಗೆದುಕೊಳ್ಳುವ ಸಂದರ್ಭ ಅಥವಾ ಯಾವುದೇ ವ್ಯಕ್ತಿಗೆ / ಸಂಸ್ಥೆಗೆ ಹಣ ಪಾವತಿಸುವ ಸಂದರ್ಭದಲ್ಲಿ ಬ್ಯಾಂಕ್ ಚೆಕ್ಕುಗಳಿಗೆ ಕೇಂದ್ರ ಪರಿಷತ್ತಿನ

ಅಧ್ಯಕ್ಷರ ಹಾಗೂ ಗೌರವ ಕೋಶಾಧ್ಯಕ್ಷರ ಜಂಟಿ ಸಹಿಗಳು ಅಥವಾ ಅಧ್ಯಕ್ಷರಿಂದ ಅಧಿಕಾರ ಪಡೆದ ಗೌರವ ಕಾರ್ಯದರ್ಶಿಯ ಹಾಗೂ ಗೌರವ ಕೋಶಾಧ್ಯಕ್ಷರ ಜಂಟಿ ಸಹಿಗಳು ಇರುವುದು ಕಡ್ಡಾಯ.

**(ಈ) ಜಿಲ್ಲೆ, ತಾಲ್ಲೂಕು, ಹೋಬಳಿ, ಗಡಿರಾಜ್ಯ, ಹೊರರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ – ಈ ಎಲ್ಲಾ ಘಟಕಗಳಿಗೆ ಸಂಬಂಧಿಸಿದಂತೆ ಪ್ರತಿ ಘಟಕವು ರಾಷ್ಟ್ರೀಕೃತ ಬ್ಯಾಂಕ್ ಅಥವಾ ಅನುಸೂಚಿತ (ಷೆಡ್ಯೂಲ್) ಬ್ಯಾಂಕ್ ಈ ಎರಡರಲ್ಲಿ ಒಂದು ಬ್ಯಾಂಕಿನಲ್ಲಿ ಮಾತ್ರ ತನ್ನ ಎಲ್ಲ ರೀತಿಯ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಒಂದೇ ಒಂದು ಖಾತೆಯನ್ನು ಆಯಾ ಘಟಕದ ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರಿನಲ್ಲಿ, ಅಂದರೆ "ಕನ್ನಡ ಸಾಹಿತ್ಯ ಪರಿಷತ್ತು...........ಜಿಲ್ಲಾ ಘಟಕ"; "ಕನ್ನಡ ಸಾಹಿತ್ಯ ಪರಿಷತ್ತು......... ತಾಲ್ಲೂಕು ಘಟಕ; "ಕನ್ನಡ ಸಾಹಿತ್ಯ ಪರಿಷತ್ತು.........................ಹೋಬಳಿ ಘಟಕ";**

**"ಕನ್ನಡ ಸಾಹಿತ್ಯ ಪರಿಷತ್ತು ............................ಗಡಿನಾಡು/ರಾಜ್ಯ ಘಟಕ"**

**"ಕನ್ನಡ ಸಾಹಿತ್ಯ ಪರಿಷತ್ತು ......................... ಹೊರರಾಜ್ಯ ಘಟಕ"**

**"ಕನ್ನಡ ಸಾಹಿತ್ಯ ಪರಿಷತ್ತು...................... ಕೇಂದ್ರಾಡಳಿತ ಪ್ರದೇಶ ಘಟಕ"**

**ಎಂಬುದಾಗಿ ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ಪಡೆದುಕೊಂಡು ತೆರೆಯತಕ್ಕದ್ದು. ಆ ಖಾತೆಯಲ್ಲಿಯ ಚೆಕ್ಕುಗಳಿಗೆ ಸಹಿ ಮಾಡುವುದು ಸೇರಿದಂತೆ, ಇತರ ಎಲ್ಲಾ ರೀತಿಯ ವ್ಯವಹಾರಗಳಿಗೆ ಘಟಕದ ಅಧ್ಯಕ್ಷರ ಮತ್ತು ಗೌರವ ಕೋಶಾಧ್ಯಕ್ಷರ ಅಥವಾ ಅಧ್ಯಕ್ಷರಿಂದ ಅಧಿಕಾರ ಪಡೆದ ಗೌರವ ಕಾರ್ಯದರ್ಶಿ ಮತ್ತು ಗೌರವ ಕೋಶಾಧ್ಯಕ್ಷರ ಜಂಟಿ ಸಹಿಗಳು ಇರತಕ್ಕದ್ದು. ಯಾವುದೇ ಮೊತ್ತವನ್ನು ಠೇವಣಿ ಇಡಬೇಕಾದ ಸಂದರ್ಭದಲ್ಲಿ ಅದೇ ಬ್ಯಾಂಕಿನಲ್ಲಿ ಇಡತಕ್ಕದ್ದು.**

(ಋ) ಪರಿಷತ್ತಿನ ಎಲ್ಲ ವಿಧದ ಹಣಕಾಸು ವ್ಯವಹಾರಗಳು ೧೯೬೧ರ ವರಮಾನ ತೆರಿಗೆ ಅಧಿನಿಯಮಕ್ಕೆ ಒಳಪಟ್ಟಿರತಕ್ಕದ್ದು.

**(ೠ) ಸ್ಥಾಯಿನಿಧಿ : ಪರಿಷತ್ತು ಸ್ಥಾಯಿನಿಧಿಯನ್ನು ಸ್ಥಾಪಿಸಿ, ಅದನ್ನು ಒಂದು ಅಥವಾ ಹೆಚ್ಚು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿಯಾಗಿ ಇರಿಸತಕ್ಕದ್ದು. ಪರಿಷತ್ತಿನ ಸದಸ್ಯರ ಸದಸ್ಯತ್ವ ಶುಲ್ಕವಲ್ಲದೇ, ಬೇರಾವುದೇ ಮೂಲದಿಂದ ಪರಿಷತ್ತಿಗೆ ಹೆಚ್ಚಿನ ಮೊತ್ತದ ಆದಾಯ ಬಂದಲ್ಲಿ ಅದನ್ನು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆದುಕೊಂಡು ಸ್ಥಾಯಿನಿಧಿಗೆ ಸೇರಿಸತಕ್ಕದ್ದು. ಈ ಸಂಬಂಧದಲ್ಲಿ ವರಮಾನ ತೆರಿಗೆ ನಿಯಮಗಳನ್ನು ಅನುಸರಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ವಾರ್ಷಿಕ ಅಥವಾ ವಿಶೇಷ ಸಾಮಾನ್ಯ ಸಭೆಯ ನಿರ್ಣಯವಿಲ್ಲದೇ ಸ್ಥಾಯಿನಿಧಿಯ ಹಣವನ್ನು ಬಳಸತಕ್ಕದ್ದಲ್ಲ. ಆದರೆ ಅದರ ಮೇಲೆ ಬರುವ ಬಡ್ಡಿ ಹಣವನ್ನು ಮಾತ್ರ ಪರಿಷತ್ತಿನ ಕಾರ್ಯಚಟುವಟಿಕೆಗಳಿಗಾಗಿ ವಿನಿಯೋಗಿಸಬಹುದು.**

**೩೭. ಕೇಂದ್ರ ಪರಿಷತ್ತಿನ ಮಾರ್ಗದರ್ಶಿ ಸಮಿತಿ : (೧) ಪರಿಷತ್ತಿನ ಸರ್ವತೋಮುಖ ಅಭಿವೃದ್ಧಿಗಾಗಿ ಹಾಗೂ ಅದರ ಎಲ್ಲ ವಿಧದ ಕಾರ್ಯಕ್ರಮಗಳ ಯಶಸ್ಸಿಗಾಗಿ ಪರಿಷತ್ತಿಗೆ**

ಸೂಕ್ತ ಸಲಹೆ, ಸೂಚನೆಗಳನ್ನು ಕೊಡುತ್ತಾ, ಮಾರ್ಗದರ್ಶನ ನೀಡಲು ರಾಜ್ಯಮಟ್ಟದಲ್ಲಿ ತಜ್ಞರನ್ನು, ಗಣ್ಯರನ್ನು, ಹಿರಿಯ ಸಾಹಿತಿಗಳನ್ನು, ವಿಶ್ವವಿದ್ಯಾಲಯಗಳ ಕುಲಪತಿಗಳನ್ನು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು, ವಿವಿಧ ಸರ್ಕಾರಿ ಇಲಾಖೆಗಳ ಮುಖ್ಯಸ್ಥರನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಸಾಧಕರನ್ನು ಒಳಗೊಂಡ ಒಂದು ಮಾರ್ಗದರ್ಶಿ ಸಮಿತಿಯನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ರಚಿಸತಕ್ಕದ್ದು.

(೨) ಕೇಂದ್ರ ಪರಿಷತ್ತಿಗೆ ಸಂಬಂಧಿಸಿದ ಇಂತಹ ಸಮಿತಿ ವರ್ಷದಲ್ಲಿ ಎರಡು ಬಾರಿ (ಪ್ರತಿ ಆರು ತಿಂಗಳಿಗೆ ಒಂದು ಬಾರಿಯಂತೆ, ಅವಶ್ಯಕತೆ ಇದ್ದಾಗ ವಿಶೇಷ ಸಭೆ ಕರೆಯುವುದು) ಸಭೆ ಸೇರಿ, ಹಿಂದಿನ ಆರು ತಿಂಗಳುಗಳ ಅವಧಿಯಲ್ಲಿನ ಪರಿಷತ್ತಿನ ಕಾರ್ಯಕಲಾಪಗಳನ್ನು ಪರಿಶೀಲಿಸಿ, ಮುಂದಿನ ಅವಧಿಗಾಗಿ ಸೂಕ್ತ ಮಾರ್ಗದರ್ಶನ ಮಾಡತಕ್ಕದ್ದು.

(೩) ಈ ಸಮಿತಿಯು ಸೂಚಿಸಿದ ಮಾರ್ಗದರ್ಶಿ ಸಲಹೆಗಳನ್ನು ಕಾರ್ಯಕಾರಿ ಸಮಿತಿ ಪರಿಗಣಿಸ ತಕ್ಕದ್ದು.

(೪) ಮಾರ್ಗದರ್ಶಿ ಸಮಿತಿಯ ಒಟ್ಟು ಸದಸ್ಯರ ಸಂಖ್ಯೆ ಎಷ್ಟು ಇರಬೇಕು ಎಂಬುದನ್ನು ಮತ್ತು ಆ ಸಂಖ್ಯೆಗೆ ಅನುಗುಣವಾಗಿ ವಿವಿಧ ವರ್ಗಗಳ ತಜ್ಞ, ಗಣ್ಯ ವ್ಯಕ್ತಿಗಳನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರತಕ್ಕದ್ದು.

(೫) ಮಾರ್ಗದರ್ಶಿ ಸಮಿತಿ ಈ ಕೆಳಕಾಣಿಸಿದ ವರ್ಗಗಳ ಸದಸ್ಯರುಗಳನ್ನು ಹೊಂದಿರತಕ್ಕದ್ದು.

| | | |
|---|---|---|
| ೧. | ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಕುಲಪತಿಯವರು (ಪದನಿಮಿತ್ತ) | ೦೧ |
| ೨. | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ ಇದರ ಕುಲಪತಿಯವರು (ಪದನಿಮಿತ್ತ) | ೦೧ |
| ೩. | ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಕಲೆ ವಿಶ್ವವಿದ್ಯಾಲಯ, ಮೈಸೂರು ಇದರ ಕುಲಪತಿಯವರು (ಪದನಿಮಿತ್ತ) | ೦೧ |
| ೪. | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇದರ ಕುಲಪತಿಯವರು (ಪದನಿಮಿತ್ತ) | ೦೧ |
| ೫. | ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು (ಪದನಿಮಿತ್ತ) | ೦೧ |
| ೬. | ಕರ್ನಾಟಕ ಗಡಿ ಪ್ರದೇಶಗಳ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು (ಪದನಿಮಿತ್ತ) | ೦೧ |
| ೭. | ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯದ ಪ್ರಧಾನ ಕಾರ್ಯದರ್ಶಿಗಳು/ ಮುಖ್ಯಸ್ಥರು (ಪದನಿಮಿತ್ತ) | ೦೧ |
| ೮. | ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು (ಪದನಿಮಿತ್ತ) | ೦೧ |
| ೯. | ಪದವಿಪೂರ್ವ ಶಿಕ್ಷಣ ಮಂಡಳಿಯ ಆಯುಕ್ತರು(ಪದನಿಮಿತ್ತ) | ೦೧ |
| ೧೦. | ಕಾಲೇಜು ಶಿಕ್ಷಣ / ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರು (ಪದನಿಮಿತ್ತ) | ೦೧ |
| ೧೧. | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಅಧ್ಯಕ್ಷರು (ಪದನಿಮಿತ್ತ) | ೦೧ |
| ೧೨. | ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷರು (ಪದನಿಮಿತ್ತ) | ೦೧ |
| ೧೩. | ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಇದರ ಅಧ್ಯಕ್ಷರು (ಪದನಿಮಿತ್ತ) | ೦೧ |

(೬) ಜಿಲ್ಲಾ ಘಟಕಕ್ಕೆ ಮಾರ್ಗದರ್ಶಿ ಸಮಿತಿ : ಜಿಲ್ಲಾ ಘಟಕದ ಸರ್ವತೋಮುಖ ಅಭಿವೃದ್ಧಿಗಾಗಿ ಹಾಗೂ ಅದರ ಎಲ್ಲ ವಿಧದ ಕಾರ್ಯಕ್ರಮಗಳ ಯಶಸ್ಸಿಗಾಗಿ ಪರಿಷತ್ತಿಗೆ ಸೂಕ್ತ ಸಲಹೆ, ಸೂಚನೆಗಳನ್ನು ಕೊಡುತ್ತಾ, ಮಾರ್ಗದರ್ಶನ ನೀಡಲು ಜಿಲ್ಲಾಮಟ್ಟದಲ್ಲಿ ತಜ್ಞರನ್ನು, ಗಣ್ಯರನ್ನು, ಹಿರಿಯ ಸಾಹಿತಿಗಳನ್ನು, ವಿಶ್ವವಿದ್ಯಾಲಯಗಳ ಕುಲಪತಿಗಳನ್ನು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು, ವಿವಿಧ ಸರ್ಕಾರಿ ಇಲಾಖೆಗಳ ಮುಖ್ಯಸ್ಥರನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಸಾಧಕರನ್ನು ಒಳಗೊಂಡ ಒಂದು ಮಾರ್ಗದರ್ಶಿ ಸಮಿತಿಯನ್ನು ಜಿಲ್ಲಾ ಘಟಕದ ಅಧ್ಯಕ್ಷರು ರಚಿಸತಕ್ಕದ್ದು. ಈ ಸಮಿತಿಯ ಸಭೆಯನ್ನು ಜಿಲ್ಲಾ ಘಟಕದ ಅಧ್ಯಕ್ಷರ ವಿವೇಚನಾ ಮೇರೆಗೆ ಸಭೆಯನ್ನು ಕರೆಯಬಹುದು. ಇಂತಹ ಸಭೆಯಲ್ಲಿ ಸೂಚಿಸಲಾದ ಮಾರ್ಗದರ್ಶಿ ಸಲಹೆಗಳನ್ನು ಘಟಕದ ಕಾರ್ಯಕಾರಿ ಸಮಿತಿ ಪರಿಗಣಿಸತಕ್ಕದ್ದು. ಇಂತಹ ಸಮಿತಿಗೆ ಎಷ್ಟು ಸಂಖ್ಯೆಯ ಸದಸ್ಯರು ಇರಬೇಕು ಮತ್ತು ಯಾವ ಯಾವ ವರ್ಗಗಳ ತಜ್ಞರು, ಗಣ್ಯರು ಇರಬೇಕು ಎಂಬುದನ್ನು ನಿರ್ಣಯಿಸುವ ಅಧಿಕಾರ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಇರತಕ್ಕದ್ದು.


(೭) ತಾಲ್ಲೂಕು ಘಟಕಕ್ಕೆ ಮಾರ್ಗದರ್ಶಿ ಸಮಿತಿ : ತಾಲ್ಲೂಕು ಘಟಕದ ಸರ್ವತೋಮುಖ ಅಭಿವೃದ್ಧಿಗಾಗಿ ಹಾಗೂ ಅದರ ಎಲ್ಲ ವಿಧದ ಕಾರ್ಯಕ್ರಮಗಳ ಯಶಸ್ಸಿಗಾಗಿ ಪರಿಷತ್ತಿಗೆ ಸೂಕ್ತ ಸಲಹೆ, ಸೂಚನೆಗಳನ್ನು ನೀಡುತ್ತ, ಮಾರ್ಗದರ್ಶನ ಮಾಡಲು ತಾಲ್ಲೂಕು ಮಟ್ಟದಲ್ಲಿ ತಜ್ಞರನ್ನು, ಗಣ್ಯರನ್ನು, ಹಿರಿಯ ಸಾಹಿತಿಗಳನ್ನು, ವಿಶ್ವವಿದ್ಯಾಲಯಗಳ ಕುಲಪತಿಗಳನ್ನು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು, ವಿವಿಧ ಸರ್ಕಾರಿ ಇಲಾಖೆಗಳ ಮುಖ್ಯಸ್ಥರನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಸಾಧಕರನ್ನು ಒಳಗೊಂಡ ಒಂದು ಮಾರ್ಗದರ್ಶಿ ಸಮಿತಿಯನ್ನು ತಾಲ್ಲೂಕು ಘಟಕದ ಅಧ್ಯಕ್ಷರು ರಚಿಸತಕ್ಕದ್ದು. ಈ ಸಮಿತಿಯ ಸಭೆಯನ್ನು ತಾಲ್ಲೂಕು ಘಟಕದ ಅಧ್ಯಕ್ಷರ ವಿವೇಚನೆಯ ಮೇರೆಗೆ ಕರೆಯಬಹುದು. ಇಂತಹ ಸಭೆಯಲ್ಲಿ ಸೂಚಿಸಲಾದ ಮಾರ್ಗದರ್ಶಿ ಸಲಹೆಗಳನ್ನು ಘಟಕದ ಕಾರ್ಯಕಾರಿ ಸಮಿತಿ ಪರಿಗಣಿಸತಕ್ಕದ್ದು. ಇಂತಹ ಸಮಿತಿಗೆ ಎಷ್ಟು ಸಂಖ್ಯೆಯ ಸದಸ್ಯರು ಇರಬೇಕು ಮತ್ತು ಯಾವ ಯಾವ ವರ್ಗಗಳ ತಜ್ಞರು, ಗಣ್ಯರು ಇರಬೇಕು ಎಂಬುದನ್ನು ನಿರ್ಣಯಿಸುವ ಅಧಿಕಾರ ತಾಲ್ಲೂಕು ಘಟಕದ ಅಧ್ಯಕ್ಷರಿಗೆ ಇರತಕ್ಕದ್ದು.

೩೮. ಅವಕಾಶಗಳು : (ಅ) ಪರಿಷತ್ತಿನ ಉದ್ದೇಶಗಳ ಈಡೇರಿಕೆಗಾಗಿ ಹಾಗೂ ವಿಶ್ವಸ್ಥ ಪತ್ರ (ಟ್ರಸ್ಟ್ ಡೀಡ್) ಸ್ಥಾಪಿಸಲು ಕಲಂ ೨(೧೫), ೧೧, ೧೨, ೧೩ ಮತ್ತು ೮೦(ಜಿ) ೧೯೬೧ರ ಆದಾಯ ತೆರಿಗೆ ಕಾಯ್ದೆಯ ಪ್ರಕಾರ ಪರಿಷತ್ತಿಗೆ ಅನುಕೂಲವಾಗುವಂತೆ ಅಳವಡಿಸಿ ಕೊಳ್ಳತಕ್ಕದ್ದು. ಈ ಬಗ್ಗೆ ಆದಾಯ ತೆರಿಗೆ ಇಲಾಖೆಯಿಂದ ವಿನಾಯಿತಿಯನ್ನು ಪಡೆಯುವುದು.

(ಆ) ಆದಾಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಮೇಲ್ಕಂಡ ೩೮ (ಅ) ರ ಅನುಗುಣ ವಾಗಿ ಪರಿಷತ್ತಿನ ಮೂಲಸ್ವರೂಪವನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.

* * *

# ನಿಬಂಧನೆ ತಿದ್ದುಪಡಿ ಸಲಹಾ ಸಮಿತಿ



**ನ್ಯಾಯಮೂರ್ತಿ ಅರಳಿ ನಾಗರಾಜ, ಗಂಗಾವತಿ**
ಅಧ್ಯಕ್ಷರು, ವಿಶ್ರಾಂತ ನ್ಯಾಯಾಧೀಶರು
ಕರ್ನಾಟಕ ಉಚ್ಚ ನ್ಯಾಯಾಲಯ, ಗದಗ

## ಸಮಿತಿ ಸದಸ್ಯರುಗಳು



**ಶ್ರೀ ಬಿ. ಶಿವಲಿಂಗೇಗೌಡ**
ಪ್ರಧಾನ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು (ನಿವೃತ್ತ)
ಬೆಂಗಳೂರು



**ಶ್ರೀ ಜಿ.ಎಂ. ಗಂಗಾಂಧರಸ್ವಾಮಿ**
ಕೇಂದ್ರ ಚುನಾವಣಾಧಿಕಾರಿಗಳು
ಕ.ಸಾ.ಪ., ಬೆಂಗಳೂರು



**ಶ್ರೀ ಎಸ್.ಟಿ. ಮೋಹನ್ ರಾಜು**
ಕೇಂದ್ರ ವಿಶೇಷ
ಚುನಾವಣಾಧಿಕಾರಿಗಳು,
ಕ.ಸಾ.ಪ. ಬೆಂಗಳೂರು



**ಡಾ. ಎಚ್.ಎಸ್. ಮುದ್ದೇಗೌಡ**
ಮಾಜಿ ಜಿಲ್ಲಾಧ್ಯಕ್ಷರು
ಮಂಡ್ಯ ಜಿಲ್ಲಾ ಕ.ಸಾ.ಪ.



**ಶ್ರೀ ಅಶ್ವತ್ತಯ್ಯ**
ಸಹಕಾರ ಸಂಘಗಳ ಸಹಾಯಕ
ನಿಬಂಧಕರು (ನಿವೃತ್ತ) ಬೆಂಗಳೂರು



**ಶ್ರೀ ಪಂಪಯ್ಯ ಸ್ವಾಮಿ ಸಾಲಿಮಠ**
ಮಾಜಿ ಸದಸ್ಯರು, ಕಸಾಪ
ಗ್ರಂಥಭಂಡಾರ ಸಲಹಾ ಸಮಿತಿ
ಸಿಂಧನೂರು



**ಶ್ರೀ ಸಿ.ವಿ. ಸುಧೀಂದ್ರ**
ವಕೀಲರು, ಬೆಂಗಳೂರು



**ಡಾ. ಲಿಂಗರಾಜ ಅಂಗಡಿ**
ಅಧ್ಯಕ್ಷರು, ಧಾರವಾಡ ಜಿಲ್ಲಾ ಕ.ಸಾ.ಪ.



**ಶ್ರೀ ರವಿಕುಮಾರ ಚಾಮಲಾಪುರ**
ಅಧ್ಯಕ್ಷರು, ಮಂಡ್ಯ ಜಿಲ್ಲಾ ಕ.ಸಾ.ಪ.



**ಶ್ರೀ ಆರ್.ಪಿ. ರವಿಶಂಕರ್**
ಸಹಕಾರ ತಜ್ಞರು, ಬೆಂಗಳೂರು

## ಕನ್ನಡ ಸಾಹಿತ್ಯ ಪರಿಷತ್ತು ಪದಾಧಿಕಾರಿಗಳು



**ನಾಡೋಜ ಡಾ. ಮಹೇಶ ಜೋಶಿ**
ಅಧ್ಯಕ್ಷರು



**ನೇ.ಭ. ರಾಮಲಿಂಗಶೆಟ್ಟಿ**
ಗೌರವ ಕಾರ್ಯದರ್ಶಿ



**ಬಿ.ಎಂ. ಪಟೇಲ್‌ಪಾಂಡು**
ಗೌರವ ಕೋಶಾಧ್ಯಕ್ಷರು